2012

JANUARY 'TO" DECEMBER

ಭಾನುವಾರ
30ನೇ ಡಿಸೆಂಬರ್ 2012
ಪ್ರಜಾವಾಣಿ
Y 3



ಮೈಸೂರಿನ ರಂಗಾಯಣದ ವನರಂಗದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ರೈತಾಪಿ ಪರಂಪರೆಯ [illegible] ಕರ್ನಾಟಕ ರಾಜ್ಯ [illegible] ಅಕಾಡೆಮಿ [illegible] ಅಧ್ಯಕ್ಷ ಡಿ.ಬಿ.ಮುಟ್ಟಪ್ಪ [illegible] ಸನ್ಮಾನಿಸಲಾಯಿತು. ರಂಗಾಯಣ [illegible] ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜಿ.ಸುರೇಶ್‌ಗೌಡ ಇದ್ದಾರೆ.

ಕುವೆಂಪು ನಾಟಕೋತ್ಸವಕ್ಕೆ ತೆರೆ

ಮೈಸೂರು: ನಗರದ ರಂಗಾಯಣದ ಅಂಗಳದಲ್ಲಿ ಎಂಟು ದಿನಗಳಿಂದ ನಡೆಯುತ್ತಿದ್ದ ಕುವೆಂಪು ನಾಟಕ, ಕಿರುಚಿತ್ರ, ಚಲನಚಿತ್ರೋತ್ಸವ ಶನಿವಾರ ಸಮಾರೋಪಗೊಂಡಿತು. ಸಿರಿಯಾಳೆ ಕಲಾರಂಗದ ಕಲಾವಿದರು 'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶಿಸುವ ಮೂಲಕ ಉತ್ಸವಕ್ಕೆ ತೆರೆ ಎಳೆದರು.

ಶನಿವಾರ ಸಂಜೆ ರಂಗಾಯಣದ ವನರಂಗದಲ್ಲಿ ನಡೆದ ಸಮಾರಂಭದಲ್ಲಿ ಸಂಸದ ಡಿ.ಬಿ.ಚಂದ್ರೇಗೌಡ ಸಮಾರೋಪ ಭಾಷಣ ಮಾಡಿದರು. 'ನಾಡಿನ ಸಂಸ್ಕೃತಿಯನ್ನು ಕನ್ನಡಕ್ಕೆ ಮೊದಲ ಬಾರಿಗೆ ತಂದುಕೊಡುವ ಮೂಲಕ [illegible] ಮಟ್ಟದಲ್ಲಿ ಮನ್ನಣೆ ಸಿಗುವಂತೆ ಮಾಡಿದವರು ಕುವೆಂಪು. ಅವರು ನೀಡಿದ ಸಾಹಿತ್ಯ ಸರ್ವಶ್ರೇಷ್ಠವಾದದು' ಎಂದರು.

'ರೈತರನ್ನು ನೇಗಿಲಯೋಗಿ ಎಂದು ಕರೆಯುವ ಮೂಲಕ [illegible] ಗೌರವಯುತವಾಗಿ ಕಾಣುವ ಮನೋಭಾವನೆಯನ್ನು ಬೆಳೆಸಿದರು. ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ರೈತರ ಪಾತ್ರವನ್ನು ನಾಯಕನಾಗಿ ಬಳಸುವ ಕೆಲಸವಾಗಿರಲಿಲ್ಲ' ಎಂದರು.

ರೈತಾಪಿ ಪರಂಪರೆಯ [illegible] ಕರ್ನಾಟಕ ರಾಜ್ಯ [illegible] ಅಕಾಡೆಮಿ [illegible] ಅಧ್ಯಕ್ಷ ಡಿ.ಬಿ.ಮುಟ್ಟಪ್ಪ [illegible] ಅವರನ್ನು ಸನ್ಮಾನಿಸಲಾಯಿತು. ರಂಗಾಯಣ [illegible] ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜಿ.ಸುರೇಶ್‌ಗೌಡ ಹಾಜರಿದ್ದರು.

ಇದಕ್ಕೂ ಮುನ್ನ ಬಾಲಕ ಕುವೆಂಪು ಕಿರುಚಿತ್ರ ಪ್ರದರ್ಶನಗೊಂಡಿತು.

'ರಾಷ್ಟ್ರಮಟ್ಟದಲ್ಲಿ ಕನ್ನಡ ಪರಿಚಯಿಸಿದ ಕುವೆಂಪು'

ವನರಂಗದಲ್ಲಿ ಕುವೆಂಪು ಉತ್ಸವಕ್ಕೆ ತೆರೆ

ಮೈಸೂರು,ಡಿ.೨೯- ಮೊದಲು ಕನ್ನಡ ಭಾಷೆಯನ್ನು ರಾಷ್ಟ್ರಮಟ್ಟದಲ್ಲಿ ಪರಿಚಯಿಸಿದ ಕೀರ್ತಿ ಕೆ.ವಿ ಪುಟ್ಟಪ್ಪ(ಕುವೆಂಪು) ಅವರಿಗೆ ಸಲ್ಲುತ್ತದೆ ಎಂದು ಸಂಸದ ಡಿ.ಬಿ ಚಂದ್ರೇಗೌಡ ತಿಳಿಸಿದ್ದಾರೆ.

ನಗರದ ರಂಗಾಯಣ ವನರಂಗದಲ್ಲಿ ಕಳೆದ ೮ ದಿನಗಳಿಂದ ಆಯೋಜಿಸಿದ್ದ ಕುವೆಂಪು ಅವರ ನಾಟಕ, ಕಿರುಚಿತ್ರ ಮತ್ತು ಚಲನಚಿತ್ರೋತ್ಸವ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕುವೆಂಪು ಅವರಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ ನಂತರ ಕನ್ನಡ ಭಾಷೆಯನ್ನು ಕುರಿತು ರಾಷ್ಟ್ರಮಟ್ಟದಲ್ಲಿ ಚರ್ಚೆ ಆರಂಭವಾಯಿತು. ಇದಲ್ಲದೆ ದೇಶದ ಬೆನ್ನೆಲುಬು ರೈತರನ್ನು ಕುರಿತು ನೇಗಿಲಯೋಗಿ ಕಾವ್ಯ ರಚಿಸುವ ಮೂಲಕ ಅನ್ನದಾತನಿಗೆ ಮರ್ಯಾದೆ ಕೊಟ್ಟ ಮೊದಲ ಕವಿ ಕುವೆಂಪು ಎಂದರು.

ವಾಲ್ಮೀಕಿಯ ರಾಮಾಯಣವನ್ನು ಜನರಿಗೆ ದರ್ಶನ ಮಾಡಿಸಿದವರು ಕುವೆಂಪು. ನಿರಪೇಕ್ಷತೆಯಲ್ಲಿ ದೇವರನ್ನು ಕುವೆಂಪು ಕಂಡಿದ್ದರು ಎಂಬುದಕ್ಕೆ ಟೀಕೆ ವ್ಯಕ್ತವಾಗಿತ್ತು. ಆದರೆ ನೂರು ದೇವರುಗಳನ್ನು ನೂರಾಚೆ ದೂರ ಭಾರತಾಂಬೆಯ ಪೂಜಿಸುವ ಬಾರ ಎನ್ನುವ ಮೂಲಕ ಟೀಕಾಕಾರರ ಬಾಯಿ ಮುಚ್ಚಿಸಿದರು ಎಂದು ಚಂದ್ರೇಗೌಡ ತಿಳಿಸಿದರು.

ಕುವೆಂಪು ಅವರ ನಾಟಕಗಳನ್ನು ವೀಕ್ಷಿಸಿದ ಸಂಪೂರ್ಣ ಅನುಭವ ದೊರೆಯಬೇಕಾದರೆ ಅಂತಹವರು ಕುಪ್ಪಳಿಗೆ ಒಮ್ಮೆ ಭೇಟಿ ನೀಡಬೇಕು ಎಂದ ಅವರು, ಸಿ.ಲಕ್ಷ್ಮಣ್ ಅವರು ಕುವೆಂಪು ಅವರ ಸಮಗ್ರ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶನಗೊಳಿಸಿದ್ದಾರೆ ಎಂದು ಶ್ಲಾಘಿಸಿದರು.

ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ, ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಷನ್ ಅಧ್ಯಕ್ಷ ಎ.ಬಿ ಶಿವಸುಬ್ರಮಣ್ಯಂ,ಗೌರಮ್ಮ ಲಕ್ಷ್ಮಣ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕಸಾಪ ವತಿಯಿಂದ ರಂಗಕರ್ಮಿ ಸಿ.ಲಕ್ಷ್ಮಣ್ ಮತ್ತು ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆಯ ಎಂ.ಜಿ.ಸುರೇಶ್‌ಗೌಡ ಅವರನ್ನೂ ಸನ್ಮಾನಿಸಲಾಯಿತು.

ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ವೇದಿಕೆಯಲ್ಲಿದ್ದರು. ರಂಗಕರ್ಮಿ ಶ್ರೀಕಂಠ ಗುಂಡಪ್ಪ ಮಾತನಾಡಿದರು. ಎಂ.ಜಿ ಸುರೇಶ್‌ಗೌಡ ಸ್ವಾಗತಿಸಿ, ಸಿ.ಲಕ್ಷ್ಮಣ್ ವಂದಿಸಿದರು.



ಮೈಸೂರಿನಲ್ಲಿ ಶನಿವಾರ ನಡೆದ ಕುವೆಂಪು ಉತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಸಂಸದ ಡಿ.ಬಿ ಚಂದ್ರೇಗೌಡ, ವೂಡೆ ಪಿ.ಕೃಷ್ಣ, ಎ.ಬಿ.ಶಿವಸುಬ್ರಹ್ಮಣ್ಯಂ, ಸಿ.ಲಕ್ಷ್ಮಣ್, ಎಂ.ಜಿ.ಸುರೇಶ್‌ಗೌಡ ಅವರು ಚಿತ್ರದಲ್ಲಿದ್ದಾರೆ.

ಪ್ರಜಾವಾಣಿ
ಭಾನುವಾರ
30ನೇ ಡಿಸೆಂಬರ್ 2012



ಮೈಸೂರಿನ ರಂಗಾಯಣದ ವನರಂಗದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೆ ಕೃಷ್ಣ, ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎ.ಬಿ.ಶಿವಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಲಾಯಿತು. 'ರಂಗಕಹಳೆ' ಸಂಚಾಲಕ ಸಿ.ಲಕ್ಷ್ಮಣ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಚಂದ್ರಶೇಖರ್, ಸಂಸದ ಡಿ.ಬಿ.ಚಂದ್ರೇಗೌಡ, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ್‌ಗೌಡ ಇದ್ದಾರೆ.

ಕುವೆಂಪು ನಾಟಕೋತ್ಸವಕ್ಕೆ ತೆರೆ

ಮೈಸೂರು: ನಗರದ ರಂಗಾಯಣದ ಅಂಗಳದಲ್ಲಿ ಎಂಟು ದಿನಗಳಿಂದ ನಡೆಯುತ್ತಿದ್ದ ಕುವೆಂಪು ನಾಟಕ, ಕಿರುಚಿತ್ರ, ಚಲನಚಿತ್ರೋತ್ಸವ ಶನಿವಾರ ಸಮಾರೋಪಗೊಂಡಿತು. ಸಿರಿಯಾಳ ಕಲಾರಂಗದ ಕಲಾವಿದರು 'ಬೆರಳ್ಗೆ ಕೊರಳ್' ನಾಟಕ ಪ್ರದರ್ಶಿಸುವ ಮೂಲಕ ಉತ್ಸವಕ್ಕೆ ತೆರೆ ಎಳೆದರು.

ಶನಿವಾರ ಸಂಜೆ ರಂಗಾಯಣದ ವನರಂಗದಲ್ಲಿ ನಡೆದ ಸಮಾರಂಭದಲ್ಲಿ ಸಂಸದ ಡಿ.ಬಿ.ಚಂದ್ರೇಗೌಡ ಸಮಾರೋಪ ಭಾಷಣ ಮಾಡಿದರು. 'ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡಕ್ಕೆ ಮೊದಲ ಬಾರಿಗೆ ತಂದುಕೊಡುವ ಮೂಲಕ ಈ ಭಾಷೆಗೆ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗುವಂತೆ ಮಾಡಿದವರು ಕುವೆಂಪು. ಅವರು ನೀಡಿದ ಸಾಹಿತ್ಯ ಸರ್ವಶ್ರೇಷ್ಠವಾದದ್ದು' ಎಂದರು.

'ರೈತರನ್ನು ನೇಗಿಲಯೋಗಿ ಎಂದು ಕರೆಯುವ ಮೂಲಕ ಕೃಷಿಯನ್ನು ಗೌರವಯುತವಾಗಿ ಕಾಣುವ ಮನೋಭಾವನೆಯನ್ನು ಬೆಳೆಸಿದರು. ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ರೈತರ ಕಾಯಕವನ್ನು ಸರಿಯಾಗಿ ಗುರುತಿಸುವ ಕೆಲಸವಾಗಿರಲಿಲ್ಲ' ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೆ ಕೃಷ್ಣ, ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ಸ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎ.ಬಿ.ಶಿವಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಲಾಯಿತು. 'ರಂಗಕಹಳೆ' ಸಂಚಾಲಕ ಸಿ.ಲಕ್ಷ್ಮಣ್, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ್‌ಗೌಡ ಹಾಜರಿದ್ದರು.

ಇದಕ್ಕೂ ಮುನ್ನ 'ಬಾಲಕ ಕುವೆಂಪು' ಕಿರುಚಿತ್ರ ಪ್ರದರ್ಶನಗೊಂಡಿತು.

ಪ್ರಜಾವಾಣಿ

ಭಾನುವಾರ
30ನೇ ಡಿಸೆಂಬರ್ 2012



ಮೈಸೂರಿನ ರಂಗಾಯಣದ ವನರಂಗದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೆ ಕೃಷ್ಣ, ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎ.ಬಿ.ಶಿವಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಲಾಯಿತು. ರಂಗಕಹಳೆ ಸಂಚಾಲಕ ಸಿ.ಲಕ್ಷ್ಮಣ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಚಂದ್ರಶೇಖರ್, ಸಂಸದ ಡಿ.ಬಿ.ಚಂದ್ರೇಗೌಡ, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ್‌ಗೌಡ ಇದ್ದಾರೆ.

ಕುವೆಂಪು ನಾಟಕೋತ್ಸವಕ್ಕೆ ತೆರೆ

ಮೈಸೂರು: ನಗರದ ರಂಗಾಯಣದ ಅಂಗಳದಲ್ಲಿ ಎಂಟು ದಿನಗಳಿಂದ ನಡೆಯುತ್ತಿದ್ದ ಕುವೆಂಪು ನಾಟಕ, ಕಿರುಚಿತ್ರ, ಚಲನಚಿತ್ರೋತ್ಸವ ಶನಿವಾರ ಸಮಾರೋಪಗೊಂಡಿತು. ಸಿರಿಯಾಳ ಕಲಾರಂಗದ ಕಲಾವಿದರು 'ಬೆರಳ್‌ಗೆ ಕೊರಳ್' ನಾಟಕ ಪ್ರದರ್ಶಿಸುವ ಮೂಲಕ ಉತ್ಸವಕ್ಕೆ ತೆರೆ ಎಳೆದರು.

ಶನಿವಾರ ಸಂಜೆ ರಂಗಾಯಣದ ವನರಂಗದಲ್ಲಿ ನಡೆದ ಸಮಾರಂಭದಲ್ಲಿ ಸಂಸದ ಡಿ.ಬಿ.ಚಂದ್ರೇಗೌಡ ಸಮಾರೋಪ ಭಾಷಣ ಮಾಡಿದರು. 'ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡಕ್ಕೆ ಮೊದಲ ಬಾರಿಗೆ ತಂದುಕೊಡುವ ಮೂಲಕ ಈ ಭಾಷೆಗೆ ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಗುವಂತೆ ಮಾಡಿದವರು ಕುವೆಂಪು. ಅವರು ನೀಡಿದ ಸಾಹಿತ್ಯ ಸರ್ವಶ್ರೇಷ್ಠವಾದದ್ದು' ಎಂದರು.

'ರೈತರನ್ನು ನೇಗಿಲಯೋಗಿ ಎಂದು ಕರೆಯುವ ಮೂಲಕ ಕೃಷಿಯನ್ನು ಗೌರವಯುತವಾಗಿ ಕಾಣುವ ಮನೋಭಾವನೆಯನ್ನು ಬೆಳೆಸಿದರು. ಅದುವರೆಗೆ ಕನ್ನಡ ಸಾಹಿತ್ಯದಲ್ಲಿ ರೈತರ ಕಾಯಕವನ್ನು ಸರಿಯಾಗಿ ಗುರುತಿಸುವ ಕೆಲಸವಾಗಿರಲಿಲ್ಲ' ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೆ ಕೃಷ್ಣ, ಕರ್ನಾಟಕ ರಾಜ್ಯ ಚಾರ್ಟರ್ಡ್ ಅಕೌಂಟೆಂಟ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಎ.ಬಿ.ಶಿವಸುಬ್ರಹ್ಮಣ್ಯಂ ಅವರನ್ನು ಸನ್ಮಾನಿಸಲಾಯಿತು. ರಂಗಕಹಳೆ ಸಂಚಾಲಕ ಸಿ.ಲಕ್ಷ್ಮಣ್, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಅಧ್ಯಕ್ಷ ಎಂ.ಜೆ.ಸುರೇಶ್‌ಗೌಡ ಹಾಜರಿದ್ದರು.

ಇದಕ್ಕೂ ಮುನ್ನ 'ಬಾಲಕ ಕುವೆಂಪು' ಕಿರುಚಿತ್ರ ಪ್ರದರ್ಶನಗೊಂಡಿತು.

ಕುವೆಂಪು ವಿಚಾರಧಾರೆ ಅಳವಡಿಸಿಕೊಳ್ಳಲು ಸಲಹೆ

ಪ್ರಜಾವಾಣಿ ವಾರ್ತೆ


ಮೈಸೂರು: ಕುವೆಂಪು ವಿಚಾರಧಾರೆಗಳು, ವಿಶ್ವಮಾನವ ಸಂದೇಶವನ್ನು ಪ್ರತಿಯೊಬ್ಬರೂ ಬದುಕಿನಲ್ಲಿ ಅಳವಡಿಸಿಕೊಂಡರೆ ಸುಸಂಸ್ಕೃತ ಸಮಾಜ ನಿರ್ಮಾಣ ಸಾಧ್ಯ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಡಾ.ಎಂ.ಆರ್.ರವಿ ಅಭಿಪ್ರಾಯಪಟ್ಟರು.

ಬೆಂಗಳೂರಿನ ರಂಗಕಹಳೆ, ವಿಶ್ವಮಾನವ ವಿದ್ಯಾರ್ಥಿ ಯುವವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೈಸೂರಿನ ರಂಗಾಯಣದ ವನರಂಗದಲ್ಲಿ ಶನಿವಾರ ಏರ್ಪಡಿಸಿದ್ದ ರಾಷ್ಟ್ರಕವಿ ಕುವೆಂಪು ಅವರ 108ನೇ ಜನ್ಮದಿನೋತ್ಸವದಲ್ಲಿ ಅವರು ಕುವೆಂಪು ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿದರು. 'ರಾಷ್ಟ್ರಕವಿ ಕುವೆಂಪು ಚಿಂತನೆಗಳು ಪುಸ್ತಕಕ್ಕಷ್ಟೇ ಸೀಮಿತವಾಗಬಾರದು. ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದು ತುಸು ಕಷ್ಟ. ಅವರ ನಡೆ-ನುಡಿಗಳು ಸಾಮಾಜಿಕ ಬದಲಾವಣೆಗೆ ದಾರಿದೀಪಗಳು. ನಾಟಕೋತ್ಸವ, ಸಾಹಿತ್ಯ ಮಾಧ್ಯಮಗಳ ಮೂಲಕ ಅವರ ಜೀವನ ದರ್ಶನವನ್ನು ಜನಸಾಮಾನ್ಯರಿಗೆ ತಿಳಿಸುವ ಕಾರ್ಯಗಳು ಇನ್ನೂ ಹೆಚ್ಚು ಆಗಬೇಕಿದೆ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿವೃತ್ತ ನಿರ್ದೇಶಕ ಮಾರ್ಕಂಡಪುರಂ ಶ್ರೀನಿವಾಸ್ ಮಾತನಾಡಿ, ಕುವೆಂಪು ಸಾಹಿತ್ಯವು ಅದ್ಭುತ ಮತ್ತು ವೈವಿಧ್ಯಮಯವಾದುದು. ಚಿಣ್ಣರಲ್ಲಿ ಜಾಗೃತಿ ಮೂಡಿಸುವ ಮಕ್ಕಳ ನಾಟಕಗಳನ್ನು ಅವರು ರಚಿಸಿದ್ದಾರೆ. ಕುವೆಂಪು ಹುಟ್ಟಿದ್ದರೆ ವಿಶ್ವಮಾನವ ಸಂದೇಶ ಬಹುಶಃ ಅರ್ಥವಾಗುತ್ತಿರಲಿಲ್ಲವೇನೋ ಎಂದರು.


ಪಾಂಡವಪುರ ಶಾಸಕ ಸಿ.ಎಸ್.ಪುಟ್ಟರಾಜು ಅಧ್ಯಕ್ಷತೆ ವಹಿಸಿದ್ದರು. ರಾಮನಗರ ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ನಾಗರಾಜು ಅವರು ವಿಶ್ವಮಾನವ ಸಂದೇಶ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಅವರು ರಂಗಕಹಳೆ ನಾಟಕೋತ್ಸವದ ಕುರಿತು ಮಾತನಾಡಿದರು. ಚಲನಚಿತ್ರ ನಿರ್ದೇಶಕ ಸಿ.ಲಕ್ಷ್ಮಣ್, ಎಚ್‌ಎಂಟಿ ಮಹಾಪ್ರಬಂಧಕ ಎನ್.ಡಿ.ವೀರಣ್ಣಗೌಡ ಅವರನ್ನು ಸನ್ಮಾನಿಸಲಾಯಿತು. ರಂಗಾಯಣ ನಿರ್ದೇಶಕ ಬಿ.ವಿ.ರಾಜಾರಾಂ, ಉಪನಿರ್ದೇಶಕಿ ನಿರ್ಮಲಾ ಮಠಪತಿ, ವಿಶ್ವಮಾನವ ವಿದ್ಯಾರ್ಥಿ ಯುವವೇದಿಕೆ ಅಧ್ಯಕ್ಷ ಸುರೇಶ್‌ಗೌಡ ಇದ್ದರು.



ಮೈಸೂರಿನ ರಂಗಾಯಣದ ವನರಂಗದಲ್ಲಿ ಶನಿವಾರ ನಡೆದ ಕುವೆಂಪು ಜನ್ಮದಿನೋತ್ಸವದಲ್ಲಿ ಚಲನಚಿತ್ರ ನಿರ್ದೇಶಕ ಸಿ.ಲಕ್ಷ್ಮಣ್ ಅವರನ್ನು ಸನ್ಮಾನಿಸಲಾಯಿತು. ರಾಮನಗರ ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ.ನಾಗರಾಜು, ಪಾಲಿಕೆ ಆಯುಕ್ತ ಡಾ.ಎಂ.ಆರ್.ರವಿ, ಶಾಸಕ ಸಿ.ಎಸ್.ಪುಟ್ಟರಾಜು, ಮಾರ್ಕಂಡಪುರಂ ಶ್ರೀನಿವಾಸ್, ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ರಂಗಾಯಣ ನಿರ್ದೇಶಕ ಬಿ.ವಿ.ರಾಜಾರಾಂ, ಎಚ್‌ಎಂಟಿ ಮಹಾಪ್ರಬಂಧಕ ಎನ್.ಡಿ.ವೀರಣ್ಣಗೌಡ ಇದ್ದಾರೆ.

ಈ ಸಂಜೆ
ಭಾನುವಾರ, 23 ಡಿಸೆಂಬರ್ 2012



ನಗರದ ಪ್ರೊ. ಬಿ. ನಾರಾಯಣ ಪ್ರತಿಷ್ಠಾನ ವತಿಯಿಂದ ಗಾಂಧಿ ಶಾಂತಿ ಪ್ರತಿಷ್ಠಾನ ವಲ್ಲಭ ನಿಕೇತನದ ವಿದ್ಯಾರ್ಥಿಗಳಿಗೆ ಕಂಬಳಿ ವಿತರಿಸಿದ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಡಾ. ವೂಡೆ ಪಿ. ಕೃಷ್ಣ, ನಾರಾಯಣಮ್ಮ, ಡಾ. ಪ್ರಕಾಶ್ ಸಿ. ರಾವ್, ಸಂಪತ್ ಪಾಲ್ಗೊಂಡಿದ್ದರು.

ಸಂಜೆ ವಾಣಿ
ಮಂಗಳವಾರ 11 ಡಿಸೆಂಬರ್ 2012



ಎಚ್.ಎಸ್. ರೇಣುಕ ಪ್ರಸಾದ್ ಫೌಂಡೇಷನ್‌ನ ಕಾನೂನು ಸಾಮಾಜಿಕ, ಸಾಂಸ್ಕೃತಿಕ ಟ್ರಸ್ಟ್‌ನ ಆಶ್ರಯದಲ್ಲಿ ಬಸವ ಭವನದ ಅರಿವಿನ ಮನೆಯಲ್ಲಿ ನಡೆದ ವಕೀಲರ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ನಾಡೋಜ ಡಾ. ಪಾಟೀಲ್ ಪುಟ್ಟಪ್ಪರವರನ್ನು ಸನ್ಮಾನಿಸಲಾಯಿತು. ರಾಜ್ಯ ಬಾರ್ ಕೌನ್ಸಿಲ್ ಅಧ್ಯಕ್ಷ ಮುನಿಯಪ್ಪ, ಮಹಾಪ್ರಧಾನ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸ ಮೂರ್ತಿ, ಲೀಲಾದೇವಿ ಆರ್. ಪ್ರಸಾದ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಫೌಂಡೇಷನ್‌ನ ಅಧ್ಯಕ್ಷ ಎಚ್.ಎಸ್. ರೇಣುಕ ಪ್ರಸಾದ್ ಇದ್ದಾರೆ.

ಸಂಯುಕ್ತ ಕರ್ನಾಟಕ

05-12-2012, ಬುಧವಾರ

ಆದರ್ಶಗಳ ರೂಢಿಸಿಕೊಳ್ಳಲು ಯುವ ವಕೀಲರಿಗೆ ಸಲಹೆ

ಬೆಂಗಳೂರು, ಡಿ. 4: ಖ್ಯಾತ ವಕೀಲ ರಾಜೇಂದ್ರ ಪ್ರಸಾದ್ ಅವರ ಆದರ್ಶಗಳನ್ನು ಇಂದಿನ ಯುವ ವಕೀಲರು ಅಳವಡಿಸಿಕೊಳ್ಳಬೇಕು ಎಂದು ಸ್ವಾತಂತ್ರ್ಯ ಹೋರಾಟಗಾರ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಕಿವಿಮಾತು ಹೇಳಿದರು.

ಎಚ್.ಎಸ್. ರೇಣುಕಾ ಪ್ರಸಾದ್ ಫೌಂಡೇಷನ್ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜೇಂದ್ರ ಪ್ರಸಾದ್ ಅವರಿಗೆ ಅದ್ಭುತ ನೆನಪಿನ ಶಕ್ತಿ ಇತ್ತು, ಅವರು ಎಂದೂ ಸಹ ಹಣವೇ ಪ್ರಧಾನವೆಂದು ಭಾವಿಸದೆ ಸತ್ಯ ಹಾಗೂ ಪ್ರಾಮಾಣಿಕವಾಗಿ ದುಡಿದಂತಹವರು. ಅವರ ಗುಣಗಳನ್ನು ಅಳವಡಿಸಿಕೊಳ್ಳಬೇಕೆಂದು ಸಲಹೆ ನೀಡಿದರು.



ಜಗತ್ತಿನ ಪ್ರಾಚೀನ ಭಾಷೆಗಳಲ್ಲಿ ಕನ್ನಡವೂ ಒಂದು. ನಮ್ಮ ಭಾಷೆಯ ಬಗ್ಗೆ ಗೌರವ, ಅಭಿಮಾನ ಇರಬೇಕು, ರಷ್ಯಾ, ಜರ್ಮನಿಯಲ್ಲಿ ಆಯಾ ಭಾಷೆಯ ಬಗ್ಗೆ ಅಭಿಮಾನ ಹೆಚ್ಚು. ಹೈಕೋರ್ಟಿನಲ್ಲಿ ಅಲ್ಲದಿದ್ದರೂ ಕನಿಷ್ಠ ಕೆಳ ಕೋರ್ಟಿನಲ್ಲಾದರೂ ಕನ್ನಡದ ವ್ಯವಹಾರ ನಡೆದಾಗ ಭಾಷೆ ಬೆಳೆಯಲು ಸಹಕಾರಿಯಾಗುತ್ತದೆ ಎಂದರು. ಕೆಲವು ವಕೀಲರಿಗೂ ಕಾನೂನು ಗೊತ್ತಿರುವುದಿಲ್ಲ. ಹೆಚ್ಚು ಹೆಚ್ಚು ಓದಬೇಕು, ಕಾನೂನು ಕಾಲೇಜುಗಳು ಸಹ ಇಂತಹವರಿಗಾಗಿ ಉಪನ್ಯಾಸಗಳನ್ನು ಏರ್ಪಡಿಸುವಂತಾಗಬೇಕು, ಅದರಲ್ಲೂ ನಾಗಮೋಹನ್ ಅವರಂತಹ ಉಪನ್ಯಾಸಗಳು ಎಲ್ಲ ಕಾಲೇಜುಗಳಲ್ಲಿ ಆಯೋಜಿಸುವಂತಾಗಬೇಕು, ಕಾನೂನು ಜನರ ಮನೆಗೆ ಸುಲಭವಾಗಿ ತಲಪುವಂತಾಗಲು ಶ್ರಮಿಸಬೇಕೆಂದು ಸಲಹೆ ನೀಡಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದಿಂದ ನಮ್ಮ ಶಾಸಕರಾದವರು ಹೊರ ದೇಶಗಳನ್ನು ಸುತ್ತಲು ಹೋಗುತ್ತಾರೆ. ಮೊದಲು ಕರ್ನಾಟಕವನ್ನು ನೋಡಲಿ ನಂತರ ಬೇರೆ ದೇಶಗಳಿಗೆ ಹೋಗಲಿ. ಕೆಲವರಿಗೆ ಕ್ಷೇತ್ರದ ಬಗ್ಗೆ ಮಾತ್ರ ಗೊತ್ತೆ ವಿನಃ ಇತರೆ ಕ್ಷೇತ್ರಗಳಲ್ಲಿ ಏನಿದೆ ಎಂದು ನೋಡುವುದಿಲ್ಲ. ಎಷ್ಟೋ ಮಂದಿ ಬಿಜಾಪುರದಲ್ಲಿರುವ ಗೋಲ್‌ಗುಮ್ಮಟ ನೋಡಿರುವುದಿಲ್ಲ. ಇಂತಹವರಿಗೆ ವಕೀಲರು ಪಾಠ ಕಲಿಸಬೇಕೆಂದು ತಿಳಿಸಿದರು.

ಸಮಾರಂಭದಲ್ಲಿ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ, ಬೆಂಗಳೂರು ವಕೀಲರ ಸಂಘದ ಕಾರ್ಯದರ್ಶಿ ಎ.ಪಿ. ರಂಗನಾಥ, ಫೌಂಡೇಷನ್ ಅಧ್ಯಕ್ಷ ಎಚ್.ಎಸ್. ರೇಣುಕ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ

ಬುಧವಾರ 5 ಡಿಸೆಂಬರ್ 2012



ನಗರದ ಪ್ರೊ.ಬಿ. ನಾರಾಯಣಮ್ಮ ಪ್ರತಿಷ್ಠಾನದ ವತಿಯಿಂದ ಬಡಮಕ್ಕಳಿಗೆ ಕಂಬಳಿಗಳನ್ನು ವಿತರಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಕನ್ನಡ ವೈದ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಪ್ರಕಾಶ್. ಸಿ. ರಾವ್, ರಾಜ್ಯ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಡಿ.ಎನ್. ಸಂಪತ್ ಹಾಗೂ ಪ್ರತಿಷ್ಠಾನದ ಅಧ್ಯಕ್ಷೆ ಪ್ರೊ.ಬಿ. ನಾರಾಯಣಮ್ಮ ಚಿತ್ರದಲ್ಲಿದ್ದಾರೆ.

ಹೊಸ ದಿಗಂತ 9

ಬೆಂಗಳೂರು
ಮಂಗಳವಾರ, 4 ಡಿಸೆಂಬರ್ 2012

ಸಮಾಜದ ಗೌರವ ಕಾಪಾಡಿ: ಪಾಪು

ಬೆಂಗಳೂರು: ನ್ಯಾಯವಾದಿಗಳಿಗೆ ಸಮಾಜದಲ್ಲಿ ಸಿಗುತ್ತಿರುವ ಗೌರವ, ಘನತೆಯನ್ನು ಕಾಪಾಡಿಕೊಂಡು ಮತ್ತೊಬ್ಬರಿಗೆ ಮಾರ್ಗದರ್ಶಕರಾಗಿ ಬೆಳೆಯುವಂತೆ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಕಿವಿಮಾತು ಹೇಳಿದರು.



ನಗರದಲ್ಲಿ ಸೋಮವಾರ ವಕೀಲರ ದಿನಾಚರಣೆ ಪ್ರಯುಕ್ತ ಎಚ್.ಎಸ್. ರೇಣುಕ ಪ್ರಸಾದ್ ಫೌಂಡೇಷನ್ ಮತ್ತು ಕಾನೂನು ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜದ ಘನತೆ, ಗೌರವ ಎತ್ತಿಹಿಡಿಯುವ ನ್ಯಾಯವಾದಿಗಳು ಸತ್ಯಕ್ಕೆ ಆದ್ಯತೆ ನೀಡುವ ಮೂಲಕ ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಬೇಕು ಎಂದರು.

ನ್ಯಾಯವಾದಿಗಳು ಸತತ ಅಧ್ಯಯನ ಶೀಲರಾಗಿರಬೇಕು. ಭಾಷೆಯಲ್ಲಿ ಹಿಡಿತ ಸಾಧಿಸಿಕೊಂಡಿರಬೇಕು' ಎಂದು ಹೇಳಿದ ಪಾಪು, ನ್ಯಾಯವಾದಿಗಳ ಎಂದೂ 'ಮತ್ತೊಬ್ಬರ ಕೈಚೀಲ ಹಿಡಿದುಕೊಳ್ಳಬಾರದು. ಅವರ ಕೈಚೀಲವನ್ನು ಮತ್ತೊಬ್ಬರು ಹಿಡಿದುಕೊಳ್ಳಬೇಕು. ಆದರೆ, ವೃತ್ತಿ ವ್ಯಾಪ್ಯಾರೀಕರಣ ಆಗುತ್ತಿರುವುದರಿಂದ ಈ ಬಗ್ಗೆ ಎಚ್ಚರಿಕೆ ಅಗತ್ಯ ಎಂದು ಅವರು ಪ್ರತಿಪಾದಿಸಿದರು.

ಸಕಾರಾತ್ಮಕ ಚಿಂತನೆ ಇರಲಿ

ಸ್ವಾತಂತ್ರ ಪೂರ್ವದಿಂದಲೂ ದೇಶಕ್ಕಾಗಿ ಸಾಕಷ್ಟು ನ್ಯಾಯವಾದಿಗಳು ತಮ್ಮ ಕೊಡುಗೆಗಳನ್ನು ಸಲ್ಲಿಸಿದ್ದಾರೆ. ಇಂದಿನ ದಿನಮಾನಗಳಲ್ಲಿ ಅನೇಕ ಯುವ ವಕೀಲರು ಸಕಾರಾತ್ಮಕ ಚಿಂತನೆಗಳನ್ನು ಮಾಡದೆ, ನಕಾರಾತ್ಮಕ ಚಿಂತನೆಗಳನ್ನು ಮಾಡುತ್ತಾರೆ. ಆ ಪ್ರವೃತ್ತಿ ನಿಲ್ಲಿಸಬೇಕು ನಿಂತರೆ ಮಾತ್ರ ವೃತ್ತಿಗೆ ಗೌರವ ಬರಲು ಸಾಧ್ಯ ಎಂದರು.

ಜಗತ್ತಿನ ಹತ್ತು ಪ್ರಾಚೀನ ಭಾಷೆಗಳಲ್ಲಿ ಕನ್ನಡ ಭಾಷೆ ಕೂಡ ಒಂದು. ಆದರೆ, ಈ ಆಧುನಿಕರಣ ಯುಗದಲ್ಲಿ ಜನರಲ್ಲಿ ಭಾಷಾಭಿಮಾನ ಕಡಿಮೆಯಾಗುತ್ತಿದೆ. ರಾಜ್ಯ ಹೈಕೋರ್ಟ್‌ನಲ್ಲಿ ಕನ್ನಡದಲ್ಲಿ ನ್ಯಾಯವಾದ ಮಾಡುವುದು ಕಷ್ಟ. ಕೆಳಹಂತದ ನ್ಯಾಯಾಲಯಗಳಲ್ಲಿ ಕನ್ನಡದಲ್ಲಿ ವಾದ ಮಂಡನೆ ಮತ್ತು ತೀರ್ಪುಗಳನ್ನು ನೀಡಲು ಸಾಧ್ಯ. ಈಗಾಗಲೇ ಅನೇಕ ಕೆಳಹಂತದ ನ್ಯಾಯಾಲಯಗಳಲ್ಲಿ ಇಂತಹ ಕಾರ್ಯ ನಡೆಯುತ್ತಿದೆ. ಇದು ಇನ್ನಷ್ಟು ವಿಸ್ತಾರಗೊಳ್ಳಬೇಕಿದೆ ಎಂದು ಹೇಳಿದರು.

ಕಾನೂನು ವ್ಯಾಸಂಗ ಇಳಿಮುಖ

ರಾಜ್ಯದಲ್ಲಿ ಕಾನೂನು ಕಾಲೇಜುಗಳ ಸಂಖ್ಯೆಯೇನು ಕಡಿಮೆ ಇಲ್ಲ. ಆದರೆ, ಕಲಿಸುವವರ ಮತ್ತು ಕಲಿಯವರರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಬಗ್ಗೆ ವಿಶ್ವವಿದ್ಯಾಲಯಗಳು ಹೆಚ್ಚಿನ ಗಮನಹರಿಸಿ ಯುವ ವಕೀಲರಿಗೆ ಕಲಿಯಲು ಬೇಕಾಗಿರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಜತೆಗೆ ಪ್ರತಿಯೊಬ್ಬ ನಾಗರಿಕನಿಗೂ ಕಾನೂನು ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಸಬೇಕೆಂದು ಆಶಿಸಿದರು.

ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಅಧ್ಯಕ್ಷ ಮುನಿಯಪ್ಪ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಕೆ.ಎನ್.ಸುಬ್ಬಾರೆಡ್ಡಿ, ಪ್ರತಿಷ್ಠಾನದ ಅಧ್ಯಕ್ಷ ಎಚ್.ಎಸ್ ರೇಣುಕ ಪ್ರಸಾದ್, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಡಾ.ವೊಡೆ ಪಿ.ಕೃಷ್ಣ ಉಪಸ್ಥಿತರಿದ್ದರು.

ಕೋರ್ಟ್ ಕಲಾಪ ಕನ್ನಡದಲ್ಲಿರಲಿ

■ ವಕೀಲರ ದಿನಾಚರಣೆ ಉದ್ಘಾಟಿಸಿ ಪಾಟೀಲ್ ಪುಟ್ಟಪ್ಪ ಆಶಯ

ಬೆಂಗಳೂರು: ರಾಜ್ಯದ ಕೆಳ ಹಂತದ ಕೋರ್ಟುಗಳ ಕಲಾಪ, ವಾದ-ಪ್ರತಿವಾದಗಳು, ನ್ಯಾಯಾಧೀಶರ ತೀರ್ಪುಗಳು ಜನ ಸಾಮಾನ್ಯನಿಗೆ ತಿಳಿಯುವಂತೆ ಕನ್ನಡದಲ್ಲೇ ಇರಬೇಕು ಎಂದು ನಾಡೋಜ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಹೇಳಿದ್ದಾರೆ.

ಬೆಂಗಳೂರಿನ ಬಸವಭವನದಲ್ಲಿ ಸೋಮವಾರ 'ಎಚ್.ಎಸ್. ರೇಣುಕ ಪ್ರಸಾದ್ ಫೌಂಡೇಷನ್' ಏರ್ಪಡಿಸಿದ್ದ ವಕೀಲರ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವದ ಕೆಲವೇ ಪುರಾತನ ಭಾಷೆಗಳಲ್ಲಿ ಕನ್ನಡವೂ ಒಂದು. ಇದರ ಬಗ್ಗೆ ಹೆಮ್ಮೆ ಪಡಬೇಕು. ವಕೀಲರು ನಿರಂತರ ಅಭ್ಯಾಸಿಗಳಾಗಬೇಕು, ನೆನಪಿನ ಶಕ್ತಿಯೂ ಅಪಾರವಾಗಿರಬೇಕು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ದೇಶಕ್ಕೆ ಮರ್ಯಾದೆ ತಂದು ಕೊಟ್ಟವರು ವಕೀಲರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ನಗರದ ಬಸವಭವನದಲ್ಲಿ ಸೋಮವಾರ ನಡೆದ ವಕೀಲರ ದಿನಾಚರಣೆಯಲ್ಲಿ ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ, ವಕೀಲರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಣ್ಣೆದುರೇ ಮೋಸ, ವಂಚನೆ ನಡೆಯುತ್ತಿದ್ದರೂ ಬಾಯಿ ಮುಚ್ಚಿಕೊಂಡು ಕೂತಿರುವ ಲಿಂಗಾಯಿತರಿಂದಲೇ ಬಸವ ತತ್ವಗಳ ನಾಶವಾಗುತ್ತಿದೆ. ಕೆಲವರಿಗೆ ಬಸವಣ್ಣ ಒಂದು ಪ್ರಾಡಕ್ಟ್ ಆಗಿಬಿಟ್ಟಿದ್ದಾನೆ. ಜನರೂ ಪ್ರತಿಭಟನೆಯ ದನಿ ಕಳೆದುಕೊಂಡಿದ್ದಾರೆ. ದೇವರು ಎಷ್ಟು ಅವತಾರ ಎತ್ತಿ ಬಂದರೂ ಲಿಂಗಾಯಿತರು ಉದ್ಧಾರವಾಗುವುದಿಲ್ಲ ಎಂದು ನೋವಿನಿಂದ ನುಡಿದರು.

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ, ರಾಜ್ಯ ಬಾರ್ ಕೌನ್ಸಿಲ್ ಅಧ್ಯಕ್ಷ ಮುನಿಯಪ್ಪ, ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ವಕೀಲರ ಸಾಹಿತ್ಯ ಸಂಘದ ಅಧ್ಯಕ್ಷ ದಿವಾಕರ ಮದ್ದೂರು, ಫೌಂಡೇಷನ್ ಅಧ್ಯಕ್ಷ ಎಚ್.ಎಸ್.. ರೇಣುಕ ಪ್ರಸಾದ್, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅಡಿಗ ಆರ್ಟ್ಸ್ ಅಕಾಡಮಿಯ ವಿದ್ಯಾರ್ಥಿಗಳಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಂಯುಕ್ತ ಕರ್ನಾಟಕ | ಡಿಸೆಂಬರ್ | 4 | 2012



ಎಚ್.ಎಸ್. ರೇಣುಕಾ ಪ್ರಸಾದ್ ಫೌಂಡೇಶನ್ ಸೋಮವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ವಕೀಲರ ಸಂಘದ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ, ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ, ಎಚ್.ಎಸ್. ರೇಣುಕಾ ಪ್ರಸಾದ್, ಪ್ರೊ.ಡಿ.ಪಿ. ಕೃಷ್ಣ ಉಪಸ್ಥಿತರಿದ್ದರು.

ಇಂದು ಸಂಜೆ 4/12/2012

ಹೃದಯ ಸ್ಪಂದನ ಕಾರ್ಯಕ್ರಮ

ಯಲಹಂಕ, ಡಿ. 4: ಅಪ್ಪ-ಅಮ್ಮ, ಅಣ್ಣ-ಅಕ್ಕ-ತಂಗಿ, ಹೀಗೆ ಕುಟುಂಬ ಪ್ರೀತಿಯಿಂದ ದೂರವಾಗಿದ್ದ 50ಕ್ಕೂ ಹೆಚ್ಚು ಮಕ್ಕಳು ಒಂದು ದಿನದ ಮಟ್ಟಿಗೆ ಪ್ರೀತಿಸಾಗರದಲ್ಲಿ ಮಿಂದೆದ್ದರು. ಶೇಷಾದ್ರಿಪುರಂ ಕಾಲೇಜ್ ಮ್ಯಾನೇಜ್‌ಮೆಂಟಿನ ವಿದ್ಯಾರ್ಥಿಗಳು ಹೃದಯ ಸ್ಪಂದನ ಕಾರ್ಯಕ್ರಮದ ಮೂಲಕ ಒಂದು ದಿನದ ಮಟ್ಟಿಗೆ ತಮ್ಮ ಪ್ರೀತಿಯನ್ನು ನೀಡಿ ಹೃದಯ ವೈಶಾಲ್ಯತೆ ಮೆರೆದಿದ್ದಾರೆ.

ರೈನ್ಬೊ ಅನಾಥಾಲಯಕ್ಕೆ ಸೇರಿದ 54 ಮಕ್ಕಳು ಇಡೀ ದಿನವನ್ನು ಕಾಲೇಜಿನಲ್ಲಿ ಕಳೆಯುತ್ತ ಆಟ-ಊಟ-ನೃತ್ಯಗಳ ಮೂಲಕ ತಮ್ಮ ದುಃಖ ದುಮ್ಮಾನ ಮರೆತು ಸಂಭ್ರಮಿಸಿದರು.

ಶೇಷಾದ್ರಿಪುರಂ ಕಾಲೇಜಿನ ಆಡಳಿತ ಮಂಡಳಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಎಲ್ಲೋ ವಾಸ ಮಾಡುತ್ತಾ ಇಲ್ಲಿ ಸ್ಟೇಜ್ ಮುಂದೆ ಯಾವ ಹಂಗಿಲ್ಲದೆ ಕುಣಿದ ಈ ಮಕ್ಕಳು ತಾವು ಅನಾಥರಲ್ಲ ತಮಗೂ ಅವಕಾಶ ಮತ್ತು ಸ್ಟೇಜ್ ಸಿಕ್ಕಿದರೆ ಯಾವ ಪ್ರತಿಭಾವಂತರಿಗೆ ಕಡಿಮೆ ಇಲ್ಲದವರಂತೆ ಕುಣಿತೇವೆ ಎಂದು ಸಾಬೀತುಪಡಿಸಿದರು.

ಯಲಹಂಕ ಸಮೀಪದ ರೈನ್ಬೊ ಹೋಂ ಎಂಬ ಅನಾಥಾಲಯದ 54 ಮಕ್ಕಳು ಇಡೀ ದಿನ ಯಲಹಂಕದ ಶೇಷಾದ್ರಿಪುರಂ ಕಾಲೇಜಿನಲ್ಲೇ ಕಳೆದರು. ಬೆಳಗ್ಗೆ ಬಂದ ಮಕ್ಕಳು ಮಧ್ಯಾಹ್ನ ಊಟ ಮುಗಿಸಿ ಆಟ ಮತ್ತು ನೃತ್ಯಗಳ ಮೂಲಕ ತಮ್ಮ ಪ್ರತಿಭೆಯನ್ನು ಹೊರ ಹಾಕಿದರು.



ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಒಮ್ಮೆ ಅನಾಥಾಲಯಕ್ಕೆ ಭೇಟಿ ನೀಡಿ ಅಲ್ಲಿನ ಮಕ್ಕಳ ಸ್ಥಿತಿಗತಿ ನೋಡಿ ಮಕ್ಕಳಿಗೆ ಏನಾದ್ರೂ ಮಾಡಬೇಕೆಂದು ತೀರ್ಮಾನಿಸಿದರು. ಅದರಂತೆ ಮಕ್ಕಳಿಗೆ ದಿನನಿತ್ಯ ಬೇಕಾಗುವ ಬಟ್ಟೆ, ಬೆಡ್‌ಶೀಟ್, ಊಟದ ತಟ್ಟೆ, ಕುಡಿಯುವ ನೀರಿನ ಸಲಕರಣೆ, ಚಾಪೆ, ಜಮಖಾನ, ಟೈಲರ್ ಮೆಷಿನ್ ಹೀಗೆ ತಮ್ಮ ಕೈಲಾದವನ್ನು ಕೊಟ್ಟು ತಮ್ಮ ಸೇವೆ ಸಲ್ಲಿಸಿದ್ದಾರೆ ಎನ್ನುವುದು ಮ್ಯಾನೇಜ್‌ಮೆಂಟ್ ಪ್ರಾಂಶುಪಾಲರು ಹೇಳಿದರು.

ಈ ಸಂಜೆ
ಸೋಮವಾರ, 3-12-2012

ವಕೀಲರಿಗೆ ಸಾರ್ವಜನಿಕ ಹಿತಾಸಕ್ತಿ ಇರಲಿ

ನಾಡೋಜ, ಹಿರಿಯ ಪತ್ರಕರ್ತ ಪಾಟೀಲ ಪುಟ್ಟಪ್ಪ ಕಿವಿಮಾತು



ಎಚ್.ಎಸ್.ರೇಣುಕಾಪ್ರಸಾದ್ ಫೌಂಡೇಷನ್ ಬಸವ ಭವನದಲ್ಲಿ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪಾಟೀಲ್ ಪುಟ್ಟಪ್ಪ, ಫೌಂಡೇಷನ್ ಅಧ್ಯಕ್ಷ ಎಚ್.ಎಸ್.ರೇಣುಕಾಪ್ರಸಾದ್, ವಕೀಲರದ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ, ಶ್ರೇಷಾದ್ರಿಪುರ ಶಿಕ್ಷಣ ದತ್ತಿಯ ವೂಡೆ ಪಿ.ಕೃಷ್ಣ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

ಬೆಂಗಳೂರು, ಡಿ.3-ವಕೀಲರು ಸಾರ್ವಜನಿಕರ ಹಿತಾಸಕ್ತಿಯಿಂದ ಕೆಲಸ ಮಾಡಬೇಕು. ಅಲ್ಲದೆ ನಿರಂತರ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕೆಂದು ಸಾಹಿತಿ, ಪತ್ರಕರ್ತ ಪಾಟೀಲಪುಟ್ಟಪ್ಪ ಕರೆ ನೀಡಿದರು.

ಎಚ್.ಎಸ್. ರೇಣುಕಾಪ್ರಸಾದ್ ಫೌಂಡೇಶನ್ ವತಿಯಿಂದ ಬಸವ ಭವನದಲ್ಲಿ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆಯಲ್ಲಿ ಮಾತನಾಡಿದ ಅವರು ವಕೀಲರು ಮತ್ತು ನ್ಯಾಯಾಧೀಶರು ಕಾಲಕಾಲಕ್ಕೆ ಅಪ್‌ಡೇಟ್ (ಸುಧಾರಣೆ) ಮಾಡಬೇಕು. ಅವರ ಉದ್ದೇಶ ಸಾರ್ವಜನಿಕ ಹಿತಾಸಕ್ತಿಯಾಗಿರಬೇಕು ಎಂದರು.

ಬಹಳಷ್ಟು ವಕೀಲರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡಿದ್ದರು. ಆಗಿನ ವಕೀಲರಲ್ಲಿದ್ದ ಬದ್ಧತೆ ಇತ್ತೀಚೆಗೆ ಕಡಿಮೆಯಾಗುತ್ತಿದೆ ಎಂದು ವಿಷಾದಿಸಿದರು.

ಕೆಲವು ಮಠಗಳಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ವಿವರಣೆ ನೀಡಿದ ಅವರು, ಕೊಳಕುಮಠವೊಂದರಲ್ಲಿ ಹೆಣ್ಣು, ಹಣ, ಮದ್ಯ ಏನು ಬೇಕಾದರೂ ದೊರೆಯುತ್ತದೆ. ಅಂತಹ ಮಠದ ಸ್ವಾಮೀಜಿಯೆಂದು ಒಪ್ಪಿಕೊಳ್ಳುವುದಾದರೂ ಹೇಗೆ? ಎಂದು ಪ್ರಶ್ನಿಸಿರುವ ಅವರು ಈ ಎಲ್ಲ ಅನ್ಯಾಯ, ಅಕ್ರಮಗಳನ್ನು ನೋಡಿ ಸಹಿಸಿಕೊಳ್ಳುವುದು ಲಿಂಗಾಯತರಿಗೆ ಸರಿಯಲ್ಲ ಎಂದರು.

ಹುಬ್ಬಳ್ಳಿಯ ಪ್ರಖ್ಯಾತ ಮಠವೊಂದರ ಸ್ವಾಮೀಜಿ ಏಡ್ಸ್ ಖಾಯಿಲೆಯಿಂದ ಸಾವನ್ನಪ್ಪಿದ್ದಾರೆ. ರಾಜ್ಯದ ಮಠದ ಸ್ವಾಮೀಜಿ ಉತ್ತರಾಧಿಕಾರಿ ಬೇಕು ಎಂಬ ಕಾರಣಕ್ಕೆ 60ನೇ ವಯಸ್ಸಿನಲ್ಲಿ ಮದುವೆಯಾಗುತ್ತಾರೆ. ಇವೆಲ್ಲವನ್ನೂ ಗಮನಿಸಿದರೆ ಸ್ವಾಮೀಜಿಗಳ ಬಗ್ಗೆ ಇದ್ದ ಗೌರವ ಕಡಿಮೆಯಾಗದೇ ಇರದು ಎಂದರು.

"ಕೊಳಕು" ಮಠದ ಸ್ವಾಮೀಜಿ ಮಧುರ ಚೆನ್ನ ಎಂಬ ಕಾವ್ಯವನ್ನು ತನ್ನದೆಂದು ಹೇಳಿಕೊಂಡು ಪ್ರಕಟಿಸಿದ್ದಾರೆ. ಇಂತಹ ಎಲ್ಲ ಕಳ್ಳತನ, ಮೋಸ, ಅನ್ಯಾಯಗಳನ್ನು ಯುವಪೀಳಿಗೆ ಪ್ರಶ್ನಿಸಬೇಕೆಂದು ಕರೆ ನೀಡಿದರು.

ಇತ್ತೀಚಿನ ರಾಜಕಾರಣ ಬದಲಾಗುತ್ತಿದೆ. ಜನರ ಸಮಸ್ಯೆಗೆ ಸ್ಪಂದಿಸುತ್ತಿರುವವರ ಸಂಖ್ಯೆ ಕ್ಷೀಣಿಸುತ್ತಿದೆ ಎಂದು ವಿಷಾದಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ, ಬಾರ್ ಕೌನ್ಸಿಲ್ ಅಧ್ಯಕ್ಷ ಮುನಿಯಪ್ಪ, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ ಕೃಷ್ಣ, ಬೆಂಗಳೂರು ವಕೀಲರ ಸಾಹಿತ್ಯ ಸಂಘದ ಅಧ್ಯಕ್ಷ ದಿವಾಕರ್ ಮದ್ದೂರು, ಫೌಂಡೇಶನ್ ಅಧ್ಯಕ್ಷ ರೇಣುಕಾಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಸೋಮವಾರ
26ನೇ ನವೆಂಬರ್ 2012
3A B

ಸಿಟಿ ಸಮಾಚಾರ

ಮಾಲಿ ಮರಿಯಪ್ಪ ಸಂಸ್ಮರಣಾ ದಿನಾಚರಣೆ

ಸರಳತೆ ನಟನೆಯಿಂದ ಬರುವುದಿಲ್ಲ. ಅದೊಂದು ಪ್ರಚಂಡ ಶಕ್ತಿಯಾಗಿದೆ. ಗಾಂಧೀಜಿ ಅವರ ಅನುಯಾಯಿಯಾಗಿದ್ದ ಮಾಲಿ ಮರಿಯಪ್ಪನವರಲ್ಲಿ ಸರಳತೆಯೇ ತುಂಬಿತ್ತು. ಅಂತಹವರ ಆದರ್ಶಗಳನ್ನು ಅನುಸರಿಸಬೇಕಾಗಿದ್ದು ಎಲ್ಲರ ಕರ್ತವ್ಯ ಎಂದು ಶಿಕ್ಷಣತಜ್ಞ ಪ್ರೊ.ಬಿ.ಕೃಷ್ಣ ಹೇಳಿದರು.

ಮಾಲಿ ಮರಿಯಪ್ಪನವರ ಅಭಿಮಾನಿಗಳ ಬಳಗವು ನಗರದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಮಾಲಿ ಮರಿಯಪ್ಪನವರ ಸಂಸ್ಮರಣಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಜಾವಾಣಿ, ಸೋಮವಾರ, 26ನೇ ನವೆಂಬರ್ 2012

‘ಗ್ರಾಮೀಣ ಭಾಗದಲ್ಲಿ ಜಾನಪದ ಅಧ್ಯಯನ ಕೇಂದ್ರ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಪದ ಕಲೆಗಳ ಉಳಿವಿಗಾಗಿ ಗ್ರಾಮೀಣ ಮಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ’ ಎಂದು ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು ಅಭಿಪ್ರಾಯಿಸಿದರು.

ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದ ನಯನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಮೂರನೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಆಧುನಿಕ ತಂತ್ರಜ್ಞಾನದ ಆಗಮನದಿಂದಾಗಿ ಜನಪದ ಕಲೆಗಳು ಕಣ್ಮರೆಯಾಗುತ್ತಿವೆ. ಸಮಾಜಕ್ಕೆ ಆದರ್ಶ, ನೀತಿಯನ್ನು ಕೊಡುಗೆಯಾಗಿ ನೀಡಿದ ಜನಪದ ಕಲೆಗಳನ್ನು ಉಳಿಸುವ ಕೆಲಸವಾಗಬೇಕು’ ಎಂದು ಹೇಳಿದರು.

‘ಗ್ರಾಮೀಣ ಅನಕ್ಷರಸ್ಥರಿಂದಾಗಿ ಜನಪದ ಕಲೆಗಳು ಬೆಳವಣಿಗೆಯಾಗಿವೆ. ಪ್ರಾದೇಶಿಕ ಕಲೆಗಳನ್ನು ರಕ್ಷಿಸಲು ಶಾಲೆ ಕಾಲೇಜುಗಳಲ್ಲಿ ಪ್ರತ್ಯೇಕ ಜಾನಪದ ಅಧ್ಯಯನ ವಿಭಾಗವನ್ನು ಸ್ಥಾಪಿಸುವ ಅಗತ್ಯವಿದೆ’ ಎಂದು ತಿಳಿಸಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ‘ಕನ್ನಡವನ್ನು ಉಳಿಸಿ, ಬೆಳೆಸುವ ಕೆಲಸಕ್ಕೆ ಸರ್ಕಾರವನ್ನು ಅವಲಂಬಿಸದೇ ಸ್ವಪ್ರೇರಿತವಾಗಿ ಭಾಷೆ, ಸಂಸ್ಕೃತಿಯ ರಕ್ಷಣೆಗೆ ಮುಂದಾಗಬೇಕು’ ಎಂದರು.

‘ಇಂಗ್ಲಿಷ್ ಭಾಷೆಯ ಪ್ರಭಾವ, ಐಟಿ ಕ್ಷೇತ್ರಗಳ ಆಗಮನದಿಂದಾಗಿ ಕನ್ನಡ ಮಾತನಾಡುವವರ ಸಂಖ್ಯೆ ಹಾಗೂ ನಾಮಫಲಕಗಳಲ್ಲಿ ಕನ್ನಡ ಬಳಕೆ ಕಡಿಮೆಯಾಗುತ್ತಿದೆ. ಕನ್ನಡವನ್ನು ಉಳಿಸಲು ಇಂತಹ ಸಂಘ ಸಂಸ್ಥೆಗಳು ನಡೆಸುವ ಸಮಾವೇಶಗಳು ಸಹಾಯವಾಗಲಿವೆ’ ಎಂದು ಹೇಳಿದರು.

ಅರಣ್ಯ ಸಚಿವ ಸಿ.ಪಿ.ಯೋಗೇಶ್ವರ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ಮತ್ತಿತರರು ಭಾಗವಹಿಸಿದ್ದರು.



ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದ ನಯನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಮೂರನೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮಾವೇಶದಲ್ಲಿ ಅರಣ್ಯ ಸಚಿವ ಸಿ.ಪಿ.ಯೋಗೇಶ್ವರ್ ಮತ್ತು ಎರಡನೇ ಸಾಂಸ್ಕೃತಿಕ ಸಮಾವೇಶದ ಅಧ್ಯಕ್ಷರಾಗಿದ್ದ ಹಾಸ್ಯಂ ನಟರಾಜ್ ಅವರು ಮೂರನೇ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಸಮಾವೇಶದ ಅಧ್ಯಕ್ಷ ಜನಪದ ಕಲಾವಿದ ಅಪ್ಪಗೆರೆ ತಿಮ್ಮರಾಜು ಅವರಿಗೆ ಧ್ವಜವನ್ನು ಹಸ್ತಾಂತರಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮತ್ತಿತರರು ಚಿತ್ರದಲ್ಲಿದ್ದಾರೆ. –ಪ್ರಜಾವಾಣಿ ಚಿತ್ರ

ಸಂಯುಕ್ತ ಕರ್ನಾಟಕ | ನವೆಂಬರ್ | 26 | 2012

ಬೆಂಗಳೂರಿನಲ್ಲಿ ಭಾನುವಾರ ರಾಜ್ಯಮಟ್ಟದ ಮೂರನೇ ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶವನ್ನು ಅರಣ್ಯ ಸಚಿವ ಸಿ.ಪಿ.ಯೋಗೀಶ್ವರ್ ಉದ್ಘಾಟಿಸಿದರು. ಕ.ಸಾ.ಪ. ಅಧ್ಯಕ್ಷ ಪುಂಡಲೀಕ ಹಾಲಂಬಿ, ಜಾನಪದ ಗಾಯಕ ಅಪ್ಪಗೆರೆ ತಿಮ್ಮರಾಜು, ಕವಿ ಪಾಣ್ಯಂ ನಟರಾಜ್, ಶಿಕ್ಷಣ ತಜ್ಞ ವೂಡೆ ಪಿ.ಕೃಷ್ಣ, ಸಮಾಜ ಸೇವಕ ಸಿ.ಜಿ. ಸುರೇಶ್ ಕುಮಾರ್, ಪ್ರತಿಷ್ಠಾನದ ಅಧ್ಯಕ್ಷ ಶಿಶಿರ ಉಪಸ್ಥಿತರಿದ್ದರು.




ಕನ್ನಡ ಪ್ರಭ ಬೆಂಗಳೂರು | ಬುಧವಾರ 21 | ನವೆಂಬರ್ 2012

ಆಡಳಿತ ಭಾಷೆಯಾಗಿ ಕನ್ನಡ ಬಳಕೆಯಾಗಲಿ: ಹಾಲಂಬಿ

ಬೆಂಗಳೂರು: ಕೇವಲ ರಾಜ್ಯೋತ್ಸವ ಆಚರಣೆ ಮಾಡಿದರೆ ಸಾಲದು ಎಲ್ಲ ವ್ಯವಹಾರಗಳಲ್ಲೂ ಕನ್ನಡ ಭಾಷೆಯನ್ನೇ ಆಡಳಿತ ಭಾಷೆಯಾಗಿ ಬಳಕೆ ಮಾಡಬೇಕೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ಹೇಳಿದರು.

ಶೇಷಾದ್ರಿಪುರ ಪದವಿ ಪೂರ್ವ ಕಾಲೇಜು ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ರಾಜ್ಯೋತ್ಸವ ಕೇವಲ ಆಚರಣೆಗೆ ಸೀಮಿತವಾಗುತ್ತಿದೆ. ಈ ರೀತಿ ಮಾಡುವುದರ ಬದಲು ಕನ್ನಡ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದರು.



8 ಜ್ಞಾನಪೀಠ ಪ್ರಶಸ್ತಿ ಪಡೆದುಕೊಂಡಿರುವ ಕರ್ನಾಟಕ ಅತ್ಯಂತ ಶ್ರೀಮಂತ ರಾಜ್ಯ. 10,000 ಭಾಷೆಗಳಲ್ಲಿ ಕನ್ನಡ 30ನೇ ಭಾಷೆಯಾಗಿದೆ. ಕನ್ನಡ ಜೀವಂತ ಭಾಷೆಯಾಗಿ ಉಳಿಯಲು ಪ್ರತಿಯೊಬ್ಬರು ಕನ್ನಡದಲ್ಲೇ ಮಾತನಾಡಬೇಕೆಂದು ಕರೆ ನೀಡಿದರು.

ಜಾಗತಿಕರಣದ ಹಿನ್ನೆಲೆಯಲ್ಲಿ ಅಂಗ್ಲಭಾಷೆಗೆ ಅನ್ನ ನೀಡುವ ಭಾಷೆ ಎಂದು ಹೇಳಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ಆದರೆ, ಯಾವ ಭಾಷೆಯೂ ಅನ್ನ ನೀಡುವುದಿಲ್ಲ ಎಂಬ ಸತ್ಯವನ್ನು ಸಾರ್ವಜನಿಕರು ತಿಳಿದುಕೊಳ್ಳಬೇಕು ಎಂದರು.

ಕನ್ನಡ ಭಾಷೆ ಬೆಳವಣಿಗೆಗಾಗಿ ಕೇಂದ್ರ ಸರ್ಕಾರ ಯಾವುದೇ ರೀತಿಯ ಅನುದಾನ ನೀಡುತ್ತಿಲ್ಲ. ರಾಜಕೀಯ ವ್ಯಕ್ತಿಗಳು ಕೇವಲ ಅಧಿಕಾರ ಉಳಿಸಿಕೊಳ್ಳುವುದನ್ನು ನೋಡಿಕೊಳ್ಳುತ್ತಾರೆಯೇ ಹೊರತು ಭಾಷೆ ಬೆಳವಣಿಗೆ ಬಗ್ಗೆ ಗಮನಹರಿಸುತ್ತಿಲ್ಲವೆಂದು ಆರೋಪಿಸಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮಾತನಾಡಿ, ಮಾತೃಭಾಷೆ ಚೆನ್ನಾಗಿ ಗೊತ್ತಿದ್ದರೆ ಉಳಿದ ಭಾಷೆಗಳನ್ನು ಹಿಡಿತಕ್ಕೆ ತೆಗೆದುಕೊಳ್ಳುವುದು ಸುಲಭ. ಪ್ರತಿಯೊಬ್ಬರೂ ಕನ್ನಡ ಮಾತನಾಡಬೇಕು. ಕನ್ನಡದ ಪರವಾಗಿ ಹೋರಾಟ ನಡೆಸುವ ಬಗ್ಗೆ ಮನಸ್ಸು ಮಾಡಬೇಕೆಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ನಂದನ ಕಲಾ ತಂಡದವರು ಡಾ. ಸಿದ್ಧಲಿಂಗಯ್ಯ ಅವರು ಬರೆದಿರುವ 'ಏಕಲವ್ಯ' ಮತ್ತು ಪ್ರೊ. ಕಿ.ರಂ. ನಾಗರಾಜು ಅವರ 'ಕಾಲಜ್ಞಾನಿ ಕನಕ' ಎಂಬ ನಾಟಕಗಳನ್ನು ಪ್ರದರ್ಶಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಸುರೇಶ್, ಗೌರವ ಕೋಶಾಧ್ಯಕ್ಷ ಬಿ.ಎಂ. ಪಾರ್ಥಸಾರಥಿ, ಎಸ್. ರಾಮಲಿಂಗೇಶ್ವರ ಭಾಗವಹಿಸಿದ್ದರು.

ಭಾನುವಾರ 18 ನವೆಂಬರ್ 2012



ನಗರದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಪ್ರೊ.ಬಿ.ನಾರಾಯಣಮ್ಮ ಪ್ರತಿಷ್ಠಾನ ವತಿಯಿಂದ ಮಡೆಸ್ನಾನ ಮತ್ತು ಬೆತ್ತಲೆ ಸೇವೆ ವಿರುದ್ಧ ಚಿಂತನಾ ಕಾರ್ಯಕ್ರಮದಲ್ಲಿ ಹಿರಿಯ ಸಂಶೋಧಕ ಡಾ.ಎಂ.ಚಿದಾನಂದಮೂರ್ತಿ, ಪ್ರೊ.ಬಿ.ನಾರಾಯಣಮ್ಮ, ರಾಷ್ಟ್ರ ಪ್ರಶಸ್ತಿ ವಿಜೇತೆ ಸುಮಂಗಲಿ ಸೇವಾಶ್ರಮದ ಸುಶೀಲಮ್ಮ, ನಟ ಶಿವರಾಂ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಉಪಾಧ್ಯಕ್ಷ ಎಂ.ನರಸಿಂಹಲು , ಡಾ.ವೂಡೆ.ಪಿ.ಕೃಷ್ಣ ಇತರರು ಪಾಲ್ಗೊಂಡಿದ್ದರು.

ಪ್ರಜಾವಾಣಿ

ಸೋಮವಾರ 12ನೇ ನವೆಂಬರ್ 2012

ಅನಿಷ್ಟ ಪದ್ಧತಿ ನಿವಾರಣೆಗೆ ಯತ್ನಿಸಿ: ಚಿಮೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವ ಮಡೆಸ್ನಾನ ಮತ್ತು ಚಿತ್ರಲಸೇವೆಯಂತಹ ಪದ್ಧತಿಗಳನ್ನು ಕಿತ್ತೊಗೆಯುವ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕು' ಎಂದು ಹಿರಿಯ ಸಂಶೋಧಕ ಡಾ.ಎಂ.ಚಿದಾನಂದ ಮೂರ್ತಿ ಅಭಿಪ್ರಾಯಪಟ್ಟರು.

ಪ್ರೊ.ಬಿ.ನಾರಾಯಣಮ್ಮ ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಮಡೆಸ್ನಾನ, ಚಿತ್ರಲಸೇವೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು' ಕುರಿತ ಚಿಂತನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಡೆಸ್ನಾನ ಪದ್ಧತಿಯನ್ನು ತಡೆಯುವ ದಿಸೆಯಲ್ಲಿ ಹೈಕೋರ್ಟ್ ಈಚೆಗೆ ನೀಡಿರುವ ತೀರ್ಪು ಮಹತ್ವವುಳ್ಳದಾಗಿದೆ. ಜನರ ನಂಬಿಕೆ ಹಾಗೂ ಅಸಮಾನತೆಯನ್ನು ತೊಡಗಿ ಹಾಕುವಲ್ಲಿ ಇಂತಹ ತೀರ್ಪುಗಳು ಪ್ರಮುಖ ಪಾತ್ರ ವಹಿಸುತ್ತವೆ' ಎಂದರು.

'ಮಡೆಸ್ನಾನದಂತಹ ಪದ್ಧತಿಯ ಆಚರಣೆಗೆ ಯಾವುದೋ ಒಂದು ಪ್ರಮುಖ ಜಾತಿ ಮಾತ್ರ ಕಾರಣವಾಗಿರುವುದಿಲ್ಲ. ಇಂತಹ ಸೂಕ್ಷ್ಮ ವಿಚಾರದಲ್ಲಿ ಒಂದೇ ಜಾತಿಯನ್ನು ಗುರಿಯಾಗಿಟ್ಟುಕೊಂಡು ಆರೋಪಿಸುವುದು ಸರಿಯಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದರು.

'ಚಿತ್ರಲಸೇವೆಯಂತಹ ಪದ್ಧತಿಗಳನ್ನು ಸಂಪೂರ್ಣ ಹತ್ತಿಕ್ಕಲು ಸಾಧ್ಯವಾಗದೇ ಇರುವುದಕ್ಕೆ ನಾಗರಿಕ ಸಮಾಜ ತಲೆಗ್ಗಿಸಬೇಕು. ವೇಶ್ಯ ವೃತ್ತಿಯಲ್ಲಿದ್ದ ಸೂಳೆ ಸಂಕವ್ವ 'ನಿರ್ಲಜ್ಜೇಶ್ವರ' ಹೆಸರಿನಲ್ಲಿ ಬರೆದಿರುವ ವಚನಗಳು ಶೋಷಿತ ಹೆಣ್ಣುಮಕ್ಕಳ ಜೀವನವನ್ನು ತೆರೆದಿಡುತ್ತದೆ' ಎಂದು ಹೇಳಿದರು. ಸುಮಂಗಲಿ ಸೇವಾಶ್ರಮ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ, 'ಆಧುನಿಕ ಜೀವನದಲ್ಲಿ ಹೆಣ್ಣಿನ ವಿರುದ್ಧ ನಡೆಯುತ್ತಿರುವ ಶೋಷಣೆ ಹತ್ತಿಕ್ಕುವಲ್ಲಿ ಹೊಸ ಮಾರ್ಗಗಳನ್ನು ಮಹಿಳೆಯರು ಕಂಡುಕೊಳ್ಳಬೇಕು' ಎಂದು ಕರೆ ನೀಡಿದರು.

ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷ ಎಂ.ನರಸಿಂಹಲು, ರಂಗಭೂಮಿ ಕಲಾವಿದ ಚಂದ್ರಮೌಳಿ, ನಟ ಶಿವರಾಂ, ಪ್ರತಿಷ್ಠಾನದ ಅಧ್ಯಕ್ಷೆ ಪ್ರೊ.ಬಿ.ನಾರಾಯಣಮ್ಮ ಇತರರು ಉಪಸ್ಥಿತರಿದ್ದರು.



ಪ್ರೊ.ಬಿ.ನಾರಾಯಣಮ್ಮ ಪ್ರತಿಷ್ಠಾನವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಮಡೆಸ್ನಾನ, ಚಿತ್ರಲಸೇವೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳು' ಕುರಿತ ಚಿಂತನಾ ಕಾರ್ಯಕ್ರಮದಲ್ಲಿ ವ್ಯಂಗ್ಯಚಿತ್ರಕಾರ ಟಿ.ನಾರಾಯಣಸ್ವಾಮಿ, ಜಾನಪದ ತಜ್ಞ ಪ್ರೊ.ಡಿ.ಲಿಂಗಯ್ಯ ಅವರ ಭಾವಚಿತ್ರಕ್ಕೆ ಹಿರಿಯ ಸಂಶೋಧಕ ಡಾ.ಎಂ.ಚಿದಾನಂದಮೂರ್ತಿ ಅವರು ಪುಷ್ಪನಮನ ಸಲ್ಲಿಸಿದರು. ನಟ ಶಿವರಾಂ, ಪ್ರತಿಷ್ಠಾನದ ಅಧ್ಯಕ್ಷೆ ಪ್ರೊ.ಬಿ.ನಾರಾಯಣಮ್ಮ, ಸುಮಂಗಲಿ ಸೇವಾಶ್ರಮ ಅಧ್ಯಕ್ಷೆ ಎಸ್.ಜಿ.ಸುಶೀಲಮ್ಮ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷ ಎಂ.ನರಸಿಂಹಲು, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಇತರರು ಚಿತ್ರದಲ್ಲಿದ್ದಾರೆ. – ಪ್ರಜಾವಾಣಿ ಚಿತ್ರ

ಕೀ.ಶೇ. ಮರಿಯಪ್ಪನವರ ಸಂಸ್ಮರಣೆ

(05.11.2012ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಪಂಪ ಸಭಾಂಗಣದಲ್ಲಿ ಎಚ್.ಬಿ.ಎಸ್. ಆರಾಧ್ಯ ಅವರು ಮಾಡಿದ ಭಾಷಣ)

- ಸಂಪಾದಕ



ಎಂ.ಆರ್. ಅನಂತಮೂರ್ತಿ ನಾಡಗೀತೆ ಹಾಡಿದರು. ರಾಣಿ ಗೋವಿಂದರಾಜು, ಬಿ.ಎ. ನಂಜುಂಡಸ್ವಾಮಿ, ಎಚ್.ಬಿ.ಎಸ್. ಆರಾಧ್ಯ, ಡಾ. ವೂಡೆ ಪಿ. ಕೃಷ್ಣ, ಬಿ.ಟಿ. ರಾಮ ಚಂದ್ರ, ಬಿ.ಆರ್. ರಾಮೇಗೌಡ ಮತ್ತು ಎಂ.ಆರ್. ಅನಂತಮೂರ್ತಿ.



ಉಪನ್ಯಾಸ ನೀಡಿದ ಎಚ್.ಬಿ.ಎಸ್. ಆರಾಧ್ಯ ಅವರಿಗೆ ಎಸ್.ಎಸ್. ಪಾಟೀಲ್ ಅವರು ಪುಷ್ಪಮಾಲೆ ಹಾಕಿ ಗೌರವಿಸುತ್ತಿದ್ದಾರೆ.

ಸರಳತೆ ನಟನೆಯಿಂದ ಬರೋಲ್ಲ, ಅದೊಂದು ಪ್ರಚಂಡ ಶಕ್ತಿ-ಮಾಲಿ ಮರಿಯಪ್ಪ ಸಂಸ್ಮರಣೆ ಸಮಾರಂಭದಲ್ಲಿ ಡಾ. ವೂಡೆ ಪಿ. ಕೃಷ್ಣ

'ಗಾಂಧಿವಾದಿಗಳಾಗದಿದ್ದರೂ ಅನುಯಾಯಿಗಳಾಗಿ. ಅದೇ ರೀತಿ, ದೇಶಕ್ಕಾಗಿ ಅರ್ಪಿಸಿ ಶ್ರಮಿಸಿ, ಉನ್ನತ ಮೌಲ್ಯಗಳನ್ನು ಬಿಟ್ಟುಹೋಗಿರುವ ಮಾಲಿ ಮರಿಯಪ್ಪನವರ ಅನುಯಾಯಿಗಳಾಗಿ. ಗಾಂಧೀಜಿಯವರಂತೆಯೇ ಬದುಕಿದ ಮಾಲಿ ಮರಿಯಪ್ಪನವರಲ್ಲಿದ್ದ ಸರಳತೆಯೇ ಒಂದು ಆಕರ್ಷಣೆ. ಅದು ನಟನೆಯಿಂದ ಬರುವುದಿಲ್ಲ. ಅದೊಂದು ಪ್ರಬಲ ಶಕ್ತಿ' ಎಂದು ಶಿಕ್ಷಣ ತಜ್ಞ ಡಾ. ವೂಡೆ ಪಿ. ಕೃಷ್ಣ ಹೇಳಿದರು. ಇತ್ತೀಚೆಗೆ ಸಾಹಿತ್ಯ ಪರಿಷತ್ತಿನ ಪಂಪ ಸಭಾಂಗಣದಲ್ಲಿ ಮಾಲಿ ಮರಿಯಪ್ಪನವರ ಅಭಿಮಾನಿಗಳ ಬಳಗ ಏರ್ಪಡಿಸಿದ್ದ 'ತುಮಕೂರಿನ ಗಾಂಧಿ ಕೀ.ಶೇ. ಮಾಲಿ ಮರಿಯಪ್ಪ ಸಂಸ್ಮರಣಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯ ಉಪನ್ಯಾಸ ನೀಡಿದ ಲೇಖಕಿ ರಾಣಿ ಗೋವಿಂದರಾಜು ಅವರು 1911ರಲ್ಲಿ ಸಿರಾದಲ್ಲಿ ಜನಿಸಿ 1968ರಲ್ಲಿ ನಿಧನರಾದ ಸ್ವಾತಂತ್ರ್ಯ ಸೇನಾನಿ, ಮಾಜಿ ಸಚಿವ, ಮಾಜಿ ಸಂಸದ ಮಾಲಿ ಮರಿಯಪ್ಪನವರ ಹೋರಾಟದ ಬದುಕು, ಸಾಧನೆಗಳ ಸಂಕ್ಷಿಪ್ತ ಚಿತ್ರಣ ನೀಡಿದರು. ಗಾಂಧೀಜಿಯವರು ಮಧುಗಿರಿಗೆ ಬಂದ ವಿಷಯ ತಿಳಿದು, ಸಿರಾದಿಂದ 23 ಮೈಲಿಗಳ ಕಾಲ್ನಡಿಗೆಯಲ್ಲೇ ಹೋಗಿ ಗಾಂಧೀಜಿಯವರ ದರ್ಶನ ಮಾಡಿದ್ದುದನ್ನು, ರಾಜ್ಯದ ಮಂತ್ರಿಯಾಗಿದ್ದರೂ ದೆಹಲಿ ಮತ್ತಿತರ ಸ್ಥಳಗಳಿಗೆ ರೈಲಿನಲ್ಲೇ ಹೋಗುತ್ತಿದ್ದುದನ್ನು, ಪ್ರಸಿದ್ಧ ವಕೀಲರಾಗಿದ್ದರೂ ನ್ಯಾಯಾಲಯದ ಹೊರಗೆ ರಾಜಿ ಮಾಡಿಸಿ ಉಭಯ ಕಕ್ಷಿದಾರರಿಗೂ ಸಮಾಧಾನವಾಗುವಂತೆ ಮಾಡಿ ಪಂಚಾಯಿತಿ ಮರಿಯಪ್ಪ ಎಂದು ಹೆಸರು ಗಳಿಸಿದುದನ್ನು ತಿಳಿಸಿದರು.

ಮುಖ್ಯ ಅತಿಥಿ ಬಿ.ಆರ್. ರಾಮೇಗೌಡ ಮಾತನಾಡಿ, ಮಹಾತ್ಮಗಾಂಧಿಯವರ ನಡೆ ನುಡಿಗಳನ್ನೇ ಅನುಸರಿಸಿ, ತುಮಕೂರಿನ ಗಾಂಧಿ ಎಂದು ಕರೆಯಲ್ಪಡುತ್ತಿದ್ದ ಮಾಲಿ ಮರಿಯಪ್ಪನವರು ರಾಜಕೀಯದಲ್ಲಿ ತಮ್ಮ ಸ್ವಂತ ಆಸ್ತಿ ಪಾಸ್ತಿ ಕಳೆದುಕೊಂಡರು. ಈಗಿನ ರಾಜಕಾರಣಿಗಳ ಪ್ರಮುಖ ಉದ್ದೇಶವೇ ಲೂಟಿ ಹೊಡೆಯುವುದು ಎಂದು ಹೇಳಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಮಾಲಿ ಮರಿಯಪ್ಪನವರ ಪುತ್ರಿ ಡಾ. ಆಲಮ್ಮ ಮಾರಣ್ಣನವರು 'ಮಂತ್ರಿ, ಸಂಸದರಾದರೂ ಬೆಂಗಳೂರಿನಲ್ಲಿ ಒಂದು ನಿವೇಶನವನ್ನೂ ಹೊಂದಿರದಿದ್ದ ನಮ್ಮ ತಂದೆ ಸಾಯುವಾಗ 63,000/- ರೂ.ಗಳ ಸಾಲ ಬಿಟ್ಟು ಹೋಗಿದ್ದರು. ಅವರ ಉದಾತ್ತ ಧ್ಯೇಯಗಳನ್ನು, ಆದರ್ಶಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಅವರ ಹೆಸರಿನಲ್ಲಿ ಮೂರು ಉಚಿತ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದ್ದೇವೆ' ಎಂದು ಹೇಳಿದರು.

ಮುಖ್ಯ ಅತಿಥಿ ಎಚ್.ಬಿ.ಎಸ್. ಆರಾಧ್ಯ ಅವರು 'ವಕೀಲ ವೃತ್ತಿಯನ್ನು ಗ್ರಾಮೀಣ ಜನರ ಸೇವೆ ಎಂದೇ ಭಾವಿಸಿದ್ದ ಮಾಲಿ ಮರಿಯಪ್ಪನವರು ತಮ್ಮ ಕೊನೆಯುಸಿರಿನವರೆಗೂ ಗಾಂಧಿ ಅನುಯಾಯಿಯಾಗಿದ್ದರು. 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು' ಎಂದು ಹೇಳಿದರು.



ಸಮಾರಂಭದಲ್ಲಿ ಉಪಸ್ಥಿತರಿದ್ದ ಮಾಲಿ ಕುಟುಂಬದ ಡಾ. ಸುಶೀಲಮ್ಮನವರಿಗೆ ರಾಣಿ ಗೋವಿಂದರಾಜು ಪುಷ್ಪ ಮಾಲೆ ಹಾಕಿ ಗೌರವಿಸಿದರು.



ಮಾಲಿ ಮರಿಯಪ್ಪನವರ ಪುತ್ರಿ ಡಾ. ಆಲಮ್ಮ ಮಾರಣ್ಣ ಅವರು ತಮ್ಮ ತಂದೆಯವರ ಬಗೆಗೆ ಸೊಗಸಾದ ಉಪನ್ಯಾಸ ನೀಡಿದ ಕವಯಿತ್ರಿ, ರಾಣಿ ಗೋವಿಂದರಾಜು ಅವರನ್ನು ಗೌರವಿಸಿದರು.

2012

ಮರೆಯಲಾಗದ ಮಾಲಿ ಮರಿಯಪ್ಪ

ಮಧುಗಿರಿಯ ಗಾಂಧಿ, ತುಮಕೂರಿನ ಗಾಂಧಿ ಎಂದೇ ಖ್ಯಾತರಾಗಿದ್ದ ಮಹಾನ್ ಸ್ವಾತಂತ್ರ್ಯ ಯೋಧ ಮಾಲಿ ಮರಿಯಪ್ಪನವರು ತುಮಕೂರು ಜಿಲ್ಲೆಯ ಹೆಮ್ಮೆಯ ವೀರಾಗ್ರಣಿ ಎಂದು ಎಸ್. ನಿಜಲಿಂಗಪ್ಪ, ಕೆ.ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಆರ್.ಆರ್. ದಿವಾಕರ್, ಬಿ.ಡಿ. ಜತ್ತಿ, ಕಡಿದಾಳ್ ಮಂಜಪ್ಪ ಮೊದಲಾದವರಿಂದ ಪ್ರಶಂಸೆಗೆ ಒಳಗಾಗಿದ್ದಾರೆ. ತುಮಕೂರು ಜಿಲ್ಲೆಯ ಸಿರಾ ಪಟ್ಟಣದಲ್ಲಿ 1911ರಲ್ಲಿ ಜನಿಸಿ 1968ರಲ್ಲಿ ನಿಧನರಾದ ಅವರು ಬಾಲ್ಯದಿಂದಲೂ ಮಹಾತ್ಮ ಗಾಂಧಿಯವರಲ್ಲಿ ಭಕ್ತಿ ಇರಿಸಿಕೊಂಡಿದ್ದರು. ವಿದ್ಯಾರ್ಥಿಯಾಗಿದ್ದಾಗ ಗಾಂಧೀಜಿಯವರು ಮಧುಗಿರಿಗೆ ಬಂದಿದ್ದಾಗ, ಸಮಾನಮನಸ್ಕ ಗೆಳೆಯರೊಡನೆ ಸಿರಾದಿಂದ ಮಧುಗಿರಿಗೆ 38 ಕಿಲೋಮೀಟರ್ ನಡೆದುಕೊಂಡೇ ಹೋಗಿ ಗಾಂಧೀಜಿಯವರ ದರ್ಶನ ಮಾಡಿದ್ದರು.

> ಮಾಲಿ ಮರಿಯಪ್ಪನವರ ನಿಸ್ಪೃಹ ಸಮಾಜ ಸೇವೆ: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇಂದು ಸ್ಮರಣೆ

1938ರಲ್ಲಿ ಟಿ. ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮಾಲಿ ಮರಿಯಪ್ಪನವರು ಪ್ರಮುಖ ಪಾತ್ರ ವಹಿಸಿದ್ದರು. ವಿದುರಾಶ್ವತ್ಥ ಚಳವಳಿ, ಭಾರತ ಬಿಟ್ಟು ತೊಲಗಿ ಚಳವಳಿ, ಸ್ವಾತಂತ್ರ್ಯ ನಂತರ ಮೈಸೂರು ಮೈಸೂರು ಚಲೋ ಚಳವಳಿ ಹೀಗೆ ಅನೇಕ ಚಳವಳಿಗಳಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದರು. ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸಿದವರಲ್ಲಿ ಇವರು ಪ್ರಮುಖರು.

ಶ್ರೀಮಂತ ಮನೆತನದವರಾದರೂ ವಕೀಲರಾಗಿದ್ದ ಮಾಲಿ ಮರಿಯಪ್ಪನವರು ಸರಳತೆ, ಸಜ್ಜನಿಕೆಗೆ ಹೆಸರಾಗಿದ್ದರು. ಸ್ವಾತಂತ್ರ್ಯ ನಂತರ ಶಾಸಕರಾಗಿ, ಮಂತ್ರಿಯಾಗಿ, ಸಂಸದರಾಗಿ ನಿಸ್ಪೃಹ ಸೇವೆ ಸಲ್ಲಿಸಿ, ತಮ್ಮ ಕೊನೆಯುಸಿರಿನವರೆಗೂ ದೇಶ ಕಟ್ಟುವ, ದೀನ ದಲಿತರ ಬದುಕು ಸುಧಾರಿಸುವ ಕಾಯಕದಲ್ಲಿ ತೊಡಗಿದರು. ಮಾಲಿ ಮರಿಯಪ್ಪ ಲಕ್ಷ್ಮಮ್ಮ ದಂಪತಿಗಳ ಸ್ಮರಣಾರ್ಥ ಅವರ



ಕುಟುಂಬದವರು ಬಡ ವಿದ್ಯಾರ್ಥಿಗಳ ನಿಧಿ ಮತ್ತು ವಿದ್ಯಾರ್ಥಿನಿಲಯ ಸ್ಥಾಪಿಸಿ, ಸಾವಿರಾರು ಬಡ ವಿದ್ಯಾರ್ಥಿಗಳ ಬದುಕನ್ನು ರೂಪಿಸಿದ್ದಾರೆ. ಈ ನಿಧಿಗೆ ವೂಡೆ ಎಚ್. ಮಟ್ಟಯ್ಯ ಕುಟುಂಬದವರು ಉದಾರ ದೇಣಿಗೆ ನೀಡಿ ಇನ್ನಷ್ಟು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಿದ್ದಾರೆ.

ಮಾಲಿ ಮರಿಯಪ್ಪನವರನ್ನು ಸ್ಮರಿಸಲು ಅವರ ಅಭಿಮಾನಿಗಳು 5-11-2012ರ ಸಂಜೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಡಾ. ವೂಡೆ ಪಿ. ಕೃಷ್ಣ ಅಧ್ಯಕ್ಷತೆ ವಹಿಸುತ್ತಾರೆ. ಬಿ.ಟಿ. ರಾಮಚಂದ್ರ ಉದ್ಘಾಟನೆ ನೆರವೇರಿಸಲಿದ್ದಾರೆ. ಲೇಖಕಿ ರಾಣಿ ಗೋವಿಂದರಾಜು ಅವರು ಮಾಲಿ ಮರಿಯಪ್ಪನವರ ನಿಸ್ಪೃಹ ಸಮಾಜ ಸೇವೆಯ ಬಗೆಗೆ ಉಪನ್ಯಾಸ ನೀಡಲಿದ್ದಾರೆ.

ಬಿ.ಆರ್. ರಾಮೇಗೌಡ, ಬಿ.ವಿ. ನಂಜುಂಡಸ್ವಾಮಿ ಮತ್ತು ಎಚ್.ಬಿ.ಎಸ್. ಆರಾಧ್ಯ ಅವರು ನುಡಿ ಕಾಣಿಕೆ ಸಲ್ಲಿಸಲಿದ್ದಾರೆ.

–ರು. ಬಸಪ್ಪ

ವಿಜಯವಾಣಿ
BANGALORE

ಸೋಮವಾರ
5 ನವೆಂಬರ್ 2012

ಸಂಸ್ಮರಣೆ

ಮಾಲಿ ಮರಿಯಪ್ಪ ಅಭಿಮಾನಿಗಳ ಬಳಗ, ಮಾಜಿ ಸಚಿವ ಮಾಲಿ ಮರಿಯಪ್ಪ ಸಂಸ್ಮರಣಾ ಸಮಾರಂಭ. ಚಾಲನೆ: ಬಿ.ಟಿ. ರಾಮಚಂದ್ರ.



ಅಧ್ಯಕ್ಷತೆ: ಶಿಕ್ಷಣ ತಜ್ಞ ಡಾ.ವೂಡೆ ಪಿ. ಕೃಷ್ಣ. ಉಪನ್ಯಾಸಕರು: ರಾಣಿ ಗೋವಿಂದ ರಾಜು. ಅತಿಥಿಗಳು: ಬಿ.ಆರ್. ರಾಮೇಗೌಡ, ಎಚ್.ಬಿ.ಎಸ್. ಆರಾಧ್ಯ, ಬಿ.ಎ. ನಂಜುಂಡಸ್ವಾಮಿ. ಸ್ಥಳ: ಪಂಪ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ. ಸಂಜೆ 5.

ನಾವು ಕನ್ನಡಿಗರು

ಬುಧವಾರ
31-10-2012

ಮರೆಯಲಾಗದ ಮಾಲಿ ಮರಿಯಪ್ಪ



ಮಧುಗಿರಿಯ ಗಾಂಧಿ, ತುಮಕೂರಿನ ಗಾಂಧಿ ಎಂದೇ ಖ್ಯಾತರಾಗಿದ್ದ ಮಹಾನ್ ಸ್ವಾತಂತ್ರ್ಯ ಯೋಧ ಮಾಲಿ ಮರಿಯಪ್ಪನವರು ತುಮಕೂರು ಜಿಲ್ಲೆಯ ಹೆಮ್ಮೆಯ ವೀರಾಗ್ರಣಿ ಎಂದು ಎಸ್. ನಿಜಲಿಂಗಪ್ಪ, ಕೆ.ಸಿ.ರೆಡ್ಡಿ, ಕೆಂಗಲ್ ಹನುಮಂತಯ್ಯ, ಆರ್.ಆರ್. ದಿವಾಕರ್, ಬಿ.ಡಿ. ಜತ್ತಿ, ಟಿ. ಸಿದ್ದಲಿಂಗಯ್ಯ, ಕಡಿದಾಳ್ ಮಂಜಪ್ಪ ಮೊದಲಾದವರಿಂದ ಪ್ರಶಂಸೆಗೆ ಒಳಗಾಗಿದ್ದಾರೆ. ತುಮಕೂರು ಜಿಲ್ಲೆಯ ಸಿರಾ ಪಟ್ಟಣದಲ್ಲಿ 1911ರಲ್ಲಿ ಜನಿಸಿ 1968ರಲ್ಲಿ ನಿಧನರಾದ ಅವರು ಬಾಲ್ಯ ದಿಂದಲೂ ಮಹಾತ್ಮಗಾಂಧಿಯವರಲ್ಲಿ ಭಕ್ತಿ ಇರಿಸಿಕೊಂಡಿದ್ದರು. ವಿದ್ಯಾರ್ಥಿಯಾಗಿದ್ದಾಗ ಗಾಂಧೀಜಿಯವರು ಮಧುಗಿರಿಗೆ ಬಂದಿದ್ದಾಗ, ಸಮಾನ ಮನಸ್ಕ ಗೆಳೆಯರೊಡನೆ ಸಿರಾದಿಂದ ಮಧುಗಿರಿಗೆ 38 ಕಿಲೋಮಿಟರ್ ನಡೆದುಕೊಂಡೇ ಹೋಗಿ ಗಾಂಧೀಜಿಯವರ ದರ್ಶನ ಮಾಡಿದ್ದರು.

1938ರಲ್ಲಿ ಟಿ. ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮಾಲಿ ಮರಿಯಪ್ಪನವರು ಪ್ರಮುಖ ಪಾತ್ರ ವಹಿಸಿದ್ದರು. ವಿದುರಾಶ್ವತ್ಥ ಚಳವಳಿ, ಭಾರತ ಬಿಟ್ಟು ತೊಲಗಿ ಚಳವಳಿ, ಸ್ವಾತಂತ್ರ್ಯಾ ನಂತರ ಮೈಸೂರು ಚಲೋ ಚಳವಳಿ ಹೀಗೆ ಅನೇಕ ಚಳವಳಿಗಳಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆ ವಾಸ ಅನುಭವಿಸಿದರು. ತುಮಕೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಿಡಿ ಹೊತ್ತಿಸಿದವರಲ್ಲಿ ಇವರು ಪ್ರಮುಖರು.

ಶ್ರೀಮಂತ ಮನೆತನದವರಾದರೂ ವಕೀಲರಾಗಿದ್ದ ಮಾಲಿ ಮರಿಯಪ್ಪನವರು ಸರಳತೆ, ಸಜ್ಜನಿಕೆಗೆ ಹೆಸರಾಗಿದ್ದರು. ಸ್ವಾತಂತ್ರ್ಯಾ ನಂತರ ಶಾಸಕರಾಗಿ, ಮಂತ್ರಿಯಾಗಿ, ಸಂಸದರಾಗಿ ನಿಸ್ಪೃಹ ಸೇವೆ ಸಲ್ಲಿಸಿ, ತಮ್ಮ ಕೊನೆಯುಸಿರಿನವರೆಗೂ ದೇಶ ಕಟ್ಟುವ, ದೀನ ದಲಿತರ ಬದುಕು ಸುಧಾರಿಸುವ ಕಾಯಕದಲ್ಲಿ ತೊಡಗಿದರು. ಮಾಲಿ ಮರಿಯಪ್ಪ ಲಕ್ಷ್ಮಮ್ಮ ದಂಪತಿಗಳ ಸ್ಮರಣಾರ್ಥ ಅವರ ಕುಟುಂಬದವರು ಬಡ ವಿದ್ಯಾರ್ಥಿಗಳ ನಿಧಿ ಮತ್ತು ವಿದ್ಯಾರ್ಥಿ ನಿಲಯ ಸ್ಥಾಪಿಸಿ, ಸಾವಿರಾರು ಬಡ ವಿದ್ಯಾರ್ಥಿಗಳ ಬದುಕನ್ನು ರೂಪಿಸಿದ್ದಾರೆ. ಈ ನಿಧಿಗೆ ವೂಡೆ ಎಚ್. ಪುಟ್ಟಯ್ಯ ಕುಟುಂಬದವರು ಉದಾರ ದೇಣಿಗೆ ನೀಡಿ ಇನ್ನಷ್ಟು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಿದ್ದಾರೆ. ಮಾಲಿ ಮರಿಯಪ್ಪನವರನ್ನು ಸ್ಮರಿಸಲು ಅವರ ಅಭಿಮಾನಿಗಳು 5-11-2012ರ ಸಂಜೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಡಾ. ವೂಡೆ ಪಿ. ಕೃಷ್ಣ ಅಧ್ಯಕ್ಷತೆ ವಹಿಸುತ್ತಾರೆ. ಬಿ.ಟಿ. ರಾಮಚಂದ್ರ ಉದ್ಘಾಟನೆ ನೆರವೇರಿಸಲಿದ್ದಾರೆ. ಲೇಖಕಿ ರಾಣಿ ಗೋವಿಂದರಾಜು ಅವರು ಮಾಲಿಮರಿಯಪ್ಪನವರ ನಿಸ್ಪೃಹ ಸಮಾಜ ಸೇವೆಯ ಬಗೆಗೆ ಉಪನ್ಯಾಸ ನೀಡಲಿದ್ದಾರೆ.

ಬಿ.ಆರ್. ರಾಮೇಗೌಡ, ಬಿ.ಎ. ನಂಜುಂಡಸ್ವಾಮಿ ಮತ್ತು ಎಚ್.ಬಿ.ಎಸ್. ಆರಾಧ್ಯ ಅವರು ನುಡಿ ಕಾಣಿಕೆ ಸಲ್ಲಿಸಲಿದ್ದಾರೆ.

ಉದಯವಾಣಿ
ಮಂಗಳವಾರ | ಅಕ್ಟೋಬರ್ | 30 | 2012

5ರಂದು ಸ್ವಾತಂತ್ರ್ಯ ಹೋರಾಟಗಾರ ಮಾಲಿ ಮರಿಯಪ್ಪ ಸ್ಮರಣೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಮ್ಯಾಲಿಮರಿಯಪ್ಪ ಅವರನ್ನು ಸ್ಮರಿಸಲು ಅಭಿಮಾನಿಗಳು ನ.5 ರಂದು ಕನ್ನಡ ಸಾಹಿತ್ಯ ಪರಿಷತ್‌ನ ಕುವೆಂಪು ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಕಾರ್ಯಕ್ರಮವನ್ನು ಬಿ.ಟಿ. ರಾಮಚಂದ್ರ ಉದ್ಘಾಟಿಸಲಿದ್ದು, ಡಾ. ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಲೇಖಕಿ ರಾಣಿ ಗೋವಿಂದರಾಜು ಅವರು ಮಾಲಿ ಮರಿಯಪ್ಪನ ಅವರ ಸಮಾಜ ಸೇವೆಯ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. 1938ರಲ್ಲಿ ಸ್ವಾತಂತ್ರ್ಯ ಹೋರಾಟಗಾರ ಟಿ. ಸಿದ್ದಲಿಂಗಯ್ಯ ನೇತೃತ್ವದಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮಾಲಿ ಮರಿಯಪ್ಪ ಪ್ರಮುಖ ಪಾತ್ರವಹಿಸಿದ್ದರು. ಇದಲ್ಲದೆ, ವಿದುರಾಶ್ವತ್ಥ ಚಳವಳಿ, ಭಾರತ ಬಿಟ್ಟು ತೊಲಗಿ, ಮೈಸೂರು ಚಳವಳಿ ಸೇರಿ ಹಲವು ಹೋರಾಟದಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದರು.

ಬೆಂ ಗ ಳೂ ರು
ಶನಿವಾರ, 27 ಅಕ್ಟೋಬರ್ 2012
ಹೊಸ ದಿಗಂತ

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ 5ನೇ ರಾಷ್ಟ್ರೀಯ ಅಧಿವೇಶನದಲ್ಲಿ ಶಿಕ್ಷಣ ಸಚಿವ ಕಾಗೇರಿ

ಶಿಕ್ಷಣದ ವಾಣಿಜ್ಯೀಕರಣದಿಂದ ಸಮಸ್ಯೆ ಸೃಷ್ಟಿ

ದಿಗಂತ ವರದಿ: ಬೆಂಗಳೂರು,ಅ.26:
ಶಿಕ್ಷಣವಿದೇಶೀಕರಣಹಾಗೂವಾಣಿಜ್ಯೀಕರಣದಿಂದ ಯುವ ಪೀಳಿಗೆಯ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಈ ಬಗ್ಗೆ ಶಿಕ್ಷಕರು ಗಂಭೀರ ಚಿಂತನೆ ನಡೆಸುವ ಅಗತ್ಯವಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ನಗರದ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಶುಕ್ರವಾರ ಆರಂಭಗೊಂಡ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ 5ನೇ ರಾಷ್ಟ್ರೀಯ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶೈಕ್ಷಣಿಕ ವ್ಯವಸ್ಥೆಯಲ್ಲಿ ವಿದೇಶೀಕರಣ ಹಾಗೂ ವಾಣಿಜ್ಯೀಕರಣ ಬಹಳ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಶೈಕ್ಷಣಿಕ ವ್ಯವಸ್ಥೆಯಿಂದ ಈ ಎರಡು ಸಂಗತಿಗಳನ್ನು ತೆಗೆದುಹಾಕಲು ಶಿಕ್ಷಕ ವೃಂದ ಬಹಳಷ್ಟು ಶ್ರಮಪಡುವ ಅಗತ್ಯವಿದೆ. ಶಿಕ್ಷಣ ವಾಣಿಜ್ಯೀಕರಣ ಹಾಗೂ ವಿದೇಶೀಕರಣದಿಂದ ಬಹಳ ಮುಖ್ಯವಾಗಿ ದೇಶದ ಯುವ ಪೀಳಿಗೆಯ ಮೇಲೆ ನೇರ ಪರಿಣಾಮ ಬೀರುತ್ತದೆ. ಇದರಿಂದ ಯುವ ಸಮುದಾಯ ಸಂಪೂರ್ಣ ಹಾಳಾಗುವ ಸಾಧ್ಯತೆ ಇದೆ. ಆದ್ದರಿಂದ ಶಿಕ್ಷರು ಈ ಬಗ್ಗೆಗಂಭೀರ ಚಿಂತನೆ ನಡೆಸಬೇಕಿದೆ ಎಂದರು.

ಶಿಕ್ಷಕರ ಜವಾಬ್ದಾರಿ ಹೆಚ್ಚು

ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಿಕ್ಷಣ ವಿದೇಶೀಕರಣ ಹಾಗೂ ವಾಣಿಜ್ಯೀಕರಣ ಆಗದಂತೆ ನೋಡಿಕೊಳ್ಳುವುದರ ಜತೆಯಲ್ಲಿ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಜವಾಬ್ದಾರಿ ಪ್ರತಿಯೊಬ್ಬ ಶಿಕ್ಷಕನ ಮೇಲಿದೆ ಎಂದರು.ದೇಶಿಯ ಶಿಕ್ಷಣಕ್ಕೆ ರಚನಾತ್ಮಕ ಸಲಹೆ-ಸೂಚನೆಗಳನ್ನು ನೀಡುವಲ್ಲಿ ಅಖಿಲ



ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ಎಬಿಆರ್‌ಎಸ್‌ಎಂ)ದ ಪದಾಧಿಕಾರಿಗಳು ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಶಿಕ್ಷಣದಲ್ಲಿ ರಾಷ್ಟ್ರೀಯತೆಯ ಉತ್ಕೃಷ್ಟ ಉದ್ದೇಶವನ್ನಿಟ್ಟುಕೊಂಡು ಆರಂಭಗೊಂಡ ಶೈಕ್ಷಿಕ ಮಹಾಸಂಘ ಇಂದು ದೇಶದ ಶಿಕ್ಷಣ ಕ್ಷೇತ್ರದಲ್ಲಿ ಬಹಳ ದೊಡ್ಡ ಪರಿಣಾಮ ಬೀರುತ್ತಿದೆ. ಶಿಕ್ಷಣ ನೀತಿಯ ಜಾರಿಯಲ್ಲಿ ಅತ್ಯಂತ ಅಗತ್ಯವಾದ ಸಂಘಟನೆ ಇದಾಗಿದೆ. ರಾಜ್ಯದಲ್ಲಿ ಸುಮಾರು 15 ಸಾವಿರಕ್ಕೂ ಅಧಿಕ ಶಿಕ್ಷಕರು ಸದಸ್ಯರಾಗಿರುವ ಸಂಘ ಇಂದು ಶಿಕ್ಷಕರ ದನಿಯಾಗಿ ಕೆಲಸ ಮಾಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಾಮಿ ವಿವೇಕಾನಂದರ 150ನೇ ಜನ್ಮಶತಮಾನೋತ್ಸವದ ಅಂಗವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ವಿವೇಕಾನಂದರ ಜೀವನ ಮೌಲ್ಯ ಹಾಗೂ ಆದರ್ಶವನ್ನು ತುಂಬುವಂತಾಗಬೇಕು ಎಂದು ಆಶಿಸಿದರು.

ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮಾತನಾಡಿ, ರಾಷ್ಟ್ರ ಹಿತಕ್ಕಾಗಿ ಶಿಕ್ಷಣ ನೀಡುವ ಉದ್ದೇಶದಿಂದ ಶೈಕ್ಷಿಕ ಮಹಾಸಂಘದಂತಹ ಸಂಘಟನೆಗಳ ಅಗತ್ಯ ಬಹಳಷ್ಟಿದೆ. ರಾಜ್ಯದಲ್ಲಿ ಶೈಕ್ಷಣಿಕ ಸಬಲೀಕರಣಕ್ಕೆ ಬೇಕಾದ ಎಲ್ಲ ರೀತಿಯ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತಿದೆ. ಸಮ್ಮಿಶ್ರ ಸರ್ಕಾರ ದಿಂದ ಹಿಡಿದು ಕಳೆದ 6 ವರ್ಷಗಳಲ್ಲಿ ಎರಡು ಬಾರಿ ಶಿಕ್ಷಕರ ವೇತನ ಶ್ರೇಣಿಯನ್ನು ಪರಿಷ್ಕರಿಸಲಾಗಿದೆ. ರಾಜ್ಯ ಬಜೆಟ್‌ನಲ್ಲಿ 15 ಸಾವಿರ ಕೋಟಿ ರೂ.ಗಳನ್ನು ಶಿಕ್ಷಣಕ್ಕಾಗಿ ಮೀಸಲಿಡಲಾಗಿದೆ. ಸರ್ಕಾರ ಒಂದು ರೂ ವೆಚ್ಚಮಾಡಿದರೆ ಅದಲ್ಲಿ 14 ಪೈಸೆಯನ್ನು ಶಿಕ್ಷಣಕ್ಕಾಗಿ ವ್ಯಯಿಸಲಾಗುತ್ತಿದೆ. ಈವರೆಗೆ ಸರ್ಕಾರ 4879 ಪ್ರಾಥಮಿಕ ಶಾಲಾ ಶಿಕ್ಷಕರನ್ನು 2879 ಪ್ರೌಢಶಾಲಾ ಶಿಕ್ಷಕರನ್ನು ಹಾಗೂ 2621 ಪದವಿಪೂರ್ವ ಕಾಲೇಜು ಶಿಕ್ಷಕರ,ನೇಮಕಾತಿ ಮಾಡಿಕೊಂಡಿದೆ. 3400 ಪದವಿಪೂರ್ವ ಹಾಗೂ 1700 ಪದವಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಹೀಗೆ ರಾಜ್ಯದಲ್ಲಿ ಶಿಕ್ಷಣದ ಅಭಿವೃದ್ಧಿಗೆ ಬಹಳಷ್ಟು ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ ಎಂದರು.

ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಕರ್ನಾಟಕ ಜ್ಞಾನ ಆಯೋಗವನ್ನು ರಚಿಸಲಾಗಿದ್ದು, ಆಯೋಗ ನೀಡುವ ಶಿಫಾರಸುಗಳನ್ನು ಜಾರಿಗೊಳಿಸಲಾಗುತ್ತಿದೆ. ಅದೇ ರೀತಿ ದಾವಣಗೆರೆ ವಿವಿ, ಕಿತ್ತೂರು ರಾಣಿಚೆನ್ನಮ್ಮ ವಿವಿ, ಬಳ್ಳಾರಿ ಶ್ರೀ ಕೃಷ್ಣ ದೇವರಾಯ ವಿವಿ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿವಿ, ಸಂಸ್ಕೃತ ವಿವಿ ಹಾಗೂ ಜಾನಪದ ವಿವಿ ಸೇರಿದಂತೆ ರಾಜ್ಯ ವಿವಿಧ ಭಾಗಗಳಲ್ಲಿ 6 ಹೊಸ ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗಿದೆ.

ಉನ್ನತ ಶಿಕ್ಷಣದಲ್ಲಿ ಸಮನ್ವಯ ಸಾಧಿಸುವ ಉದ್ದೇಶದಿಂದ ಉನ್ನತ ಶಿಕ್ಷಣ ಪರಿಷತ್ ಹಾಗೂ ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ ಮಾಡಲಾಗುತ್ತಿದೆ. ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳು ಎಸ್ಎಸ್‌ಎಲ್‌ಸಿಯಲ್ಲಿ ಶೇ.75ರಷ್ಟು ಅಂಕ ಪಡೆದರೆ 10 ಸಾವಿರ ಹಾಗೂ ಶೇ.60 ರಿಂದ ಶೇ.75 ರಷ್ಟು ಅಂಕ ಪಡೆದರೆ 5 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಹೀಗೆ ರಾಜ್ಯದಲ್ಲಿ ಶಿಕ್ಷಣ ಅಭಿವೃದ್ಧಿಗೆ ಸರ್ಕಾರ ಸಾಕಷ್ಟು ಕ್ರಮ ಕೈಗೊಂಡಿದೆ ಎಂದರು.

ಶಾಲೆ ಬಿಡುವವರ ಸಂಖ್ಯೆ ಹೆಚ್ಚಳ

ಇಂದು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣಕ್ಕೇ ಸಾಕಷ್ಟು ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮೊಟಕು ಗೊಳಿಸುತ್ತಿದ್ದಾರೆ. ವಿದ್ಯಾರ್ಥಿಗಳ ಕಡಿಮೆ ಕಲಿಕೆಯ ಪ್ರಮಾಣ, ಆಂಗ್ಲಮಾಧ್ಯಮ ಶಾಲೆಗಳ ಆಕರ್ಷಣೆ ಹಾಗೂ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣದಲ್ಲಿನ ಕೆಲವೊಂದು ಕೊರತೆಯಿಂದಾಗಿ ಇಂದು ಶಿಕ್ಷಣ ವ್ಯವಸ್ಥೆ ಬಹಳಷ್ಟು ಸವಾಲನ್ನು ಎದುರಿಸುತ್ತಿದೆ. ಈ ಎಲ್ಲ ಸವಾಲನ್ನು ಸಮರ್ಥವಾಗಿ ಎದುರಿಸಲು ಶಿಕ್ಷಕರು ಸನ್ನದ್ಧರಾಗಬೇಕು. ಅದೇ ರೀತಿ ಶಿಕ್ಷಣ ಕೇವಲ ಉದ್ಯೋಗ ಮತ್ತು ಹಣಗಳಿಸಲು ಮಾತ್ರವಲ್ಲ ಎಂಬ ಮಾನಸಿಕತೆಯನ್ನು ಯುವ ಪೀಳಿಗೆಯಲ್ಲಿ ನಿರ್ಮಾಣ ಮಾಡಬೇಕಿದೆ ಎಂದರು.

ಶೈಕ್ಷಿಕ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಜೆ.ಪಿ.ಸಿಂಘಾಲ್ ಮಾತನಾಡಿ, ಶಿಕ್ಷಕರಿಂದ ಉತ್ತಮ ಸಮಾಜದ ನಿರ್ಮಾಣ ಸಾಧ್ಯ ಎಂಬ ಸಂದೇಶವನ್ನು ಸರ್ಕಾರಕ್ಕೆ ನೀಡಲು ಸಾಧ್ಯ. ಶಿಕ್ಷಕರು ಮೊದಲು ಭಾರತೀಯ ಶಿಕ್ಷಣ ನೀತಿ, ಆಚಾರ-ವಿಚಾರಗಳನ್ನು ಅರಿತು ಕೊಳ್ಳಬೇಕು. ಶಿಕ್ಷಣದಲ್ಲಿ ದೇಶಿಯ ಹಾಗೂ ವಿದೇಶಿಯ ಎಂಬ ಎರಡು ದಾರಿಗಳಿವೆ. ಇದರಲ್ಲಿ ದೇಶಿಯ ದಾರಿನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಬಹಳ ಮುಖ್ಯವಾಗಿದೆ ಎಂದರು.

ಪುಸ್ತಕ ಬಿಡುಗಡೆ


ಕಾರ್ಯಕ್ರಮದಲ್ಲಿ ಜಾಗೃತಿ, ನಮನ್, ವಿವೇಕ ಯಾತ್ರಾ, ಭಾರತೀಯ ಇತಿಹಾಸ ವಿಕೃತಿಕರಣಕಾ ಪ್ರಯಾಸ್ ಹಾಗೂ ಶಿಕ್ಷಕ್ ಸಮಾಚಾರ್ ಎಂಬ ಐದು ಪುಸ್ತಕಗಳನು ಲೋಕಾರ್ಪಣೆ ಮಾಡಲಾಯಿತು.

ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಅಧ್ಯಕ್ಷ ವಿಮಲ್ ಪ್ರಸಾದ್ ಅಗರವಾಲ್, ಶಿಕ್ಷಣ ತಜ್ಞ ಹಾಗೂ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಸದಸ್ಯರಾದ ಪ್ರೊ.ಕೃ.ನರಹರಿ, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ಡಾ.ವೂಡ ಪಿ.ಕೃಷ್ಣ, ಉದ್ಯಮಿ ಡಾ.ಪಿ.ದಯಾನಂದ ಪೈ, ಆರ್‌ಎಸ್‌ಎಸ್‌ನ ಹಿರಿಯ ಪ್ರಚಾರಕ ಕೃ. ಸೂರ್ಯನಾರಾಯಣ ರಾವ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು. ದೇಶದ ವಿವಿಧ ಭಾಗಗಳಿಂದ 1500 ಕ್ಕೂ ಅಧಿಕ ಪ್ರತಿನಿಧಿಗಳು ಮೂರು ದಿನಗಳ ಈ ರಾಷ್ಟ್ರೀಯ ಅಧಿವೇಶನದಲ್ಲಿ ಭಾಗವಹಿಸಿದ್ದಾರೆ.

ಉದಯವಾಣಿ
ಶನಿವಾರ, ಅಕ್ಟೋಬರ್ 27, 2012

ಶೈಕ್ಷಣಿಕ ಪ್ರಗತಿಗೆ ಪ್ರಾಮಾಣಿಕ ಪ್ರಯತ್ನ

■ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ 5ನೇ ರಾಷ್ಟ್ರೀಯ ಅಧಿವೇಶನದಲ್ಲಿ ಶೆಟ್ಟರ್



ಕೆಂಗೇರಿ: ಶಿಕ್ಷಣ ಕ್ಷೇತ್ರದಲ್ಲಿನ ಪ್ರಗತಿ ಹಾಗೂ ಸುಧಾರಣೆಗೆ ಹೆಚ್ಚಿನ ಆದ್ಯತೆ ನೀಡಿ ಸಮೃದ್ಧ ಕರ್ನಾಟಕ ಕಟ್ಟುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಭರವಸೆ ನೀಡಿದ್ದಾರೆ.

ಮಾಗಡಿ ಮುಖ್ಯರಸ್ತೆಯ ಚೆನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘ ಹಮ್ಮಿಕೊಂಡಿದ್ದ 5ನೇ ರಾಷ್ಟ್ರೀಯ ಅಧಿವೇಶನವನ್ನು ಉದ್ಘಾಟಿಸಿದ ಅವರು, ಕಳೆದ ಸಾಲಿನ ಬಜೆಟ್ ನಲ್ಲಿ ಶೇ.15ರಷ್ಟು ಅನುದಾನವನ್ನು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ಮೀಸಲಿಟ್ಟು ಜನಪರ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದರು.

ರಾಜ್ಯದ ಶಿಕ್ಷಕರ ಸಬಲೀಕರಣಕ್ಕಾಗಿ ಎರಡು ವೇತನ ಶ್ರೇಣಿ ಹೆಚ್ಚಳ ಮಾಡಿದ ಹೆಗ್ಗಳಿಕೆ ನಮ್ಮ ಸರ್ಕಾರದ್ದು. ಮಾಜಿ ಪ್ರಧಾನಿ ವಾಜಪೇಯಿ ಅವರ ಕನಸಿನ ಯೋಜನೆಯಾದ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಿದೆ ಎಂದರು.

ನಮ್ಮ ಸರ್ಕಾರದ ಅವಧಿಯಲ್ಲಿ ಆರು ನೂತನ ವಿಶ್ವವಿದ್ಯಾಲಯ, ಉನ್ನತ ಶಿಕ್ಷಣ ಪರಿಷತ್, ಜ್ಞಾನ ಆಯೋಗಗಳನ್ನು ರಚಿಸಿ, ಶೈಕ್ಷಣಿಕ ಪರಿಸರದ ವಾತಾವರಣ ನಿರ್ಮಿಸಲಾಗಿದೆ. ಇಂದು ಬೆಂಗಳೂರು ವಿಶ್ವದ ಭೂಪಟದಲ್ಲಿ ರಾರಾಜಿಸಲು ನಮ್ಮ ಸರ್ಕಾರ ಮಾಹಿತಿ ತಂತ್ರಜ್ಞಾನಕ್ಕೆ ಒತ್ತು ನೀಡಿರುವುದು ಕಾರಣ ಎಂದು ಅವರು ಹೇಳಿದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ, ಪಾಶ್ಚಿಮಾತ್ಯ ವ್ಯಾಮೋಹಕ್ಕೆ ಒಳಗಾಗಿ ನಮ್ಮ ಗುರು ಪರಂಪರೆ ಶೈಕ್ಷಣಿಕ ವಾತಾವರಣವನ್ನು ನಿರ್ಲಕ್ಷ್ಯ ಮಾಡಿರುವುದು ದುರಾಸೆ ಹಾಗೂ ಸ್ವಾರ್ಥಕ್ಕೆ ಕಾರಣವಾಗಿದೆ ಎಮದು ಹೇಳಿದರು.

ಇಂದಿನ ಪೀಳಿಗೆ ಕೇವಲ ವಿದ್ಯಾರ್ಜನೆಯನ್ನು ಸ್ವಾರ್ಥ, ಹಣದ ಲಾಲಸೆಗಾಗಿ ಬಳಸಿಕೊಳ್ಳುತ್ತಿರುವುದು ವಿಷಾದನೀಯ. ಉನ್ನತ ಶಿಕ್ಷಣವನ್ನು ದೇಶದ ಸಮಗ್ರ ಅಭಿವೃದ್ಧಿ ಹಾಗೂ ಐಕ್ಯತೆಗೆ ಬಳಸಿಕೊಂಡಾಗ ವಿದ್ಯಾಭ್ಯಾಸ ಮಾಡಿದಕ್ಕೂ ಸಾರ್ಥಕವಾಗುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಕರು ಮಹತ್ತರ ಪಾತ್ರ ವಹಿಸುವಂತೆ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ 4 ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಎಬಿಆರ್ಎಸ್ಎಂನ ಅಧ್ಯಕ್ಷ ವಿಮಲ್ ಪ್ರಸಾದ್ ಅಗರ್‌ವಾಲ್, ಪ್ರಧಾನ ಕಾರ್ಯದರ್ಶಿ ಜೆ.ಪಿ. ಸಿಂಘಾಲ್, ಉನ್ನತ ಶಿಕ್ಷಣ ಪರಿಷತ್‌ನ ಸದಸ್ಯ ಕೃ. ನರಹರಿ, ಸೆಂಚುರಿ ಬಿಲ್ಡರ್ಸ್ ಅಧ್ಯಕ್ಷ ದಯಾನಂದ್ ಪೈ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಪ್ರೊ.ಕೆ.ಬಾಲಕೃಷ್ಣ ಭಟ್ ಇತರರು ಉಪಸ್ಥಿತರಿದ್ದರು.

ಸಂಜೆವಾಣಿ
ಶುಕ್ರವಾರ 26 ಅಕ್ಟೋಬರ್ 2012

1700 ಪಿಯು ಕಾಲೇಜು ಶಿಕ್ಷಕರ ನೇಮಕಕ್ಕೆ ಚಾಲನೆ

ಬೆಂಗಳೂರು, ಅ. ೨೬ - ಶಿಕ್ಷಣ ಕ್ಷೇತ್ರದ ಸಬಲೀಕರಣಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ ಎಂದು ಹೇಳಿರುವ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು, 3,700 ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ 1,700 ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ನೇಮಕಕ್ಕೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಈಗಾಗಲೇ 4,879 ಪ್ರಾಥಮಿಕ ಶಾಲಾ ಶಿಕ್ಷಕರು, 2,805 ಪ್ರೌಢಶಾಲಾ ಶಿಕ್ಷಕರು ಹಾಗೂ 2 ಸಾವಿರಕ್ಕೂ ಹೆಚ್ಚು ಪದವಿ ಪೂರ್ವ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇದೀಗ ಹೊಸದಾಗಿ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ನೇಮಕ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಬೆಂಗಳೂರಿನ ಹೊರ ವಲಯದ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿಂದು ಆಯೋಜಿಸಿದ್ದ ಮೂರು ದಿನಗಳ ಅಖಿಲ ಭಾರತೀಯ ರಾಷ್ಟ್ರೀಯ ಶಿಕ್ಷಕ ಮಹಾಸಂಘದ ೯ನೇ ರಾಷ್ಟ್ರೀಯ ಅಧಿವೇಶನ ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರನ್ನು ಶೈಕ್ಷಣಿಕ ರಾಜಧಾನಿ ಎಂದು ಕರೆಯುವ ಮಟ್ಟಿಗೆ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದೆ ಎಂದ ಅವರು, ಶಿಕ್ಷಣ ಕ್ಷೇತ್ರ ಸೇರಿದಂತೆ ಎಲ್ಲ ವಲಯಗಳ ಸಬಲೀಕರಣಕ್ಕೆ ಸರ್ಕಾರ ಆದ್ಯತೆ ನೀಡಿದೆ ಎಂದರು.

ಬಿಜೆಪಿ ಸರ್ಕಾರ ಬಂದ ಮೇಲೆ ಸಮಿಶ್ರ ಸರ್ಕಾರ ಸೇರಿದಂತೆ ಇಲ್ಲಿಯವರೆಗೆ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿ, ಶಿಕ್ಷಕರಿಗೆ ಎರಡು ಬಾರಿ ವೇತನ ಶ್ರೇಣಿ ಹೆಚ್ಚಿಸಲಾಗಿದೆ. ಶಿಕ್ಷಕರ ಸಹಕಾರ ಇದ್ದರೆ ಮುಂಬರುವ ದಿನಗಳಲ್ಲಿ ಕರ್ನಾಟಕವನ್ನು ಸಮೃದ್ಧ ಕರ್ನಾಟಕವನ್ನಾಗಿ ಮಾಡುವುದಾಗಿ ಹೇಳಿದರು.

ಸರ್ವ ಶಿಕ್ಷಣ ಅಭಿಯಾನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡಿದೆ. ಅಲ್ಲದೆ, ಶಿಕ್ಷಣಕ್ಕಾಗಿ ಪ್ರತಿ ರೂಪಾ[illegible]ಯಯಲಿ 14 ಪ್ರಸಕ್ತಿಗೆದಿದ್ದರಾಗಿದೆ ಎಂದು ಅವರು ಹೇಳಿದರು.

ರಾಜ್ಯದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಲಕ್ಷ ಕೋಟಿಯ ಬಜೆಟ್ ಮಂಡಿಸಿ, ಅದರಲ್ಲಿ ಸರಿ ಸುಮಾರು 15 ಸಾವಿರ ಕೋಟಿ ಹಣವನ್ನು ಶಿಕ್ಷಣಕ್ಕೆ ಮೀಸಲಾಗಿಡಲಾಗಿದೆ ಎಂದು ಹೇಳಿದ ಅವರು, ಮೂರು ದಿನಗಳ ಕಾಲ ನಡೆಯಲಿರುವ ಅಧಿವೇಶನದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಮಹತ್ವದ ವಿಷಯಗಳ ಬಗ್ಗೆ ಚಿಂತನ ಮಂಥನ ನಡೆಯಲಿ ಎಂದು ಆಶಿಸಿದರು.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಅಖಿಲ ಭಾರತೀಯ ರಾಷ್ಟ್ರೀಯ ಶಿಕ್ಷಕ ಮಹಾಸಂಘ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಮಹತ್ವದ ನಿರ್ಧಾರವನ್ನು ಕೈಗೊಳ್ಳುವತ್ತ ಬಲಿಷ್ಠ ಸಂಘಟನೆಯಾಗಿ ಬೆಳೆಯಬೇಕು ಎಂದು ಆಶಿಸಿದರು.

ಈ ಅಧಿವೇಶನದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಶಾಲೆ[illegible]ತರುವುದು, ಸರ್ಕಾರಿ, ಖಾಸಗಿ ಶಾಲೆ ನಡುವಿನ ಸ್ಪರ್ಧೆ, ಇಂಗ್ಲಿಷ್ ಶಾಲೆಗಳ ಆಕರ್ಷಣೆ ಸೇರಿದಂತೆ ಹಲವು ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಪರಿಹಾರ ಕಂಡುಕೊಳ್ಳುವಂತಾಗಲಿ ಎಂದು ಹೇಳಿದರು.

ಸಮಾವೇಶದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶಿಕ್ಷಕ ಮಹಾಸಂಘದ ಅಧ್ಯಕ್ಷ ವಿಮಲ ಪ್ರಸಾದ್ ಅಗರ್‌ವಾಲ್, ಪ್ರಧಾನ ಕಾರ್ಯದರ್ಶಿ ಜೆ.ಪಿ. ಸಿಂಗಾಲ್, ಉದಮ್ [illegible] ದಯಾನಂದ್, [illegible] ವಿಧಾನ ಪರಿಷತ್ ಸದಸ್ಯ ಅರುಣ್ ಶಹಾಪುರ, ಉನ್ನತ ಶಿಕ್ಷಣ ಪರಿಷತ್‌ನ ಸದಸ್ಯ ಪ್ರೊ. ಎಸ್.ಆರ್. ನರಹರಿ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಡಾ. ವೂಡೆ [illegible] ವಿಧಾನ ಪರಿಷತ್ ಮಾಜಿ ಸದಸ್ಯ [illegible] ಬಾಲಕೃಷ್ಣ ಭಟ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶೀಘ್ರ ನಿರ್ಧಾರ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನ ನಡೆಸುವ ಬಗ್ಗೆ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ನವೆಂಬರ್ ಕೊನೆಯವಾರ ಅಥವಾ ಡಿಸೆಂಬರ್ ಮೊದಲವಾರ ಅಧಿವೇಶನ ನಡೆಸುವ ಬಗ್ಗೆ ಚಿಂತಿಸಲಾಗಿದೆ. ಈ ಬಗ್ಗೆ ಸದ್ಯದಲ್ಲೇ ಸಭೆ ಸೇರಿ ದಿನಾಂಕ ನಿಗದಿಪಡಿಸುವುದಾಗಿ ಹೇಳಿದರು. ಶಿಕ್ಷಕ ಸಮಾವೇಶದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಳಿಗಾಲದ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಲಾಗುವುದು. ಹೀಗಾಗಿ ಎಲ್ಲ ಸಿದ್ಧತೆಗಳನ್ನು ಕೈಗೊಂಡಿರುವುದಾಗಿ ಹೇಳಿದರು.



ಮುಖ್ಯ ಅತಿಥಿ ಬಿ.ಆರ್. ರಾಮೇಗೌಡರಿಗೆ ಹೆಬ್ಬಗೋಡಿ ಗೋಪಾಲ್‌ರಿಂದ ಗೌರವ ಸಮರ್ಪಣೆ. ನಾ. ಮಲ್ಲಿಕಾರ್ಜುನ ಮತ್ತಿತರರಿದ್ದಾರೆ.

ಮತ್ತೋರ್ವ ಮುಖ್ಯ ... ಬಿ.ಎ. ಸಂಜುಂಡಸ್ವಾಮಿ ಅವರು 'ಮಾಲಿ ಮರಿಯಪ್ಪ, ಟಿ. ಮರಿಯಪ್ಪ, ಬಿ.ಕೆ. ಮರಿ... ಪರೆಲ್ಲಾ ಪ್ರಾಮಾಣಿಕತೆಗೆ, ಮಾನವೀಯ ಕಾಳಜಿಗೆ, ಜಾತ್ಯಾತೀತ ಮನೋಭಾವಕ್ಕೆ ಪರ್ಯಾಯ ಹೆಸರುಗಳು' ಎಂದು ಅಭಿಪ್ರಾಯಪಟ್ಟರು.

ಆರಂಭದಲ್ಲಿ ಕಾರ್ಯಕ್ರಮ ಉದ್ಘಾಟಿಸಿದ ಬಿ.ಟಿ. ರಾಮಚಂದ್ರ ಅವರು 'ಮಾಲಿ ಮರಿಯಪ್ಪನವರ ಇಡೀ ಕುಟುಂಬ ದೇಶಕ್ಕಾಗಿ ಬಹಳ ದೊಡ್ಡ ಕೊಡುಗೆ ನೀಡಿದೆ. ಅರಾಜಕತೆ, ಅಪ್ರಾಮಾಣಿಕತೆಗಳು ಪ್ರಾಬಲ್ಯ ಮೆರೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಇಂತಹ ನಾಯಕರ ಅಗತ್ಯವಿದೆ' ಎಂದು ಹೇಳಿದರು.

ಹೆಬ್ಬಗೋಡಿ ಗೋಪಾಲ್ ನಿರೂಪಿಸಿದ ಕಾರ್ಯಕ್ರಮ ಎಂ.ಆರ್. ಅನಂತಮೂರ್ತಿ ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಎಸ್.ಎಸ್. ಪಡಶೆಟ್ಟಿ ದೇಶಭಕ್ತಿ ಗೀತೆ ಹಾಡಿದರು. ರು. ಬಸಪ್ಪ ಸ್ವಾಗತಿಸಿದರು. ಕೊನೆಯಲ್ಲಿ ನಾ. ಮಲ್ಲಿಕಾರ್ಜುನ ವಂದನಾರ್ಪಣೆ ಮಾಡಿದರು.

ತುಮಕೂರು ಜಿಲ್ಲೆ, ಕನ್ನಡ ನಾಡಿಗೆ ಮತ್ತು ಭಾರತ ದೇಶಕ್ಕೆ ಕಲೆ, ಸಾಹಿತ್ಯ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರದಲ್ಲಿ ಅನೇಕ ಮಹನೀಯರುಗಳನ್ನು ನೀಡಿದೆ. ಅಂತಹ ಮಹನೀಯರುಗಳಲ್ಲಿ ಕೀ.ಶೇ. ಮಾಲಿ ಮರಿಯಪ್ಪನವರು ಪ್ರಮುಖರಾದವರು ಎಂದರೆ ಅತಿಶಯೋಕ್ತಿಯಾಗಲಾರದು.

ತುಮಕೂರು ಜಿಲ್ಲೆಯ ಸಿರಾ ಸುದೀರ್ಘ ಇತಿಹಾಸದ ಹಿನ್ನೆಲೆ ಹೊಂದಿದೆ. ರತ್ನಗಿರಿ ಪ್ರಭು ರಂಗಪ್ಪ ನಾಯಕನಿಂದ ಸಂಸ್ಥಾಪಿಸಲ್ಪಟ್ಟು, ಹಲವಾರು ಪಾಳೇಗಾರರಿಂದ ಆಳಲ್ಪಟ್ಟು ಬಿಜಾಪುರದ ಆದಿಲ್ ಷಾಹಿ ಸುಲ್ತಾನರ ಪ್ರತಿನಿಧಿ ಸುಬೇದಾರ್‌ಗಳ ಆಳ್ವಿಕೆಗೆ ಒಳಗಾಗಿದ್ದು, ಷಹಜಿ ಭೋಂಸ್ಲೆಯ ಬೆಂಗಳೂರು ಜಹಗೀರ್‌ದಾರಿಕೆಯ ಭಾಗವಾಗಿದ್ದು, ಮೊಗಲ-ಮರಾಠ-ನಿಜಾಮ ಮತ್ತು ಅದೋನಿ ನವಾಬರ ಆಡಳಿತದಲ್ಲಿದ್ದು ಏಳು ಪರಗಣಗಳ ಪ್ರಾಂತ್ಯದ ರಾಜಧಾನಿಯಾಗಿತ್ತು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಮೈಸೂರು ಸಂಸ್ಥಾನದ ನೇರ ಆಳ್ವಿಕೆಗೆ ಒಳಪಟ್ಟಿತ್ತು.

ಇಂತಹ ಸುಸಂಸ್ಕೃತ ಪಟ್ಟಣ ಸಿರಾದ ಪ್ರಸಿದ್ಧ ಮಾಲಿ ಮನೆಯಲ್ಲಿ, ಮಾಲಿ ದೊಡ್ಡಮದ್ದಪ್ಪ ಮತ್ತು ತಿಮ್ಮಕ್ಕನವರ ನಾಲ್ಕನೆಯ ಮಗನಾಗಿ 1911ರ ಏಪ್ರಿಲ್ 18ರಂದು ಮಾಲಿ ಮರಿಯಪ್ಪನವರು ಜನ್ಮ ಪಡೆದರು.

'ಮಾಲಿ' ಎಂಬುದು ಮನೆತನದ ಹೆಸರು. ಮೈಸೂರು ಸಂಸ್ಥಾನದ ಆಡಳಿತಗಾರ ಹೈದರಾಲಿಯ ಪ್ರೇರಣೆಯಿಂದ ಸಿರಾದಲ್ಲಿ 'ಖಾನ್‌ಬಾಗ್' ಎಂಬ ಉದ್ಯಾನವನದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಅಂದಿನ ಒಂದು ರೈತ ಕುಟುಂಬಕ್ಕೆ ಸರ್ಕಾರಿ ಭಾಷೆಯಲ್ಲಿ 'ಮಾಲೀಕ್' ಎಂಬ ಪದ ಜನ ಭಾಷೆಯಲ್ಲಿ 'ಮಾಲಿ' ಆಗಿ ಪರಿವರ್ತನೆಗೊಂಡು, ಇವರ ಕುಟುಂಬಕ್ಕೆ 'ಮಾಲಿ' ಎಂಬ ಹೆಸರು ಪ್ರಾಪ್ತವಾಯಿತು.

ಮಾಲಿ ಮರಿಯಪ್ಪನವರು 1924ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಿರಾದಲ್ಲಿ ಪೂರೈಸಿದ ನಂತರ, ಕುಟುಂಬದವರ ಅಪೇಕ್ಷೆಯಂತೆ ಪ್ರೌಢಶಾಲಾ ಶಿಕ್ಷಣವನ್ನು ಮೈಸೂರಿನ ಧರ್ಮ ಪ್ರಕಾಶರಾವ್ ಬಹದೂರ್ ಡಿ. ಬನುಮಯ್ಯ ಪ್ರೌಢಶಾಲೆಯಲ್ಲಿ ಪಡೆದು, ಇಂಟರ್ ಮುಗಿಸಿದ ನಂತರ ಮೈಸೂರಿನ ಪ್ರಸಿದ್ಧ ಮಹಾರಾಜ ಕಾಲೇಜಿನಲ್ಲಿ, ತತ್ವಶಾಸ್ತ್ರ, ಅಧ್ಯಾತ್ಮ ಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳನ್ನು ಐಚ್ಛಿಕ ವಿಷಯಗಳನ್ನಾಗಿ ತೆಗೆದುಕೊಂಡು ಬಿ.ಎ. ಪದವಿ ಪಡೆದರು.

ನಂತರ ತಾವು ಕಲಿತ ಡಿ. ಬನುಮಯ್ಯ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ಬೇಸಿಗೆ ರಜಾ ಸಮೀಪಿಸಿದಾಗ ಚಿಂತಾಮಣಿಯ ಪುರಸಭೆಯಲ್ಲಿ ನೌಕರಿ ಪಡೆದರು. ಆಗ, ಸರ್ಕಾರಿ ಉದ್ಯೋಗಕ್ಕಿಂತ ಸ್ವಂತ ಉದ್ಯೋಗ ಮಾಡಬೇಕೆಂಬ ನಿಲುವು ತಳೆದರು.

ಸ್ವತಂತ್ರ ಜೀವನ ನಡೆಸಲು ಕಾನೂನು ಶಿಕ್ಷಣ ಅಗತ್ಯ ಎಂಬುದನ್ನು ಮನಗಂಡರು. ನಂತರ ರಾಜಕೀಯ ಜೀವನ ಪ್ರವೇಶಿಸಬೇಕೆಂಬ ಆಕಾಂಕ್ಷೆ ಚಿಗುರೊಡೆಯಿತು. ಆದಕಾರಣ 1933ರಲ್ಲಿ ಅಂದಿನ ಬೊಂಬಾಯಿ ಪ್ರಾಂತ್ಯಕ್ಕೆ ಸೇರಿದ ಪೂನಾದ ಫರ್ಗೂಸನ್ ಲಾ ಕಾಲೇಜಿನಲ್ಲಿ ಮೂರು ವರ್ಷಗಳ ಕಾಲ ಶ್ರದ್ಧೆಯಿಂದ ಅಧ್ಯಯನ ನಡೆಸಿ, ಎಲ್.ಎಲ್.ಬಿ. ಕಾನೂನು ಪದವಿ ಪಡೆದರು.

ಅನಂತರ ಬೆಂಗಳೂರಿನ ಪ್ರಸಿದ್ಧ ನ್ಯಾಯವಾದಿಗಳಾಗಿದ್ದ ಗುರುವಾರೆಡ್ಡಿ ಮತ್ತು ಚಿತ್ರದುರ್ಗದಲ್ಲಿ ವಕೀಲರಾಗಿದ್ದ ಕೆ. ಕೆಂಚಪ್ಪನವರಿಂದಲೂ ವೃತ್ತಿ ತರಬೇತಿ ಮತ್ತು ಮಾರ್ಗದರ್ಶನ ಪಡೆದು, ಮಧುಗಿರಿಯಲ್ಲಿ ತಮ್ಮ ಕಛೇರಿ ಆರಂಭಿಸಿದರು.

ಮಾಲಿ ಮರಿಯಪ್ಪನವರು ವಕೀಲಿ ವೃತ್ತಿಯನ್ನು ಹಣ ಮಾಡುವ ದಂಧೆಯನ್ನಾಗಿ ಪರಿಗಣಿಸದೆ, ಗ್ರಾಮೀಣ ಜನರ ಸೇವೆ ಎಂದು ತಿಳಿದು, ಕಕ್ಷಿದಾರರ ಸಮಸ್ಯೆಗಳನ್ನು, ತಂಟೆ ತಕರಾರುಗಳನ್ನು ತಾಳ್ಮೆಯಿಂದ ಕೇಳಿ, ಅವರುಗಳ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದರು. ದ್ವೇಷ, ಅಸೂಯೆಗಳ ಪರಿಣಾಮಗಳನ್ನು ಮನ ಮುಟ್ಟುವಂತೆ ವಿವರಿಸಿ, ರಾಜಿ ಮಾಡಿಸುತ್ತಿದ್ದರು. ಇದರಿಂದಾಗಿ ಇವರ ಜನಪ್ರಿಯತೆ ಹೆಚ್ಚು ಬೆಳೆದು 'ಪಂಚಾಯಿತಿ ಮರಿಯಪ್ಪ' ಎಂಬ ಹೆಸರು ಪಡೆದರು. ಈ ರೀತಿಯ ಜನಪ್ರಿಯತೆ, ಜನಸಂಪರ್ಕ ಹೆಚ್ಚಿ ಮುಂದಿನ ಅವರ ರಾಜಕೀಯ ಜೀವನಕ್ಕೆ ನಾಂದಿಯಾಯಿತು.

ಮಾಲಿ ಮರಿಯಪ್ಪನವರು ವಿದ್ಯಾಭ್ಯಾಸಕ್ಕಾಗಿ ಮೈಸೂರು ಸೇರಿದಾಗ ಮೈಸೂರು ಸಂಸ್ಥಾನವಲ್ಲದೆ ಇಡೀ ಭಾರತ ದೇಶದಲ್ಲಿ ಸ್ವಾತಂತ್ರ್ಯ ಹೋರಾಟದ ಕಾವು ತೀವ್ರವಾಗಿತ್ತು. 1919ರಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಮಹಾತ್ಮ ಗಾಂಧೀಜಿಯವರು ಸುಶಿಕ್ಷಿತ ಕಾಂಗ್ರೆಸ್ಸಿಗರ ಹೋರಾಟವನ್ನು ಜನತಾ ಚಳುವಳಿಯನ್ನಾಗಿ ಪರಿವರ್ತಿಸಿದರು. ಎಲ್ಲಾ ವರ್ಗದ ಅಸಂಖ್ಯಾತ ಜನರು ಗಾಂಧಿ ಕರೆಗೆ ಓಗೊಟ್ಟು ಚಳುವಳಿಯಲ್ಲಿ ಧೈರ್ಯದಿಂದ ಪಾಲ್ಗೊಂಡರು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಪ್ರಾಧ್ಯಾಪಕರಾಗಿದ್ದ ಡಾ. ಕುಮಾರಪ್ಪನವರ ವಿಚಾರಧಾರೆಗಳು ಮತ್ತು ಗಾಂಧಿ ತತ್ವಚಿಂತನೆಗಳ ವ್ಯಾಖ್ಯಾನದಿಂದ ಮಾಲಿ ಮರಿಯಪ್ಪನವರು ಬಹಳವಾಗಿ ಆಕರ್ಷಿತರಾದರು. ಮೈಸೂರು ಅರಮನೆಯಲ್ಲಿ ನಡೆಯುತ್ತಿದ್ದ ಹಲವಾರು ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದಾಗಿ ಮಾಲಿ ಮರಿಯಪ್ಪನವರಲ್ಲಿ ರಾಜಕೀಯ ಪ್ರಜ್ಞೆಗೆ ಹೆಚ್ಚು ಬಲ ಬಂದಿತು, ಗಾಂಧಿ ಹೋರಾಟದ ದರ್ಶನವಾಗಿ, ಮೈಸೂರು ಅವರಿಗೆ ಸ್ಫೂರ್ತಿಯ ತಾಣವಾಯಿತು.

1927ರಲ್ಲಿ ಅನಾರೋಗ್ಯ ನಿಮಿತ್ತ ಮಹಾತ್ಮ ಗಾಂಧಿ ನಾಲ್ಕು ತಿಂಗಳ ಕಾಲ ನಂದಿ ಬೆಟ್ಟದಲ್ಲಿ ವಿಶ್ರಾಂತಿಗಾಗಿ ತಂಗಿದ್ದು, ಆರೋಗ್ಯ ಚೇತರಿಸಿಕೊಂಡ ಮೇಲೆ ಮೈಸೂರು ಸಂಸ್ಥಾನಾದ್ಯಂತ ಪ್ರವಾಸ ಕೈಗೊಂಡು, ತುಮಕೂರು. ಮಧುಗಿರಿಗೆ ಭೇಟಿ ನೀಡುವ ವಿಷಯ ತಿಳಿದು, ಮಾಲಿ ಮರಿಯಪ್ಪನವರು ತಮ್ಮ ಸ್ನೇ... ಜೊತೆ ಸಿರಾದಿಂದ ಮಧುಗಿರಿಗೆ 23 ಮೈಲಿ ನಡೆದು ಬಂದು, ಗಾಂಧೀಜಿಯವರ ದರ್ಶನ ಪಡೆದರು. ಅವರ ವಿಚಾರಧಾರೆ, ಮಾತು ಮತ್ತು ಮಾಂತ್ರಿಕ ವ್ಯಕ್ತಿತ್ವಕ್ಕೆ ಮಾರು ಹೋದುದಲ್ಲದೆ, ಖಾದಿ ಧಾರಿಯಾದರು. ಅಂದಿನಿಂದ ತಮ್ಮ ಉಸಿರು ಇರುವವರೆಗೂ ಗಾಂಧಿ ಮಾರ್ಗವನ್ನು ಬಿಟ್ಟು ಕದಲಿಲ್ಲ. ಹೀಗೆ ಗಾಂಧಿ ಪ್ರಭಾವದಿಂದ ಮಾನಸಿಕವಾಗಿ ಸಿದ್ಧರಾದ ಮಾಲಿ ಮರಿಯಪ್ಪನವರು ಪ್ರಗತಿಪರ ವಿಚಾರಗಳನ್ನು ತಮ್ಮ ಸ್ನೇಹಿತರಲ್ಲಿ ಹಂಚಿಕೊಳ್ಳುತ್ತಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಸತತ ಪ್ರಯತ್ನ ಮತ್ತು ಪರಿಸರದ ಪ್ರಭಾವದಿಂದ ವಿಶಿಷ್ಟ ವರ್ಚಸ್ಸು ವ್ಯಕ್ತಿತ್ವ ಅವರಲ್ಲಿ ಮೂಡಿತು.

1930ರಲ್ಲಿ ಕಾನೂನು ವಿದ್ಯಾಭ್ಯಾಸಕ್ಕಾಗಿ ಮಾಲಿ ಮರಿಯಪ್ಪನವರು ಪೂನಾ ನಗರಕ್ಕೆ ಹೋದಾಗ, ಅಲ್ಲಿನ ವಾತಾವರಣ, ರಾಜಕೀಯ ಚಟುವಟಿಕೆಗಳು ಅವರಲ್ಲಿ ಮತ್ತಷ್ಟು ಆತ್ಮವಿಶ್ವಾಸ ಮೂಡಿಸಿದವು. ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್, ಬಾಬಾ ಸಾಹೇಬ್ ಅಂಬೇಡ್ಕರ್ ಜ್ಯೋತಿ ಬಾ ಫುಲೆ ಮೊದಲಾದ ಮುತ್ಸದ್ದಿಗಳ ಹೋರಾಟದ ಚಟುವಟಿಕೆಗಳ ಪರಿಸರದಲ್ಲಿ ಮಾಲಿ ಮರಿಯಪ್ಪನವರು ಸ್ವಾತಂತ್ರ್ಯ ಹೋರಾಟದ ದೀಕ್ಷೆ ಕೈಗೊಂಡರು. ಇದು ಮುಂದೆ 1935ರಲ್ಲಿ ಮಧುಗಿರಿ ಪಟ್ಟಣದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ರೂಪಿಸಲು ಅನುಕೂಲವಾಯಿತು. 1936ರಲ್ಲಿ ಬೊಂಬಾಯಿ ಪ್ರಾಂತ್ಯದ ಫೈಜ್ ಪುರ ಎಂಬ ಹಳ್ಳಿಯಲ್ಲಿ ನಡೆದ 50ನೇ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದಲ್ಲಿ ಮಧುಗಿರಿ ಮತ್ತು ಸಿರಾದ ಸ್ನೇಹಿತರೊಂದಿಗೆ ಮಾಲಿ ಮರಿಯಪ್ಪನವರು ಭಾಗವಹಿಸಿದ್ದರು. ಆ ಅಧಿವೇಶನದ ಅಧ್ಯಕ್ಷರಾದ ಪಂಡಿತ್ ಜವಾಹರ್‌ಲಾಲ್ ನೆಹರು ಅವರ ಭಾಷಣ, ಮಂಡಿಸಿದ ವಿಚಾರಧಾರೆ, ಎಂ.ಎನ್. ರಾಯ್, ಖಾನ್ ಗಫಾರ್ ಅಬ್ದುಲ್ ಖಾನ್ ಅವರ ಭಾಷಣಗಳು ಹೆಚ್ಚು ಆಕರ್ಷಿಸಿದವು.

1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಮಾಲಿ ಮರಿಯಪ್ಪನವರು ಪ್ರಮುಖ ಪಾತ್ರ ವಹಿಸಿದ್ದರು. ನಂತರ ತುಮಕೂರು ಕಾಂಗ್ರೆಸ್ಸಿನ ಮುಖಂಡರಾಗಿ ಕಾನೂನು ಭಂಗ ಚಳುವಳಿ, ಧ್ವಜ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿಗಳಲ್ಲೂ ಸಕ್ರಿಯವಾಗಿ ಪಾಲ್ಗೊಂಡು, ಗಾಂಧಿ ತತ್ವಗಳನ್ನು ತಾವೇ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಇತರರಿಗೆ ಮಾರ್ಗದರ್ಶಕರಾಗಿ 'ತುಮಕೂರು ಗಾಂಧಿ' ಎಂಬ ಗೌರವಕ್ಕೆ ಪಾತ್ರರಾಗಿದ್ದರು.

1948ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಾಂಗ ರಚನಾ ಸಭೆಗೆ ತುಮಕೂರು ಜಿಲ್ಲೆಯಿಂದ ಆರಿಸಿ ಬಂದರು. ನಂತರ 1952ರಲ್ಲಿ ದೇಶವ್ಯಾಪ್ತಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಚುನಾಯಿತರಾಗಿ, ಪ್ರಥಮ ವಿಧಾನಸಭೆಯಲ್ಲಿ ಐದು ವರ್ಷಗಳ ಕಾಲ ಶಾಸಕರಾಗಿ ಸೇವೆ ಸಲ್ಲಿಸಿದ್ದರು. 1957ರಲ್ಲಿ ನಡೆದ ಎರಡನೇ ಸಾರ್ವತ್ರಿಕ ಚುನಾವಣೆಯಲ್ಲೂ ಮತ್ತೆ ಆಯ್ಕೆಯಾದರು. ನಂತರ 1958ರಲ್ಲಿ ಬಿ.ಡಿ. ಜತ್ತಿಯವರ ಮಂತ್ರಿಮಂಡಲದಲ್ಲಿ ಸಂಪುಟ ದರ್ಜೆಯ ಮಂತ್ರಿಯಾಗಿ ಮಾಲಿ ಮರಿಯಪ್ಪನವರು ಸಹಕಾರ, ಸಣ್ಣ ಕೈಗಾರಿಕೆ, ಖಾದಿ ಮತ್ತು ಗ್ರಾಮೋದ್ಯೋಗ ಮುಂತಾದ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸಿದರು.

1965ರಲ್ಲಿ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶಿಸಿ ಲೋಕಸಭಾ ಸದಸ್ಯರಾಗಿ ಚುನಾಯಿತರಾಗಿದ್ದಲ್ಲದೆ 1967ರಲ್ಲಿ ನಡೆದ ನಾಲ್ಕನೆಯ ಮಹಾ ಚುನಾವಣೆಯಲ್ಲೂ ಬಹುಮತದಿಂದ ಆರಿಸಿ ಬಂದು, ಸಂಸದರಾಗಿ ರಾಜಕೀಯದ ಉತ್ತುಂಗ ತಲುಪಿದರು.

ಮಾಲಿ ಮರಿಯಪ್ಪನವರ ದೃಢ ಪ್ರಯತ್ನದಿಂದಾಗಿ ತುಮಕೂರು ಜಿಲ್ಲೆಯಲ್ಲಿ ಶಾಲೆ, ಕಾಲೇಜು, ಆಸ್ಪತ್ರೆ, ಸಹಕಾರ ಸಂಘಗಳು, ಸಮುದಾಯ ಭವನ, ರಸ್ತೆ, ಸೇತುವೆಗಳು ನಿರ್ಮಾಣವಾದವು. ಗ್ರಂಥಾಲಯಗಳು, ವಿದ್ಯಾರ್ಥಿ ನಿಲಯಗಳು ಆರಂಭಿಸಲ್ಪಟ್ಟವು. ಅವರು ಅಸಾಧಾರಣ ಮೇಧಾವಿ ರಾಜಕಾರಣಿ ಮಾತ್ರವಲ್ಲದೆ, ಸರಳ ಜೀವಿಗಳು, ನಿಷ್ಠಾವಂತ ದೇಶಭಕ್ತರು, ದೀನ ದಲಿತರಲ್ಲಿ ಅತ್ಯಂತ ಅನುಕಂಪವಿದ್ದವರೂ ಆಗಿದ್ದರು. ಇಂತಹ ಮಹಾನ್ ವ್ಯಕ್ತಿಯನ್ನು ಇಂದು ನಾವು ನೆನೆಸಿಕೊಳ್ಳುವುದರ ಜೊತೆಗೆ ಅವರು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುವುದು ಅತ್ಯವಶ್ಯಕ ಎಂದು ತಿಳಿಸಬಯಸುತ್ತೇನೆ.

- ಎಚ್.ಬಿ.ಎಸ್. ಆರಾಧ್ಯ

Printed, Published & Owned by N.S. Mahesh Kumar, Published from 163, T.D. Lane, Cottonpet, Bangalore -560 053. Printed at: Abhimaani Publications Limited, 2/4, Dr. Rajkumar Road, Rajajinagar, Bangalore - 560 010. Editor: N.S. Mahesh Kumar Mobile : 9845112327, 9844320121 Volume - 8 Issue - 126

ರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ

ಬೆಂಗಳೂರು; ಅ.18 - ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಐದನೇ ರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನವನ್ನು ಅ.25ರಿಂದ 28ರವರೆಗೆ ಮಾಗಡಿ ರಸ್ತೆಯಲ್ಲಿರುವ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಆಶ್ರಯದಲ್ಲಿ ನಡೆಯಲಿರುವ ಸಮ್ಮೇಳನ ಹಾಗೂ ಅಖಿಲ ಭಾರತ ರಾಷ್ಟ್ರೀಯ ಶೈಕ್ಷಣಿಕ ಮಹಾಸಂಘದ ಬೆಳ್ಳಿಹಬ್ಬದ ಉದ್ಘಾಟನೆಯನ್ನು ಅ.26ರಂದು ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ನೆರವೇರಿಸಲಿದ್ದಾರೆ.

ಪ್ರಮುಖವಾಗಿ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರ 150ನೆ ಜನ್ಮ ದಿನಾಚರಣೆ ಅಂಗವಾಗಿ ಚಿಂತಕ ಪ್ರೊ.ಸೂರ್ಯನಾರಾಯಣ ಅವರು ಭಾಷಣ ಮಾಡಲಿದ್ದಾರೆ.

26ರಂದು ರಾತ್ರಿ ಜಾಗೋ ಭಾರತ್ ರಾಷ್ಟ್ರೀಯ ಜಾಗೃತಿ ಕಾರ್ಯಕ್ರಮ ನಡೆಯಲಿದೆ. ಪ್ರಾಥಮಿಕ, ಪ್ರೌಢ, ಪದವಿ ಶಿಕ್ಷಕರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದು ಇದೇ ವೇಳೆ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಿಕ್ಷಕ ಸಮಾಚಾರ್ ಎಂಬ ಪತ್ರಿಕೆ ಬಿಡುಗಡೆ ಮಾಡಲಿದ್ದಾರೆ.

ಇದೇ ವೇಳೆ ವಿದೇಶಿ ಕಾಯ್ದೆಗಳ ಸ್ಥಾಪನೆ ಕುರಿತಂತೆ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ಕೇಂದ್ರಕ್ಕೆ ವರದಿ ಸಲ್ಲಿಸಲಾಗುವುದೆಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಪ್ರೊ.ಕೆ.ಬಾಲಕೃಷ್ಣ ಭಟ್ ತಿಳಿಸಿದರು.


ಸಮ್ಮೇಳನದಲ್ಲಿ ದೇಶಾದ್ಯಂತ ಎಲ್ಲ ರಾಜ್ಯಗಳಿಂದ ಎರಡು ಸಾವಿರ ಮಂದಿಯ ನಿಯೋಗ ಪಾಲ್ಗೊಳ್ಳಲಿದ್ದು ರಾಜ್ಯದ 30 ಜಿಲ್ಲೆಗಳಲ್ಲೂ ಪ್ರತಿ ಜಿಲ್ಲೆಯ 5 ಮಂದಿ ಮಾತ್ರ ಪ್ರತಿನಿಧಿಸಲು ಅವಕಾಶವಿರುತ್ತದೆ.

ಮುಖ್ಯ ಅತಿಥಿಗಳಾಗಿ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಜಿ.ಬಿ.ಸಿಂಗಾಲ್, ಅಧ್ಯಕ್ಷ ವಿಮಲ್ ಪ್ರಸಾದ್ ಅಗರ್‌ವಾಲ್, ವಿಶ್ರಾಂತ ಕುಲಪತಿ ಎನ್.ಆರ್.ಶೆಟ್ಟಿ, ದಯಾನಂದ ಪೈ, ಪ್ರೊ.ಕೃಷ್ಣ ನರಹರಿ, ಪ್ರೊ.ಡಿ.ಪಿ.ಕೃಷ್ಣ ಅರುಣ್ ಶಹಾಪುರ, ಬಾಲಕೃಷ್ಣ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ವಿಜಯವಾಣಿ
BANGALORE

ಬುಧವಾರ
3 ಅಕ್ಟೋಬರ್ 2012

ಖಾದಿ ಗ್ರಾಮೋದ್ಯೋಗಕ್ಕೆ 7 ಕೋಟಿ ರೂ. ಮೀಸಲು



ಗಾಂಧಿ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಚರಕದಿಂದ ನೂಲು ತೆಗೆಯುತ್ತಿರುವ ಮುಖ್ಯಮಂತ್ರಿ ಜಗದೀಶ ಶೆಟ್ಟರ್.

ಬೆಂಗಳೂರು: ಸಂಕಷ್ಟದಲ್ಲಿರುವ ಖಾದಿ ಮತ್ತು ಗ್ರಾಮೋದ್ಯೋಗದ ಪುನಶ್ಚೇತನಕ್ಕೆ ಸರ್ಕಾರ 7 ಕೋಟಿ ರೂ. ಅನುದಾನ ಮೀಸಲಿಟ್ಟಿದೆ ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಹೇಳಿದ್ದಾರೆ.

ರಾಷ್ಟ್ರಧ್ವಜ ಘಟಕಕ್ಕೆ 1 ಕೋಟಿ ರೂ.

ಹುಬ್ಬಳ್ಳಿಯಲ್ಲಿ ಗಾಂಧಿಗ್ರಾಮ ಸ್ಥಾಪನೆ

ಖಾದಿ ಗ್ರಾಮೋದ್ಯೋಗಕ್ಕೆ ಪುನಶ್ಚೇತನ

ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ವಾರ್ತಾ ಇಲಾಖೆ, ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಶಾಂತಿ ಪ್ರತಿಷ್ಠಾನ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಒಗ್ಗೂಡಿ ಆಯೋಜಿಸಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಖಾದಿ ಗ್ರಾಮೋದ್ಯೋಗ ಇಲಾಖೆ ತೀವ್ರ ಆರ್ಥಿಕ ಸಂಕಷ್ಟದಲ್ಲಿದೆ. ಇದರಲ್ಲಿ 32 ಸಾವಿರ ಉದ್ಯೋಗಿಗಳು ಇದ್ದಾರೆ. ಅವರು ಕಷ್ಟಕ್ಕೆ ಗುರಿಯಾಗಿದ್ದಾರೆ. ಇವರಿಗೆ ಬಲ ತುಂಬುವ ಮೂಲಕ ಇಲಾಖೆ ಪುನಶ್ಚೇತನಗೊಳಿಸಲು ಸರ್ಕಾರ ಅನುದಾನ ಮೀಸಲಿಟ್ಟಿದೆ ಎಂದರು.

ಗಾಂಧಿ ಗ್ರಾಮಕ್ಕೆ ಚಾಲನೆ: ಹುಬ್ಬಳ್ಳಿಯಲ್ಲಿರುವ ರಾಷ್ಟ್ರಧ್ವಜ ಘಟಕಕ್ಕೆ ಒಂದು ಕೋಟಿ ರೂ. ಅನುದಾನ ನೀಡಿ ಪ್ರೋತ್ಸಾಹಿಸಲಾಗುವುದು. ಗಾಂಧಿ ಚಿಂತನೆಗಳನ್ನು ಮುದ್ರಿಸಿ ಪ್ರಚಾರ ಮಾಡಲು ಕೂಡಲೇ 50 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗುತ್ತದೆ. ಪಾಟೀಲ್ ಪುಟ್ಟಪ್ಪನವರ ಬಹುದಿನಗಳ ಬೇಡಿಕೆಯಾದ ಹುಬ್ಬಳ್ಳಿಯಲ್ಲಿ ಗಾಂಧಿಗ್ರಾಮ ಸ್ಥಾಪನೆ ಕಾರ್ಯಕ್ಕೆ ಚಾಲನೆ ನೀಡಲಾಗುವುದು. ಅದು ಹೇಗಿರಬೇಕೆಂಬ ರೂಪುರೇಷೆಗಳ ಬಗ್ಗೆ ಚಿಂತನೆ ನಡೆಯುತ್ತಿದೆ ಎಂದರು.

ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ ಮಾತನಾಡಿ, ಕಾಲೇಜು ಕ್ಯಾಂಪಸ್‌ಗಳಲ್ಲಿ ಮದ್ಯಪಾನ ನಿಷೇಧ ಮಾಡಬೇಕು. ಪಠ್ಯ ಪುಸ್ತಕಗಳಲ್ಲಿ ಗಾಂಧಿ ವಿಚಾರಧಾರೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಗಾಂಧಿ ಜಯಂತಿ ವರ್ಷಪೂರ್ತಿ ನಡೆಯುವ ಕಾರ್ಯಕ್ರಮವಾಗಬೇಕು ಎಂದರು. ಹಿರಿಯ ಪತ್ರಕರ್ತ ಡಾ. ಪಾಟೀಲ ಪುಟ್ಟಪ್ಪ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಮಾತನಾಡಿದರು.

ಕೃತಿಗಳ ಬಿಡುಗಡೆ: ಮಹಾತ್ಮಾ ಗಾಂಧಿ, ನಮ್ಮ ಗಾಂಧಿ ತಾತಾ, ಜನಪದ ಗಾಂಧಿ ವಿಶೇಷಾಂಕವನ್ನು ಉಚಿತವಾಗಿ ಹಂಚಲಾಯಿತು. ಗಾಂಧೀಜಿ ಚಿತ್ರಗಳನ್ನೊಳಗೊಂಡ ಅಂಚೆ ಚೀಟಿಗಳು, ಗಾಂಧಿ ಕುರಿತ ವರದಿಗಳ ಪ್ರದರ್ಶನ ನಡೆಯಿತು.

ಇಂಧನ ಸಚಿವೆ ಶೋಭಾ ಕರಂದ್ಲಾಜೆ, ಸಿಎಂ ಪತ್ನಿ ಶಿಲ್ಪಾ ಶೆಟ್ಟರ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ. ಕೃಷ್ಣ, ಕನ್ನಡ ಸಂಸ್ಕೃತಿ ಕಾರ್ಯದರ್ಶಿಗಳಾದ ಬಸವರಾಜು, ವಾರ್ತಾ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಹಾಜರಿದ್ದರು.

ಗಾಂಧಿ ಪ್ರತಿಮೆಯಿಂದ ಕುಮಾರ ಪಾರ್ಕ್ ಗಾಂಧಿ ಭವನದವರೆಗೆ ಗಾಂಧೀಜಿ ಅನುಯಾಯಿಗಳ ಸದ್ಭಾವನಾ ಪಾದಯಾತ್ರೆ ನಡೆಯಿತು.

ಗಾಂಧಿ ಜಯಂತಿಯಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಘೋಷಣೆ

ಗಾಂಧಿ ಸ್ಮಾರಕ ನಿಧಿಗೆ 50 ಲಕ್ಷ ಅನುದಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲಾ– ಕಾಲೇಜು ಸೇರಿದಂತೆ ವಿವಿಧ ಕಡೆಗಳಲ್ಲಿ ಗಾಂಧಿ ವಿಚಾರಧಾರೆಯನ್ನು ಪಸರಿಸಲು ಗಾಂಧಿ ಸ್ಮಾರಕ ನಿಧಿಗೆ 50 ಲಕ್ಷ ರೂಪಾಯಿ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಘೋಷಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ವಾರ್ತಾ ಇಲಾಖೆ, ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಗಾಂಧಿ ಶಾಂತಿ ಪ್ರತಿಷ್ಠಾನ, ರಾಷ್ಟ್ರೀಯ ಸೇವಾ ಯೋಜನೆಯ ಆಶ್ರಯದಲ್ಲಿ ನಗರದ ಗಾಂಧಿ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮಹಾತ್ಮ ಗಾಂಧಿ ಜಯಂತಿ, ವಿಶ್ವ ಅಹಿಂಸಾ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಖಾದಿ–ಗ್ರಾಮೋದ್ಯೋಗಗಳಲ್ಲಿ ದುಡಿಯುತ್ತಿರುವ 37 ಸಾವಿರ ಕೆಲಸಗಾರರ ಕ್ಷೇಮಾಭಿವೃದ್ಧಿಗೆ ಏಳು ಕೋಟಿ ರೂಪಾಯಿ ಮೀಸಲು ಇರಿಸಲಾಗಿದೆ. ರಾಷ್ಟ್ರ ಧ್ವಜವನ್ನು ತಯಾರಿಸುವ ಹುಬ್ಬಳ್ಳಿಯ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘಕ್ಕೂ ಒಂದು ಕೋಟಿ ಆರ್ಥಿಕ ನೆರವು ನೀಡಲಾಗುವುದು' ಎಂದು ಅವರು ಭರವಸೆ ನೀಡಿದರು.

'ಗಾಂಧೀಜಿ ಅವರ ತತ್ವ, ವಿಚಾರಧಾರೆಗಳು ಪುಸ್ತಕ, ಭಾಷಣ, ಉಪನ್ಯಾಸಕ್ಕೆ ಸೀಮಿತವಾಗಬಾರದು. ನಮ್ಮ ಆಚಾರದಲ್ಲೂ ಅವರ ವಿಚಾರಧಾರೆ ಅನುಷ್ಠಾನ ಅಗತ್ಯ. ಹುಬ್ಬಳ್ಳಿಯಲ್ಲಿ ಗಾಂಧೀ ಗ್ರಾಮ ನಿರ್ಮಾಣಕ್ಕೆ ಸರ್ಕಾರ ಉದ್ದೇಶಿಸಿದ್ದು, ಇದಕ್ಕೆ ಪೂರ್ವ ಸಿದ್ಧತೆ ನಡೆಯುತ್ತಿದೆ' ಎಂದರು.



ನಗರದ ಗಾಂಧಿ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ, ವಿಶ್ವ ಅಹಿಂಸಾ ದಿನಾಚರಣೆಯ ಸಂದರ್ಭದಲ್ಲಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಚರಕವನ್ನು ತಿರುಗಿಸಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ, ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದ ಹೆಗಡೆ ಉಪಸ್ಥಿತರಿದ್ದರು -ಪ್ರಜಾವಾಣಿ ಚಿತ್ರ

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ.ಶ್ರೀನಿವಾಸಯ್ಯ, 'ಯುವಕರಿಗೆ ಗಾಂಧಿ ವಿಚಾರಧಾರೆಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಇದೆ. ಆದರೆ, ಈ ಬಗ್ಗೆ ಮಾರ್ಗದರ್ಶನ ಮಾಡುವವರ ಕೊರತೆ ಇದೆ. ಈ ನಿಟ್ಟಿನಲ್ಲಿ ಗಾಂಧಿ ವಿಚಾರಧಾರೆಗಳನ್ನು ಪಸರಿಸುವ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಅನುದಾನ ನೀಡಬೇಕು' ಎಂದು ಆಗ್ರಹಿಸಿದರು.

ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, 'ಶಾಲಾ ಕ್ಯಾಂಪಸ್‌ಗಳ ಆಸುಪಾಸಿನಲ್ಲಿ ಮದ್ಯ ಹಾಗೂ ಮಾದಕವಸ್ತುಗಳ ನಿಷೇಧಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಪಠ್ಯಪುಸ್ತಕಗಳಲ್ಲಿ ಗಾಂಧಿ ಪಠ್ಯವನ್ನು ಅಳವಡಿಸಬೇಕು' ಎಂದು ಒತ್ತಾಯಿಸಿದರು.

ಶಿಲ್ಪಾ ಜಗದೀಶ ಶೆಟ್ಟರ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಬಸವರಾಜು, ವಾರ್ತಾ ಇಲಾಖೆಯ ನಿರ್ದೇಶಕ ಎನ್.ಆರ್.ವಿಶುಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಡಾ.ಹೊ.ಶ್ರೀನಿವಾಸಯ್ಯ ಸಂಪಾದಿಸಿದ 'ಮದ್ಯಪಾನದ ವಿರುದ್ಧ ಗಾಂಧಿ', ವಾರ್ತಾ ಇಲಾಖೆ ಪ್ರಕಟಿಸಿದ 'ನಮ್ಮ ಗಾಂಧಿ ತಾತ' ಪುಸ್ತಕ ಹಾಗೂ 'ಜನಪದ' ಗಾಂಧಿ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ರಾಜಶೇಖರ ಮಠಪತಿ ಅವರ 'ಗಾಂಧೀಜಿ ಅಂತಿಮ ದಿನಗಳು' ಪುಸ್ತಕಕ್ಕೆ ಜಯಶ್ರೀ ಟ್ರಸ್ಟ್ ದತ್ತಿ ಪುರಸ್ಕಾರ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಕಾವೇರಿ: ಸಿಎಂ ವಿರುದ್ಧ ಘೋಷಣೆ

ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ನಡೆದ ಗಾಂಧಿ ಭವನದ ಕಾರ್ಯಕ್ರಮದ ಸಂದರ್ಭದಲ್ಲಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ವಿರುದ್ಧ ಘೋಷಣೆ ಕೂಗಿದರು.

ಗಾಂಧಿ ಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ 20ಕ್ಕೂ ಅಧಿಕ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ ಬಳಿಕ ಬಿಡುಗಡೆಗೊಳಿಸಿದರು.

ಹಿರಿಯರ ಗಾಂಧಿ ಸ್ಮೃತಿ

'ದೇಶದ ಸಾಕ್ಷರತೆ ಪ್ರಮಾಣ ಶೇ 74ರಷ್ಟಾಗಿದ್ದರೂ ಅನ್ಯಾಯದ ವಿರುದ್ಧ ದನಿಯೆತ್ತುವವರ ಸಂಖ್ಯೆ ಕಡಿಮೆಯಾಗಿದೆ. ಶಾಸಕರು ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಿ ಸಮಸ್ಯೆಯ ಮಾಹಿತಿ ಪಡೆದು ತಮ್ಮ ಮತ ಕ್ಷೇತ್ರದಾಚೆಗಿನ ಸಮಸ್ಯೆಗಳಿಗೂ ಸ್ಪಂದಿಸಬೇಕು' ಎಂದು ಹಿರಿಯ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪ ಸಲಹೆ ನೀಡಿದರು.

'ಪರಿಶಿಷ್ಟ ಜಾತಿ ಹಾಗೂ ಪಂಗಡದವರನ್ನು ಹೀನಾಯವಾಗಿ ನೋಡುವುದು ನಾಗರಿಕತೆಯ ಬಹು ದೊಡ್ಡ ಕಳಂಕ. ಅವರನ್ನು ಪ್ರಾಣಿಗಳಂತೆ ನೋಡುತ್ತಿದ್ದೇವೆ. ಅವರು ಪ್ರತ್ಯೇಕ ಕಾಲೋನಿಗಳಲ್ಲಿ ವಾಸಿಸದೆ ನಮ್ಮೊಡನೆಯೇ ಬದುಕಬೇಕು. ನಾವೆಲ್ಲ ಜಾತಿಯನ್ನು ಮೀರಿ ಬೆಳೆಯಬೇಕು' ಎಂದು ಅವರು ತಿಳಿಸಿದರು.

ಸದ್ಭಾವನಾ ಪಾದಯಾತ್ರೆ

ನಗರದ ಎಂ.ಜಿ. ರಸ್ತೆಯ ಗಾಂಧಿ ಪ್ರತಿಮೆಯ ಬಳಿಯಿಂದ ಕುಮಾರ ಪಾರ್ಕ್ ಗಾಂಧೀಭವನದವರೆಗೆ ಮಂಗಳವಾರ ಸದ್ಭಾವನಾ ಪಾದಯಾತ್ರೆ ಆಯೋಜಿಸಲಾಗಿತ್ತು.

ಮಹಾತ್ಮ ಗಾಂಧಿ ಜಯಂತಿಯ ಅಂಗವಾಗಿ ಏರ್ಪಡಿಸಲಾಗಿದ್ದ ಪಾದಯಾತ್ರೆಯನ್ನು ಶಿಲ್ಪಾ ಜಗದೀಶ ಶೆಟ್ಟರ್ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಿದರು. ಅಲ್ಲದೆ ಶಿಲ್ಪಾ ಶೆಟ್ಟರ್ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆ, ಆಚಾರ್ಯ ನರ್ಸಿಂಗ್ ಕಾಲೇಜು ಹಾಗೂ ರಾಜೀವ್‌ಗಾಂಧಿ ಆರೋಗ್ಯ ವಿವಿಯ ಎನ್‌ಎಸ್‌ಎಸ್ ವಿದ್ಯಾರ್ಥಿಗಳು 30 ನಿಮಿಷದಲ್ಲಿ ಮೂರು ಕಿ.ಮೀ. ದೂರ ಕ್ರಮಿಸಿದರು.

ಸಂಯುಕ್ತ ಕರ್ನಾಟಕ | | ಅಕ್ಟೋಬರ್ | 3 | 2012



ಮಹಾತ್ಮಗಾಂಧಿ ಜಯಂತಿ ಅಂಗವಾಗಿ ಮಂಗಳವಾರ ಆಯೋಜಿಸಲಾಗಿದ್ದ ಸದ್ಭಾವನಾ ಪಾದಯಾತ್ರೆಯಲ್ಲಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಪತ್ನಿ ಶಿಲ್ಪಾ ಶೆಟ್ಟರ್, ಡಾ. ಹೊ. ಶ್ರೀನಿವಾಸಯ್ಯ, ವೂಡೇ ಪಿ. ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಸ್ಫೂರ್ತಿ ನೀಡಿದ ಸದ್ಭಾವನಾ ಪಾದಯಾತ್ರೆ

ಬೆಂಗಳೂರು, ಅ. 2: ಮಹಾತ್ಮಗಾಂಧಿ ಜಯಂತಿ ಅಂಗವಾಗಿ ಮಹಾತ್ಮಗಾಂಧಿ ರಸ್ತೆಯಿಂದ ಗಾಂಧಿಭವನದವರೆಗೆ ಸದ್ಭಾವನಾ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಪತ್ನಿ ಶಿಲ್ಪಾ ಜಗದೀಶ ಶೆಟ್ಟರ್ ನೇತೃತ್ವದಲ್ಲಿ ನಡೆದ ಸದ್ಭಾವನಾ ಪಾದಯಾತ್ರೆಯು ಭಾಗವಹಿಸಿದವರಿಗೆ ಹೊಸ ಹುಮ್ಮಸ್ಸು, ಹುರುಪು, ಸ್ಫೂರ್ತಿ ನೀಡಿತು.

ಗಾಂಧೀ ಸ್ಮಾರಕ ನಿಧಿ, ಗಾಂಧೀ ಶಾಂತಿ ಪ್ರತಿಷ್ಠಾನ, ವಾರ್ತಾ ಇಲಾಖೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಂಯುಕ್ತ ಆಶ್ರಯದಲ್ಲಿ ಸದ್ಭಾವನಾ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಪಾದಯಾತ್ರೆಗೆ ಚಾಲನೆ ನೀಡಿದ ಶಿಲ್ಪಾ ಜಗದೀಶ ಶೆಟ್ಟರ್ ಅವರು ಸಾಂಕೇತಿಕವಾಗಿ ಸ್ವಲ್ಪ ದೂರ ಪಾದಯಾತ್ರೆಯಲ್ಲಿ ಪಾಲ್ಗೊಂಡರೂ ಸಾಕು ಎಂದು ಅಧಿಕಾರಿಗಳು ತಿಳಿಸಿದ್ದರು. ಆದರೆ, ಗಾಂಧಿಭವನದವರೆಗಿನ 3 ಕಿ.ಮೀ. ನಡೆದುಬಂದದ್ದು ವಿಶೇಷವಾಗಿತ್ತು. ಅದೂ ಇಷ್ಟು ದೂರವನ್ನು ಕೇವಲ 30 ನಿಮಿಷದಲ್ಲಿ ಕ್ರಮಿಸಿ ವಿದ್ಯಾರ್ಥಿಗಳೂ ಅಚ್ಚರಿಪಡುವಂತೆ ಮಾಡಿದರು. ಪಾದಯಾತ್ರೆ ನಂತರ ಸುದ್ದಿಗಾರರ ಜತೆ ಮಾತನಾಡಿದ ಅವರು, ಈಗಿನ ಯುವ ಜನತೆ ಕೆಲ ದುಶ್ಚಟಗಳಿಗೆ ದಾಸರಾಗಿದ್ದಾರೆ. ಗಾಂಧೀಜಿಯವರ ಅಹಿಂಸಾ ತತ್ವಗಳನ್ನು ಯುವಜನತೆ ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು. ಇದರಿಂದ ನಮ್ಮಲ್ಲಿ ಮತ್ತೆ ಗಾಂಧಿ ಹುಟ್ಟಿಬರುತ್ತಾರೆ ಎಂದು ನುಡಿದರು.

ಪಾದಯಾತ್ರೆಯಲ್ಲಿ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ, ವಾರ್ತಾ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್, ಜಂಟಿನಿರ್ದೇಶಕರಾದ ಎಂ. ರವಿಕುಮಾರ್, ಡಾ. ಬಿ.ಆರ್. ಮಮತಾ, ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಚ್.ಬಿ. ದಿನೇಶ್, ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯ ರಾಜ್ಯ ಸಂಪರ್ಕಾಧಿಕಾರಿ ಡಾ. ಕೆ.ಬಿ. ಧನಂಜಯ ಮತ್ತಿತರರು ಭಾಗವಹಿಸಿದ್ದರು.

ಉದಯವಾಣಿ

ಬುಧವಾರ | ಅಕ್ಟೋಬರ್ | 3 | 2012

ಗಾಂಧಿ ಮಯಂ

ಶಾಂತಿ ದೂತ ಗಾಂಧಿ ನೆನಪಿನ ಮೆರವಣಿಗೆ...

■ ಎಲ್ಲೆಲ್ಲೂ ಗಾಂಧಿಗೆ ನಮನ ■ ರಕ್ತದಾನ, ಶ್ರಮದಾನ ■ ಆದರ್ಶ ವ್ಯಕ್ತಿಯ ವ್ಯಕ್ತಿತ್ವ ಗುಣಗಾನ

ಗಾಂಧಿಯವರ ಆದರ್ಶ, ಸಿದ್ಧಾಂತಗಳ ಜಪ. ವರ ಕನಸು, ದೇಶದ ಸ್ವಾತಂತ್ರ್ಯಕ್ಕೆ ಅವರು ನೀಡಿದದ ಕೊಡುಗೆಗಳ ಗುಣಗಾನ. ದೈನಂದಿನ ಕೆಲಸ ಬಿಟ್ಟು ಶ್ರಮದಾನ ಮಾಡಿದ ಗಣ್ಯರು, ಚಿಣ್ಣರು. ಗಾಂಧಿ ನೆನಪಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳ ರಂಗು, ಕಾವೇರಿ ಹೋರಾಟದಲ್ಲೂ ಶಾಂತಿ ಮಂತ್ರ. ಗಾಂಧಿ ಫೋಟೋ ಮುಟ್ಟ ರೌಡಿಸಂ ಬಿಡ್ತೇವೆ ಎಂದು ಆಣೆ ಮಾಡಿದ ಖೈದಿಗಳು. ಇದು ಉದ್ಯಾನ ನಗರಿಯ ಎಲ್ಲೆಡೆ ಸಂಭ್ರಮದ ಗಾಂಧಿ ಜಯಂತಿ ವಿಶೇಷ.

ಬೆಂಗಳೂರು: ಮಹಾತ್ಮ ಗಾಂಧಿಯವರ 143ನೇ ಜನ್ಮ ದಿನಾಚರಣೆ ಪ್ರಯುಕ್ತ ಮಂಗಳವಾರ ನಗರದ ವಿವಿಧೆಡೆ ಗಾಂಧೀ ಜಯಂತಿ ಹಾಗೂ ಅಂತರಾಷ್ಟ್ರೀಯ ಅಹಿಂಸಾ ದಿನಾಚರಣೆ ಸಂಭ್ರಮದಿಂದ ಆಚರಿಸಲಾಯಿತು.

ಬಸವನಗುಡಿ ಗಿರಿನಗರ ನಾಗರಿಕರ ವೇದಿಕೆ ಕಾರ್ಯಕರ್ತರು ಬಸವನಗುಡಿ ಎಸ್.ಬಿ.ಎಂ. ಕಾಲೋನಿಯಲ್ಲಿ 'ಗಾಂಧೀಜಿ ಕನಸು ನನಸು ಮಾಡೋಣ, ಒಣಕಸ - ಹಸಿ ಕಸ ಬೇರ್ಪಡಿಸೋಣ' ಎಂಬ ಘೋಷಣೆ ಕೂಗುತ್ತಾ ಗಾಂಧೀಜಿ ಭಾವಚಿತ್ರದೊಂದಿಗೆ ಮನೆಮನೆಗೂ ತೆರಳಿ ಕಸ ಸಂಗ್ರಹಿಸಿ ವಿಭಿನ್ನ ಮಾದರಿಯಲ್ಲಿ ಆಚರಿಸಿದರು.

ಶ್ರೇಷ್ಠ ಪೌರ ಮಹಿಳಾ ಕಾರ್ಮಿಕ ಪ್ರಶಸ್ತಿ ವಿಜೇತೆ ಲಕ್ಷ್ಮಮ್ಮ ಅವರು ಒಣ ಕಸ ಹಾಗೂ ಹಸಿ ಕಸವನ್ನು ಪ್ರತ್ಯೇಕ ಬ್ಯಾಗ್‌ಗಳಲ್ಲಿ ಸಂಗ್ರಹಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಸದಸ್ಯರಾದ ಪಿ.ನಾಗರಾಜ್, ಸಿ.ರಾಜೇಂದ್ರ, ಶಾಂತಾರಾಂ, ನಾಗೇಶ್ ಹೆಗಡೆ ಮತ್ತಿತರರು ಹಾಜರಿದ್ದರು.

ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಐಟಿ ವಿಭಾಗವು ಗಾಂಧಿ ಹಾಗೂ ಶಾಸ್ತ್ರಿ ಅವರ ಜನ್ಮ ದಿನಾಚರಣೆಯನ್ನು ನಗರದ ಸ್ವತಂತ್ರ್ಯ ಉದ್ಯಾನವನದ ಬಳಿ ಆಚರಿಸಿತು. ಶಾಸಕ ನೆ.ಲ. ನರೇಂದ್ರಬಾಬು, ಸಮಿತಿ ಅಧ್ಯಕ್ಷ ಟಿ.ಆರ್. ಶ್ರೀನಿವಾಸ್ ಇದ್ದರು.

ಟಿ.ಜಿ. ಸಂಜೀವಿನಿ ಗ್ರಾಮೀಣ ಮತ್ತು ನಗರಾಭಿವೃದ್ಧಿ ಟ್ರಸ್ಟ್, ನಗರದ ಬ್ಯಾಟರಾಯನಪುರದ ಟಿ.ಜಿ. ಸಂಜೀವಿನಿ ಗ್ರಾಮೀಣ ಮತ್ತು ನಗರಾಭಿವೃದ್ಧಿ ಟ್ರಸ್ಟ್ ಶಾಲಾಮಕ್ಕಳೊಂದಿಗೆ ಗಾಂಧಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಗಾಂಧಿ ಜಯಂತಿಯನ್ನು ಆಚರಿಸಿತು. ಈ ವೇಳೆ ಕಾರ್ಮಿಕ ಮುಖಂಡ, ಟಿ. ಜಯರಾಂ, ಜೆ. ಸೋಮಶೇಖರ್, ಮಹಿಳಾ ಮಂಡಳಿ ಅಧ್ಯಕ್ಷೆ ಜಯಮ್ಮ ಮತ್ತಿತರರು ಹಾಜರಿದ್ದರು.



ನಗರದ ಗಾಂಧಿ ಭವನದಲ್ಲಿ ಗಾಂಧಿ ಜಯಂತಿಯಲ್ಲಿ ಮುಖ್ಯಮಂತ್ರಿ ಶೆಟ್ಟರ್ ಪಾಲ್ಗೊಂಡು ಗಾಂಧಿ ಚರಕವನ್ನು ತಿರುಗಿಸಿ ನೂಲು ನೇಯ್ದರು.




ಕರ್ನಾಟಕ ಸಂಯಮ ಮಂಡಳಿ ಹಮ್ಮಿಕೊಂಡಿದ್ದ ಸದ್ಭಾವನಾ ರ್‍ಯಾಲಿಯಲ್ಲಿ ಮುಖ್ಯಮಂತ್ರಿ ಪತ್ನಿ ಶಿಲ್ಪಾ ಜಗದೀಶ್ ಶೆಟ್ಟರ್ ಶುಶ್ರೂಕಿಯರು ಪಾಲ್ಗೊಂಡು ಮದ್ಯಪಾನದ ಹಾನಿ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಪ್ರಜಾವಾಣಿ ಗುರುವಾರ 27ನೇ ಸೆಪ್ಟೆಂಬರ್ 2012

ನಿಧನ ವಾರ್ತೆ

ಡಬ್ಲ್ಯು.ಎಚ್.ಪುಟ್ಟಯ್ಯ



ಬೆಂಗಳೂರು: ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಬ್ಲ್ಯು.ಎಚ್.ಪುಟ್ಟಯ್ಯ (89) ಅವರು ಬುಧವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು.

ಭಾರತ ಬಿಟ್ಟು ತೊಲಗಿ ಸೇರಿದಂತೆ ಹಲವು ಸ್ವಾತಂತ್ರ್ಯ ಹೋರಾಟಗಳಲ್ಲಿ ಭಾಗವಹಿಸಿ ಜೈಲು ಸೇರಿದ್ದ ಪುಟ್ಟಯ್ಯ ಅವರು, ಗಾಂಧೀಜಿ ಅವರ ತತ್ವಗಳಲ್ಲಿ ಅತೀವ ನಂಬಿಕೆ ಇಟ್ಟಿದ್ದರು. ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಬ್ರಹ್ಮಸಮಾಜ ಮತ್ತು ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. 1983 ರಲ್ಲಿ ವೂಡೇ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದರು. ಗ್ರಾಮೀಣ ಜನರಿಗೆ ಶಿಕ್ಷಣ ಒದಗಿಸುವ ಜತೆಗೆ ವೈದ್ಯಕೀಯ ಸೇವೆಯನ್ನೂ ನೀಡಿದ್ದರು.

ಮೃತರು ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ ಸೇರಿದಂತೆ 6 ಮಂದಿ ಪುತ್ರರು, 2 ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸಂಜೆ ಹೆಬ್ಬಾಳದ ಚಿತಾಗಾರದಲ್ಲಿ ನಡೆಯಿತು.

ಈ ಸಂಜೆ

ಭಾನುವಾರ, 23 ಸೆಪ್ಟೆಂಬರ್, 2012



ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮ ದಿನಾಚರಣೆ ಅಂಗವಾಗಿ ಅಭ್ಯಂತರ ಸಂಸ್ಥೆ ಆಯೋಜಿಸಿದ್ದ ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ.ವೇಣುಗೋಪಾಲ್, ಡಾ.ಎಚ್.ಶ್ರೀನಿವಾಸ್, ಡಾ.ಎಸ್.ಎ.ಚಾರ್ ಮತ್ತು ಉಮಾರೆಡ್ಡಿ ಅವರನ್ನು ಸನ್ಮಾನಿಸಲಾಯಿತು. ಕೌನ್ಸಿಲ್ ಸದಸ್ಯ ಡಾ.ಕೃಷ್ಣ, ಡಾ.ಗೋಪಾಲಕೃಷ್ಣನ್, ಮಲ್ಲೇಪುರಂ ಜಿ.ವೆಂಕಟೇಶ್, ಶ್ರೀಕಾಂತ್ , ಲಾರೆನ್ಸ್ ಸುಧೀಂದ್ರ ಪಾಲ್ಗೊಂಡಿದ್ದರು.

ಭಾನುವಾರ, 16 ಸೆಪ್ಟೆಂಬರ್ 2012 | ಕನ್ನಡಪ್ರಭ

ಸರ್.ಎಂ.ವಿ. ಕೊಡುಗೆ ಎಲ್ಲ ಕಾಲಕ್ಕೂ ಮಾದರಿ: ಲಾರೆನ್ಸ್



ಸರ್.ಎಂ. ವಿಶ್ವೇಶ್ವರಯ್ಯ ಅವರು ಯಂತ್ರನಿರ್ವಹಣಾ ವಿಜ್ಞಾನದ ಮಹಾನ್ ನಾಯಕ. ಅವರ ಕೊಡುಗೆಗಳು, ಜೀವನ ಶೈಲಿ ಎಂದಿಗೂ ಮಾದರಿ ಎಂದು ಕೇಂದ್ರ ಯೋಜನಾ ಆಯೋಗದ ಚೇರ್ ಪ್ರೊಫೆಸರ್ ಪ್ರೊ.ಲಾರೆನ್ಸ್ ಸುರೇಂದ್ರ ಅಭಿಪ್ರಾಯಪಟ್ಟರು. ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಆಯೋಜಿಸಿದ ಎಂಜಿನಿಯರ್ಸ್ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕರ್ನಾಟಕಕ್ಕೆ ವಿಶ್ವೇಶ್ವರಯ್ಯನವರ ಕೊಡುಗೆ ಅಪಾರ. ಅವುಗಳ ರಕ್ಷಣೆ ಮತ್ತು ಕಾಪಾಡಿಕೊಳ್ಳುವ ಹೊಣೆ ನಮ್ಮೆಲ್ಲರದ್ದಾಗಿದೆ ಎಂದು ಹೇಳಿದರು. ಇಂದಿನ ಎಂಜಿನಿಯರ್‌ಗಳು ಯೋಜನೆ ರೂಪುಗೊಳಿಸುವಲ್ಲಿ ಹಾಕುವ ಬಜೆಟ್ ಯೋಜನೆ ಕಾರ್ಯರೂಪಕ್ಕೆ ಬರುವಷ್ಟರಲ್ಲಿ ದುಪ್ಪಟ್ಟಾಗಿರುತ್ತದೆ. ಯಾವುದೇ ಯೋಜನೆ ರೂಪಿಸುವ ಮೊದಲು ಅದರ ಅನುಕೂಲಗಳು, ಅನಾನೂಕೂಲದ ಕುರಿತು ಆಲೋಚಿಸಿ ಕಾರ್ಯರೂಪಕ್ಕೆ ತರಬೇಕೆನ್ನುವುದು ಸರ್.ಎಂ.ವಿ ಅನುಸರಿಸುತ್ತಿದ್ದ ಮಾದರಿ ಎಂದರು. ಸಮಾರಂಭದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್, ಡಾ.ಕೆ. ಗೋಪಾಲಕೃಷ್ಣನ್, ಡಾ.ಎಚ್. ಶ್ರೀನಿವಾಸಯ್ಯ, ಡಾ. ವೂಡೇ ಪಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಭಾನುವಾರ 16ನೇ ಸೆಪ್ಟೆಂಬರ್ 2012

ಸರ್ಕಾರಿ ಆಚರಣೆಯಾಗಿ ವಿಶ್ವೇಶ್ವರಯ್ಯ ಜನ್ಮದಿನ

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಸರ್ಕಾರಿ ಆಚರಣೆಯಾಗಿ ಘೋಷಿಸುವ ಬಗ್ಗೆ ಚಿಂತನೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಹೇಳಿದರು.

ನಗರದಲ್ಲಿ ಶನಿವಾರ ಕರ್ನಾಟಕ ಎಂಜಿನಿಯರ್‌ಗಳ ಒಕ್ಕೂಟ ಆಯೋಜಿಸಿದ್ದ ಸರ್.ಎಂ.ವಿಶ್ವೇಶ್ವರಯ್ಯನವರ 152ನೇ ಜನ್ಮದಿನಾಚರಣೆ ಹಾಗೂ ಎಂಜಿನಿಯರ್‌ಗಳ ದಿನದ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಸಹಾಯಕ ಎಂಜಿನಿಯರ್ ಆಗಿ ಸೇವೆಗೆ ಆರಂಭಿಸಿ ರಾಜ್ಯದ ಮುಖ್ಯ ಎಂಜಿನಿಯರ್ ಮತ್ತು ದಿವಾನರ ಹುದ್ದೆಗೇರಿದ ಮಹನೀಯರು ಸರ್.ಎಂ.ವಿಶ್ವೇಶ್ವರಯ್ಯ ಅವರು. ರಾಜ್ಯ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಅವರ ಸೇವೆ ಅವಿಸ್ಮರಣೀಯ. ಅಲ್ಲದೇ ಜಗತ್ತಿನ ಹಲವು ದೇಶಗಳ ತಂತ್ರಜ್ಞಾನ ಅಭಿವೃದ್ಧಿಗೆ ಸರ್.ಎಂ.ವಿ ಅವರು ಅನನ್ಯ ಕೊಡುಗೆ ನೀಡಿದ್ದಾರೆ. ಅವರ ಜನ್ಮದಿನವನ್ನು ಸರ್ಕಾರಿ ಆಚರಣೆಯನ್ನಾಗಿ ಘೋಷಿಸುವ ಬಗ್ಗೆ ಶೀಘ್ರವೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗವುದು' ಎಂದು ಅವರು ತಿಳಿಸಿದರು.

'ದೇಶದ ಅಭಿವೃದ್ಧಿಯಲ್ಲಿ ಎಂಜಿನಿಯರ್‌ಗಳ ಪಾತ್ರ ಪ್ರಮುಖವಾದುದು. ದೇಶದ ಸದ್ಯದ ಸಮಸ್ಯೆಗಳ ನಿವಾರಣೆಗಾಗಿ ಆಧುನಿಕ ತಂತ್ರಜ್ಞಾನದ ಮಹತ್ವವನ್ನು ಎಂಜಿನಿಯರ್‌ಗಳು ಸಂಬಂಧಪಟ್ಟ ಸಚಿವರ ಗಮನಕ್ಕೆ ತರಬೇಕು. ಇದರಿಂದ ಆಡಳಿತದಲ್ಲಿ ಸುಧಾರಣೆ ತರಲು ಸಾಧ್ಯವಿದೆ. ಎಂಜಿನಿಯರ್‌ಗಳು ತಾವು ಇಚ್ಛಿಸಿದ ಇಲಾಖೆಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುವ ಆಯ್ಕೆಯನ್ನು ಅವರಿಗೇ ನೀಡುವ ಬಗ್ಗೆ ಲೋಕೋಪಯೋಗಿ ಇಲಾಖೆಯ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಚಿಂತನೆ ನಡೆಸಲಾಗಿದೆ' ಎಂದರು.

'ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗಾಗಿ ಸರ್ಕಾರ ಕಾಮಗಾರಿ ಗುಣನಿಯಂತ್ರಣ ಕಾರ್ಯಪಡೆಯನ್ನು ಆರಂಭಿಸಿದ್ದು, ಕಾರ್ಯಪಡೆಯ ಮಧ್ಯಂತರ ವರದಿ ಸಲ್ಲಿಕೆಯಾಗಿದೆ. ಇದರಿಂದ ಕಳಪೆ ಕಾಮಗಾರಿಯನ್ನು ತಡೆಗಟ್ಟಲು ಸಾಧ್ಯವಿದೆ' ಎಂದು ಅವರು ಹೇಳಿದರು.



ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯ ಪ್ರಾದೇಶಿಕ ಕಚೇರಿಯಲ್ಲಿ ಶನಿವಾರ ನಡೆದ ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಎಚ್.ಶ್ರೀನಿವಾಸಯ್ಯ, ಉಮಾರೆಡ್ಡಿ, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಆರ್.ವೇಣುಗೋಪಾಲ್ ಮತ್ತು ಎಸ್.ಎ.ಚಾರಿ ಅವರನ್ನು ಸನ್ಮಾನಿಸಲಾಯಿತು. ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯ ಕೌನ್ಸಿಲ್ ಸದಸ್ಯರಾದ ಡಾ.ವೂಡೆ ಪಿ. ಕೃಷ್ಣ, ಡಾ.ಕೆ.ಗೋಪಾಲಕೃಷ್ಣನ್, ಆರ್ಥಿಕ ತಜ್ಞ ಪ್ರೊ.ಲಾರೆನ್ಸ್ ಸುಧೀಂದ್ರ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಮತ್ತು ಸಂಸ್ಥೆಯ ಕಾರ್ಯದರ್ಶಿ ಜಿ.ಶ್ರೀಕಾಂತ್ ಚಿತ್ರದಲ್ಲಿದ್ದಾರೆ – ಪ್ರಜಾವಾಣಿ ಚಿತ್ರ

ಕರ್ನಾಟಕ ಎಂಜಿನಿಯರ್‌ಗಳ ಒಕ್ಕೂಟದ ಅಧ್ಯಕ್ಷ ಎಂ.ನಾಗರಾಜ್ ಮಾತನಾಡಿ, 'ಎಂಜಿನಿಯರ್‌ಗಳ ವೇತನ ಹೆಚ್ಚಳದ ಬಗ್ಗೆ ಸರ್ಕಾರ ಗಂಭೀರವಾಗಿ ಆಲೋಚಿಸಬೇಕು. ಸರ್.ಎ.ವಿ ಅವರ ಹುಟ್ಟು ಜಿಲ್ಲೆಯಾದ ಚಿಕ್ಕಬಳ್ಳಾಪುರವನ್ನು 'ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲೆ' ಎಂದು ನಾಮಕರಣ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

ಸಮಾರಂಭದಲ್ಲಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯದರ್ಶಿ ಸದಾಶಿವರೆಡ್ಡಿ ಬಿ. ಪಾಟೀಲ್ ಮತ್ತು ಮಂಗಳೂರು ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಸ್.ವಿಜಯನಾರಸಿಂಹ ಅವರನ್ನು ಸನ್ಮಾನಿಸಲಾಯಿತು.

ನಗರದ ಡಾ.ಅಂಬೇಡ್ಕರ್ ಬೀದಿ ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯ ಪ್ರಾದೇಶಿಕ ಕಚೇರಿಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್, ಆರ್ಥಿಕ ತಜ್ಞ ಪ್ರೊ.ಲಾರೆನ್ಸ್ ಸುಧೀಂದ್ರ, ಸಂಸ್ಥೆಯ ಕೌನ್ಸಿಲ್ ಸದಸ್ಯ ಡಾ.ವೂಡೆ ಪಿ. ಕೃಷ್ಣ ಪಾಲ್ಗೊಂಡಿದ್ದರು.

ಎಂಜಿನಿಯರಿಂಗ್ ಕ್ಷೇತ್ರಕ್ಕೆ ಸೇವೆ ಸಲ್ಲಿಸಿದ ಎಚ್.ಶ್ರೀನಿವಾಸಯ್ಯ, ಉಮಾರೆಡ್ಡಿ, ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಪ್ರೊ.ಕೆ.ಆರ್.ವೇಣುಗೋಪಾಲ್ ಮತ್ತು ಎಸ್.ಎ.ಚಾರಿ ಅವರನ್ನು ಸನ್ಮಾನಿಸಲಾಯಿತು.

ಹೋಲಿಕೆ ಬಿಟ್ಟುಬಿಡಿ, ಸಕಾರಾತ್ಮಕ ಭಾವನೆ ಬೆಳೆಸಿಕೊಳ್ಳಿ

■ ಮನೋ ನಿಗ್ರಹಕ್ಕೆ ಕ್ರೀಡೆ ಸಹಕಾರಿ ■ ಮದ್ಯಪಾನ ಸಂಯಮ ಮಂಡಳಿ ಕಾರ್ಯಕ್ರಮದಲ್ಲಿ ಡಾ. ಶ್ರೀಧರ್ ಕಿವಿಮಾತು


ಬೆಂಗಳೂರು: ಯುವಜನಾಂಗ ಸಕಾರಾತ್ಮಕ ಭಾವನೆ ಬೆಳೆಸಿಕೊಂಡು ಭವಿಷ್ಯದಲ್ಲಿ ಉತ್ತಮ ರೀತಿಯಲ್ಲಿ ಬದುಕಬೇಕು ಎಂದು ಖ್ಯಾತ ಮನಃಶಾಸ್ತ್ರಜ್ಞ ಡಾ. ಅ. ಶ್ರೀಧರ ಹೇಳಿದ್ದಾರೆ.

ಶೇಷಾದ್ರಿಪುರಂ ಕಾಲೇಜಿನಲ್ಲಿ ಮಂಗಳವಾರ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಹಾಗೂ ಯೂತ್ ರೆಡ್‌ಕ್ರಾಸ್ ಸಂಸ್ಥೆ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ನಾಗರಿಕ ಸಮಾಜದ ಒಂದು ಭಾಗವೇ ಆಗಿರುವ ನಮ್ಮಲ್ಲಿ ಹಲವು ಗೊಂದಲಗಳು ಸೃಷ್ಟಿಯಾಗಿವೆ. ಇದರಿಂದ ಯುವ ಜನಾಂಗಕ್ಕೆ ಆಘಾತವಾಗುತ್ತದೆ. ಸಮಸ್ಯೆಗಳು, ಒತ್ತಡಗಳಲ್ಲಿ ಸಿಲುಕಿದ ವಿದ್ಯಾರ್ಥಿಗಳು ಅಂಕ ಗಳಿಕೆಯಲ್ಲಿ ಹಿಂದೆ ಬೀಳುತ್ತಾರೆ. ಕೆಲವರಿಗೆ ಮಾನಸಿಕ ಸಾಮರ್ಥ್ಯ ಹೆಚ್ಚೇ ಇದ್ದರೂ ಇದನ್ನು ಮಾಡು, ಅದನ್ನು ಮಾಡು ಎಂದು 'ಆದೇಶ ರೀತಿ' ಹೇಳಿದರೆ ಮಾಡುವುದಿಲ್ಲ. ಸಂವೇದನೆಗಳನ್ನು ಗ್ರಹಿಸದೇ ಇರುವ ಸಾಧ್ಯತೆ ಇದೆ. ತಿಳಿವಳಿಕೆ ಹೇಳಿದರೆ ಗ್ರಹಿಸುವ ಸ್ಥಿತಿಯಲ್ಲಿರುವುದಿಲ್ಲ ಎಂದು ವಿಶ್ಲೇಷಿಸಿದರು.


ಸಹವಾಸ ದೋಷ, ದುಶ್ಚಟಗಳು ಮುಂತಾದವುಗಳ ಕಾರಣವಾಗಿ ಚಟುವಟಿಕೆಗಳಿಂದ ಹಿಂದೆ ಸರಿಯಬಹುದು. ಪರೀಕ್ಷೆಯಲ್ಲಿ ಅಂಕ ಗಳಿಸದೇ ಇರುವುದಕ್ಕೆ ವಿದ್ಯಾರ್ಥಿಯಷ್ಟೇ ಕಾರಣನಲ್ಲ. ಅವನ ಗ್ರಹಿಕೆಯ ಸಾಮರ್ಥ್ಯವೂ ಕಾರಣವಾಗಿರುತ್ತದೆ. ಸರಿಯಾಗಿ ಗ್ರಹಿಸಲು ಆತ್ಮಚರಿತ್ರೆಗಳ ಅವಲೋಕನಗಳು ಸಮರ್ಥವಾಗುತ್ತವೆ. ಉದಾಹರಣೆಗೆ ಶಿವರಾಮ ಕಾರಂತ, ಎಸ್. ಎಲ್. ಭೈರಪ್ಪ ಮೊದಲಾದವರ ಆತ್ಮಚರಿತ್ರೆಯನ್ನು ಓದುವುದರಿಂದ ಸ್ಮರಣಶಕ್ತಿಗೆ ಹೊಸ ಆಯಾಮ ದಕ್ಕಿದಂತಾಗುತ್ತದೆ. ಆರಾಧನೆ ಭಾವನೆಯಿಂದ ಗ್ರಹಿಸುವುದಕ್ಕಿಂತ ವಾಸ್ತವ ಗ್ರಹಿಕೆಯಲ್ಲಿ ಸ್ವೀಕರಿಸಬೇಕು. ಆತ್ಮವಿಶ್ವಾಸ ರೂಢಿಸಿಕೊಂಡು ಸಕಾರಾತ್ಮಕ ಭಾವನೆ ಪಡೆಯಲು ಇನ್ನೊಬ್ಬರೊಂದಿಗೆ ಹೋಲಿಕೆ ಬಿಟ್ಟುಬಿಡಬೇಕು. ಒಳ ಅರಿವಿಗೆ ಅವಕಾಶ ಮಾಡಿಕೊಡಬೇಕು. ಇರುವ ಶಕ್ತಿಯನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಬೇಕು. ನಿಜವಾದ ಕಲಿಕೆ ವರ್ತನೆಗಳನ್ನು ಮಾರ್ಪಾಡು ಮಾಡುತ್ತದೆ ಎಂದು ಹೇಳಿದರು.

ಹಿರಿಯ ಪತ್ರಕರ್ತ ಗೋಪಾಲ ಹೆಗಡೆ ಮಾತನಾಡಿ, ಆರೋಗ್ಯಕರ ಮನಸ್ಸು ದೇಹಕ್ಕೆ ಒಳ್ಳೆಯ ವಿಚಾರ ಗ್ರಹಿಸಲು ಸಹಾಯ ಮಾಡುತ್ತದೆ. ಕ್ರೀಡೆ, ದೇಹಬಲದ ಜತೆ ಆತ್ಮಬಲವನ್ನು ಹೆಚ್ಚಿಸಬಲ್ಲದು ಎಂದು ಹೇಳಿದರು.



ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಕಾರ್ಯದರ್ಶಿ ದಿನೇಶ್, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಉಪಸ್ಥಿತರಿದ್ದರು.

ಬುಧವಾರ, 12 ಸೆಪ್ಟೆಂಬರ್ 2012 | ಕನ್ನಡಪ್ರಭ



ಯುವ ಸಂಕಲ್ಪ...

ಯೂತ್ ರೆಡ್‌ಕ್ರಾಸ್ ಸಂಸ್ಥೆ ಹಾಗೂ ಮದ್ಯಪಾನ ಸಂಯಮ ಮಂಡಳಿ ನಗರದ ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಗೋಪಾಲ ಹೆಗಡೆ, ಡಾ.ಆ. ಶ್ರೀಧರ್, ಡಾ.ಬಿ.ಆರ್.ಮಮತಾ, ಡಾ. ವೂಡೇ ಪಿ. ಕೃಷ್ಣ, ದಿನೇಶ್ ಹಾಜರಿದ್ದರು.





ಮದ್ಯಪಾನ ಸಂಯಮ ಮಂಡಳಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ವತಿಯಿಂದ ಯುವಕರಲ್ಲಿ ನೈತಿಕತೆ ಮತ್ತು ಸಾಮಾಜಿಕ ಮೌಲ್ಯ 'ಯುವ ಸಂಕಲ್ಪ' ಚಿಂತನಾ ಶಿಬಿರದಲ್ಲಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗ್ಡೆ, ಮನೋ ವಿಜ್ಞಾನಿ ಡಾ.ಶ್ರೀಧರ್, ವಾರ್ತಾ ಇಲಾಖೆಯ ಜಂಟಿ ನಿರ್ದೇಶಕಿ ಡಾ.ಬಿ.ಆರ್.ಮಮತಾ , ಶೇಷಾದ್ರಿಪುರಂ ಕಾಲೇಜಿನ ಪ್ರಧಾನ ಕಾರ್ಯದರ್ಶಿ ವೂಡೆ.ಪಿ.ಕೃಷ್ಣ, ಮಂಡಳಿ ಕಾರ್ಯದರ್ಶಿ ಎಚ್.ಪಿ.ದಿನೇಶ್, ಪತ್ರಕರ್ತ ಗೋಪಾಲ ಹೆಗಡೆ ಮತ್ತಿತರರು ವೇದಿಕೆಯಲ್ಲಿದ್ದರು. ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.




ಬಿಡುಗಡೆ...

ಬ್ರಹ್ಮಸಮಾಜ ಮತ್ತು ವೂಡೇ ಪ್ರತಿಷ್ಠಾನ ಏರ್ಪಡಿಸಿದ್ದ ಬ್ರಹ್ಮಧರ್ಮ ಕೃತಿ ಬಿಡುಗಡೆ ಸಮಾರಂಭದಲ್ಲಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಎಂ. ನಾರಾಯಣ ದಾಸ್, ಪ್ರೊ.ಡಿ. ಪ್ರಹ್ಲಾದಾಚಾರ್, ಡಾ. ಅಶೋಕ ಗುರುದಾಸ್, ಡಾ. ವಿನಯ್, ಡಬ್ಲ್ಯು.ಪಿ. ಶಿವಕುಮಾರ್, ಡಾ. ವೂಡೆ ಪಿ. ಕೃಷ್ಣ ಉಪಸ್ಥಿತರಿದ್ದರು.

ಈ ಸಂಜೆ

ಸೋಮವಾರ, 10 ಸೆಪ್ಟೆಂಬರ್, 2012



ಬೆಂಗಳೂರು ಬ್ರಹ್ಮಸಮಾಜ ಮತ್ತು ವೂಡೇ ಪ್ರತಿಷ್ಠಾನ ಏರ್ಪಡಿಸಿದ್ದ ಬ್ರಹ್ಮಧರ್ಮ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್ ಕೃತಿ ಬಿಡುಗಡೆ ಮಾಡಿದರು. ಸಮಾಜದ ಮುಖಂಡ ಎಂ.ನಾರಾಯಣ ದಾಸ್, ವಿದ್ವಾಂಸ ಪ್ರೊ.ಡಿ.ಪ್ರಹ್ಲಾದಾಚಾರ್, ಡಾ.ಅಶೋಕ ಗುರುದಾಸ್, ಡಾ.ವಿನಯ್ ಪಿ, ಡಬ್ಲ್ಯೂ.ಪಿ.ಶಿವಕುಮಾರ್, ಶಿಕ್ಷಣ ತಜ್ಞ ಡಾ.ವೂಡೇ.ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಆಂಧ್ರಪ್ರದೇಶದ ಅಗ್ರಹಾರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುಂಡಲೀಕ ಹಾಲಂಬಿ ಒತ್ತಾಯ 10/09/2012

ಗಡಿಪ್ರದೇಶದ ವಿದ್ಯಾರ್ಥಿಗಳಿಗೆ ಮೀಸಲಾತಿ

ಪ್ರಜಾವಾಣಿ ವಾರ್ತೆ

ಧರ್ಮಪುರ: ಹೊರನಾಡ ಕನ್ನಡಿಗರ ಹಿತಾಸಕ್ತಿ ಕಾಪಾಡಬೇಕಾದ್ದು ಕನ್ನಡ ಸಾಹಿತ್ಯ ಪರಿಷತ್ತಿನ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ ಏಕತೆ ಪ್ರದರ್ಶಿಸಬೇಕು ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಂಡಲೀಕ ಹಾಲಂಬಿ ಆಶಿಸಿದರು.

ಸಮೀಪದ ಆಂಧ್ರಪ್ರದೇಶದ ಅಗ್ರಹಾರ ಗ್ರಾಮದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಆಂಧ್ರಪ್ರದೇಶ ಕನ್ನಡ ಸಾಹಿತ್ಯ ಘಟಕದ ಕಾರ್ಯ ಚಟುವಟಿಕೆಗಳ ಉದ್ಘಾಟನೆ ಮತ್ತು ಆಜೀವ ಸದಸ್ಯರ ಸಮಾವೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಏಕೀಕರಣ ಸಮಯದಲ್ಲಿ ತಾಂತ್ರಿಕವಾಗಿ ಗಡಿ ಕನ್ನಡಿಗರು ಬೇರೆಯಾಗಿಯೇ ಉಳಿದಿದ್ದಾರೆ ಹೊರತು ನಮ್ಮಿಂದ ಭಾವನಾತ್ಮಕವಾಗಿ ದೂರ ಉಳಿದಿಲ್ಲ. ನೆರೆಯ ಮಹಾರಾಷ್ಟ್ರದಲ್ಲಿ ಗಡಿ ಕನ್ನಡಿಗರಿಗೆ ಶೈಕ್ಷಣಿಕವಾಗಿ ಮೀಸಲಾತಿ ಕಲ್ಪಿಸಿಕೊಟ್ಟಿರುವಂತೆ ನಮ್ಮಲ್ಲೂ ಆ ಕೆಲಸ ಸರ್ಕಾರ ಮಾಡಬೇಕು. ಆಂಧ್ರ ಸರ್ಕಾರ ಗಡಿ ಕನ್ನಡಿಗರ ಸಮಸ್ಯೆ ಆಲಿಸಿ, ಪರಿಹಾರ ಕಲ್ಪಿಸಬೇಕು. ಗಡಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ಸಾಕಷ್ಟು ಅನುದಾನವಿದೆ. ಆದರೆ, ಅದು ಸದ್ಬಳಕೆಯಾಗುತ್ತಿಲ್ಲ. ಕಾನೂನು ಬದ್ಧವಾಗಿ ಗಡಿನಾಡ ಕನ್ನಡಿಗರಿಗೆ ಮೀಸಲಾತಿ ದೊರೆಯಬೇಕು ಎಂದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ನಲ್ಲೂರು ಪ್ರಸಾದ್ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್‌ಗೆ ಸರ್ಕಾರ ಸಾಕಷ್ಟು ಅನುದಾನ ನೀಡುತ್ತಿದೆ. ಗಡಿನಾಡ ಕನ್ನಡಿಗರ ಸಮಸ್ಯೆಗಳನ್ನು ಸರ್ಕಾರದೊಂದಿಗೆ ಚರ್ಚಿಸಿ, ಶಾಶ್ವತ ಪರಿಹಾರ ಕಲ್ಪಿಸಲಾಗುವುದು. ಅದಕ್ಕಾಗಿ ತಾಲ್ಲೂಕು ಘಟಕಕ್ಕೆ ₹ ಒಂದು ಲಕ್ಷ, ಜಿಲ್ಲಾ ಘಟಕಕ್ಕೆ ₹ 2 ಲಕ್ಷ, ಗಡಿನಾಡ ಘಟಕಗಳಿಗೆ ₹ 5 ಲಕ್ಷ ಅನುದಾನ ನೀಡಲಾಗುವುದು ಎಂದರು.

ಆಂಧ್ರಪ್ರದೇಶದ ಕಸಾಪ ಅಧ್ಯಕ್ಷ ಪ್ರೊ.ವಿ. ಅಗ್ರಹಾರಂ ಶಿವಕುಮಾರ್ ಮಾತನಾಡಿ, ಅನಿವಾರ್ಯ ಕಾರಣಗಳಿಂದ ಭಾಷಾವಾರು ಪ್ರಾಂತ್ಯಗಳ ರಚನೆಯ ಹಿನ್ನೆಲೆಯಲ್ಲಿ ಆಂಧ್ರ ಕನ್ನಡಿಗರು ಪ್ರತ್ಯೇಕಗೊಂಡು ಅನಿಶ್ಚಿತತೆಯಲ್ಲಿ ಇದ್ದೇವೆ. ಅಗ್ರಹಾರ ಕುಗ್ರಾಮದಲ್ಲಿ ಸುಮಾರು 100ಕ್ಕೂ ಹೆಚ್ಚು ಕನ್ನಡಿಗರು ಕರ್ನಾಟಕ ಸರ್ಕಾರದ ಸೇವೆಯಲ್ಲಿದ್ದೇವೆ. ಆದಾಯ ಮತ್ತು ಜಾತಿ ಪ್ರಮಾಣಪತ್ರ ಪಡೆಯುವಲ್ಲಿ ಆಗುತ್ತಿರುವ ಸಮಸ್ಯೆ ಬಗೆಹರಿಸಲು ಸರ್ಕಾರ ಅನುಕೂಲ ಕಲ್ಪಿಸಬೇಕು. ಎಂಜಿನಿಯರಿಂಗ್ ಮತ್ತು ವೈದ್ಯ ಶಿಕ್ಷಣದಲ್ಲಿ ಗಡಿ ಕನ್ನಡಿಗರಿಗೆ ಮೀಸಲಾತಿ ಕಲ್ಪಿಸಬೇಕು. ಗಡಿ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ನೇಮಕಾತಿಯಾಗಬೇಕು. ತೆಲುಗು ಸಾಹಿತ್ಯದ ಅನುವಾದ ಕನ್ನಡಕ್ಕೆ, ಕನ್ನಡದ ಅನುವಾದ ತೆಲುಗು ಸಾಹಿತ್ಯಕ್ಕೆ ಆಗಬೇಕು ಎಂದರು.

ಜಾನಪದ ಸಂಶೋಧಕ ಡಾ.ಕೆ.ವಿ. ಮುದ್ದವೀರಪ್ಪ, ಡಾ.ಮೀರಸಾಬಿಹಳ್ಳಿ ಶಿವಣ್ಣ, ಲೇಖಕ ಡಾ.ಕೆ.ನಾಗಭೂಷಣ, ಆಂಧ್ರ ಗಡಿನಾಡ ಘಟಕದ ನಿಕಟಪೂರ್ವ ಅಧ್ಯಕ್ಷ ರಾಮಚಂದ್ರಪ್ಪ ಮಾತನಾಡಿದರು.

ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಉದ್ಘಾಟಿಸಿದರು. ಪ್ರೊ.ಎಚ್.ಬಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಡಾ.ಹನುಮಂತರಾಯ, ವಕೀಲ ಜಗನ್ನಾಥ್, ಪ್ರೊ.ಪಿ. ಹನುಮಂತರಾಯ, ಎಂಜಿನಿಯರ್ ನಾಗರಾಜ, ದೇವರಾಜ, ಜಯದೇವಮೂರ್ತಿ, ಜಯಶಂಕರ್, ತ್ರಿವೇಣಿ ಹಾಜರಿದ್ದರು.




ಧರ್ಮಪುರ ಸಮೀಪದ ಅಗ್ರಹಾರ ಗ್ರಾಮದಲ್ಲಿ ಭಾನುವಾರ ನಡೆದ ಆಂಧ್ರಪ್ರದೇಶ ಕನ್ನಡ ಸಾಹಿತ್ಯ ಘಟಕದ ಕಾರ್ಯ ಚಟುವಟಿಕೆಗಳ ಉದ್ಘಾಟನಾ ಮತ್ತು ಆಜೀವ ಸದಸ್ಯರ ಸಮಾವೇಶದಲ್ಲಿ ಪುಂಡಲೀಕ ಹಾಲಂಬಿ ಮಾತನಾಡಿದರು.

ಸಂಯುಕ್ತ ಕರ್ನಾಟಕ । ಬೆಂಗಳೂರು ಸೆಪ್ಟೆಂಬರ್ 9 । 2012

ಸಾಂಸ್ಕೃತಿಕ ಲೋಕಕ್ಕೆ ಬಂಗಾಳದ ಕೊಡುಗೆ ಅಪಾರ

ಬೆಂಗಳೂರು, ಸೆ. 8: ದೇಶದ ಸಾಂಸ್ಕೃತಿಕ ಲೋಕಕ್ಕೆ ಬಂಗಾಳ ಸಾಕಷ್ಟು ಕೊಡುಗೆ ನೀಡಿದೆ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್ ತಿಳಿಸಿದ್ದಾರೆ.

ವೂಡೆ ಪ್ರತಿಷ್ಠಾನ ಮತ್ತು ಬೆಂಗಳೂರು ಬ್ರಹ್ಮಸಮಾಜದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬ್ರಹ್ಮಧರ್ಮ ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಭಾರತದಲ್ಲಿ ಸಮಾಜಕ್ಕೆ ಬಂಗಾಳ ಅನೇಕ ಕೊಡುಗೆ ನೀಡಿದೆ. ದೇಶದ ಕೀರ್ತಿಯನ್ನು ವಿಶ್ವಮಟ್ಟದಲ್ಲಿ ಪ್ರಚಾರ ಮಾಡಿದವರು ರವೀಂದ್ರನಾಥ್ ಠಾಗೂರ್ ಎಂದು ಬಣ್ಣಿಸಿದರು. ಕರ್ನಾಟಕ ಮತ್ತು ಬಂಗಾಳದ ನಡುವೆ ಗಾಢವಾದ ಸಾಂಸ್ಕೃತಿಕ ಸಂಬಂಧವಿದೆ. ಬಂಗಾಳದ ಕೃತಿಗಳು ಕನ್ನಡಕ್ಕೆ ಮೊದಲು ಅನುವಾದಗೊಂಡವು. ಭಾರತದಲ್ಲಿ ನವನಿರ್ಮಾಣ ಕ್ರಾಂತಿ ಮಾಡಿದ ರಾಜಾರಾಂ ಮೋಹನ್ ರಾಯ್ ಬ್ರಹ್ಮಧರ್ಮ ಕೃತಿಯನ್ನು ಮೊದಲ ಬಾರಿಗೆ ಬೇರೆ ಭಾಷೆಗಳಿಗೆ ಪರಿಚಯ ಮಾಡಿದರು ಎಂದರು.



[illegible]ಳೂರು ಬ್ರ[illegible] ಸಮಾಜ ಹಾಗೂ ವೂಡೇ ಪ್ರತಿಷ್ಠಾನ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬ್ರಹ್ಮ[illegible] ಕೃ[illegible]ಯನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಎಂ. ನಾರಾಯಣದಾಸ್, ಪ್ರೊ. ಡಿ. ಪ್ರಹ್ಲಾದಾಚಾರ್, ಡಾ. ಅಶೋಕ್ ಗುರುದಾಸ್, ಡಾ. ವಿನಯ್, ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.


ಜಾತಿಮತ ಪಂಗಡಗಳ ಭೇದವಿಲ್ಲದೆ ಏಕದೇವ ಉಪಾಸನೆ ಮಾಡುವುದು ಬ್ರಹ್ಮತತ್ವದ ಮೂಲ. ಆದರೆ, ಪ್ರಸ್ತುತ ಹಣ ಸಂಪತ್ತು ನಮ್ಮನ್ನು ಆವರಿಸಿದೆ. ಇಂತಹ ಸಂದರ್ಭದಲ್ಲಿ ಮಾನವ ಭ್ರಾತೃತ್ವಕ್ಕೆ ಬ್ರಹ್ಮಧರ್ಮ ಕೃತಿ ಸಹಾಯಕವಾಗಲಿದೆ ಎಂದು ಹೇಳಿದರು.

ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ವಿಶ್ರಾಂತ ಕುಲಪತಿ ಬಿ. ಪ್ರಹ್ಲಾದಚಾರ್ ಮಾತನಾಡಿ, ಬಂಗಾಳದ ಅನುವಾದಿತ ಕೃತಿಗಳು ಅಂದು ಕನ್ನಡಕ್ಕೆ ಅನುವಾದಗೊಂಡವು. ಇವುಗಳನ್ನು ಓದಲು ಎಲ್ಲರೂ ಹಾತೊರೆಯುತ್ತಿದ್ದರು. ಆದರೆ, ಇಂದಿನ ಯುವಜನತೆಗೆ ಪುಸ್ತಕಗಳ ಪರಿಚಯವೇ ಅಷ್ಟಾಗಿ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಮತ್ತು ಬಂಗಾಳದ ನಡುವೆ ರಾಜಕೀಯ ಸಂಬಂಧ ಇದೆ. ಆದರೆ, ಸಾಂಸ್ಕೃತಿಕ ಸಂಬಂಧ ಪ್ರಭಾವಶಾಲಿಯಾಗಿದೆ. ಇಂತಹ ಸಾಂಸ್ಕೃತಿಕ ಸಂಬಂಧಗಳಿಂದಾಗಿ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯವಾಗಿದೆ ಎಂದರು.


ಕೃತಿ ಸಂಪಾದಕ ಡಾ. ವಿನಯ, ಬ್ರಹ್ಮ ಸಮಾಜದ ಮುಖಂಡ ಎಂ. ನಾರಾಯಣ ದಾಸ್, ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಅಶೋಕ್ ಗುರುದಾಸ್, ವೂಡೇ ಪ್ರತಿಷ್ಠಾನದ ವೂಡೆ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಸಂಜೆವಾಣಿ
ಶುಕ್ರವಾರ 7 ಸೆಪ್ಟೆಂಬರ್ 2012



ಇತ್ತೀಚೆಗೆ ನಗರದಲ್ಲಿ ಬ್ರಹ್ಮಸಮಾಜ ಮತ್ತು ವೂಡೇ ಪ್ರತಿಷ್ಠಾನ ಏರ್ಪಡಿಸಿದ್ದ ಬ್ರಹ್ಮಧರ್ಮ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿವಿಯ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಕೃತಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಬ್ರಹ್ಮಸಮಾಜದ ಹಿರಿಯ ಮುಖಂಡ ಎಂ. ನಾರಾಯಣದಾಸ್, ವಿದ್ವಾಂಸ ಪ್ರೊ.ಡಿ. ಪ್ರಹ್ಲಾದಾಚಾರ್, ಡಾ. ಅಶೋಕ್ ಗುರುದಾಸ್, ಡಾ. ವೂಡೇ ಕೃಷ್ಣ ಮುಂತಾದವರಿದ್ದರು.

ಉದಯವಾಣಿ | ಗುರುವಾರ | ಸೆಪ್ಟೆಂಬರ್ | 6 | 2012



ಕೃತಿ ಬಿಡುಗಡೆ

ಬ್ರಹ್ಮ ಸಮಾಜ ಮತ್ತು ವೂಡೇ ಪ್ರತಿಷ್ಠಾನ ನಗರದಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಬ್ರಹ್ಮ ಧರ್ಮ' ಕೃತಿ ಬಿಡುಗಡೆ ಮಾಡಲಾಯಿತು.

'ಸಂಪತ್ತಿನ ಮುಂದೆ ಭ್ರಾತೃತ್ವ ಕಣ್ಮರೆ'

ಬೆಂಗಳೂರು: ಹಣ ಮತ್ತು ಸಂಪತ್ತು ನಮ್ಮನ್ನು ಆವರಿಸಿಕೊಳ್ಳುತ್ತಿದ್ದು, ಭ್ರಾತೃತ್ವ ಭಾವನೆ ಮರೆಯಾಗಿದೆ ಎಂದು ಸಂಸ್ಕೃತ ವಿವಿ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ ವಿಷಾದಿಸಿದ್ದಾರೆ.

ಬೆಂಗಳೂರು ಬ್ರಹ್ಮ ಸಮಾಜ ಮತ್ತು ವೂಡೇ ಪ್ರತಿಷ್ಠಾನ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಬ್ರಹ್ಮ ಧರ್ಮ' ಕೃತಿ ಬಿಡುಗಡೆ ಮಾಡಿದ ಅವರು, ಎಲ್ಲಾ ಕಾಲಕ್ಕೂ ಸಲ್ಲಬೇಕಾದ ಭ್ರಾತೃತ್ವ ಇಂದು ಮರೆಯಾಗುತ್ತಿರುವ ಇಂತಹ ಸಂದರ್ಭದಲ್ಲಿ ಈ ಕೃತಿ ಆದರ ಸಂದೇಶ ಸಾರಲು ಪೂರಕವಾಗಿದೆ ಎಂದು ಅಭಿಪ್ರಾಯಪಟ್ಟರು.

ಬ್ರಹ್ಮ ಸಮಾಜ ಪಶ್ಚಿಮಬಂಗಾಳದಲ್ಲಿ ದೊಡ್ಡ ಕ್ರಾಂತಿ ಉಂಟುಮಾಡಿದ್ದು ಸಂಸ್ಕೃತಿಗೆ ವಿಶೇಷ ಮೆರಗು ತಂದುಕೊಟ್ಟ ಕೃತಿ ಇದಾಗಿದೆ. 1961ರಲ್ಲಿ ಬ್ರಹ್ಮ ಧರ್ಮ ಕೃತಿ ಬಂಗಾಳಿಯಲ್ಲಿ ರಚಿಸಿದ್ದ ಈ ಕೃತಿ 10 ಸಲ ಮರುಮುದ್ರಣವಾಗಿದೆ ಎಂದರು.

ಬ್ರಹ್ಮ ಸಮಾಜದ ಮುಖಂಡ ಎಂ. ನಾರಾಯಣ ದಾಸ್, ಪ್ರೊ. ಡಿ. ಪ್ರಹ್ಲಾದ್ ರಾವ್ ಅವರನ್ನು ಸನ್ಮಾನಿಸಲಾಯಿತು. ಡಾ. ಅಶೋಕ್ ಗುರುದಾಸ್, ಕೃತಿಯ ಸಂಪಾದಕ ಡಾ. ಪಿ. ವಿನಯ್ ಇತರರು ಹಾಜರಿದ್ದರು.

THE HINDU

WEDNESDAY, SEPTEMBER 5, 2012

Bangalore Brahma Samaja and Wooday Foundation: Release of 'Brahmadharma' by Vice-Chancellor of Karnataka Sanskrit University Mallepuram G. Venkatesh, Indian Institute of World Culture, B.P. Wadia Road, Basavanagudi, 6 p.m.

ಉದಯವಾಣಿ

ಬುಧವಾರ | ಸೆಪ್ಟೆಂಬರ್ | 5 | 2012

■ ಬೆಂಗಳೂರು ಬ್ರಹ್ಮಸಮಾಜ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ. ಬ್ರಹ್ಮಧರ್ಮ ಕೃತಿ ಲೋಕಾರ್ಪಣೆ: [illegible] ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್. ಸಾನ್ನಿಧ್ಯ: ಎಂ. ನಾರಾಯಣದಾಸ್, ಪ್ರೊ. ಡಿ. ಪ್ರಹ್ಲಾದಾಚಾರ್, ಡಾ. ವಿನಯ್. ಅಧ್ಯಕ್ಷತೆ: ಅಶೋಕ ಗುರುದಾಸ್. ಸಂಜೆ 5.[illegible]

ಪ್ರಜಾವಾಣಿ

ಬುಧವಾರ ಸೆಪ್ಟೆಂಬರ್ 5, 2012

ಬೆಂಗಳೂರು ಬ್ರಹ್ಮ ಸಮಾಜ ಮತ್ತು ವೂಡೇ ಪ್ರತಿಷ್ಠಾನ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ. 'ಬ್ರಹ್ಮ ಧರ್ಮ' ಕೃತಿ ಲೋಕಾರ್ಪಣೆ ಸಮಾರಂಭ. ಅಧ್ಯಕ್ಷತೆ: ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ್ ಗುರುದಾಸ್. ಕೃತಿ ಲೋಕಾರ್ಪಣೆ: ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಮಲ್ಲೇಪುರಂ ಜಿ.ವೆಂಕಟೇಶ್. ಸಾನ್ನಿಧ್ಯ: ಬ್ರಹ್ಮ ಸಮಾಜದ ಹಿರಿಯ ಮುಖಂಡ ಎಂ.ನಾರಾಯಣ ದಾಸ್, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ವಿಶ್ರಾಂತ ಕುಲಪತಿ ಪ್ರೊ. ಡಿ. ಪ್ರಹ್ಲಾದಾಚಾರ್, ಕೃತಿಯ ಸಂಪಾದಕ ಡಾ. ವಿನಯ್ ಪಿ. ಸಂಜೆ 6.

DECCAN HERALD

Wednesday, September 5, 2012

Bangalore Brahmasamaja & Wooday Pratistana: Release of P Vinay's Book 'Brahmadharma' by Mallepuram G Venkatesh, Vice-chancellor, Karnataka Sanskrit University, Ashok Gurudas, M Narayana Das, prof D Prahaldachar, Wooday P Krishna, H Deva Kumar, P Shivakumar participate. The Indian Institute of World Culture, Wadia Hall, BP Wadia Road, Basavanagudi, near Krishnarao Park, 6 pm.

ಬುಧವಾರ, 5 ಸೆಪ್ಟೆಂಬರ್ 2012 | ಕನ್ನಡಪ್ರಭ

ಬೆಂಗಳೂರು ಬ್ರಹ್ಮ ಸಮಾಜ: ಬ್ರಹ್ಮಧರ್ಮ ಕೃತಿ ಲೋಕಾರ್ಪಣೆ. ಅತಿಥಿ- ಡಾ. ಮಲ್ಲೇಪುರಂ ಜಿ.ವೆಂಕಟೇಶ್. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯ ರಸ್ತೆ, ಬಸವನಗುಡಿ, ಸಂಜೆ 5.30.

ಸಂಯುಕ್ತ ಕರ್ನಾಟಕ | ಸೆಪ್ಟಂಬರ್ | 05 | 2012

ಬ್ರಹ್ಮಧರ್ಮ

ಕೃತಿ ಬಿಡುಗಡೆ ಸಮಾರಂಭ: ಬಿಡುಗಡೆ: ಸಂಸ್ಕೃತ ವಿವಿ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್. ಅಧ್ಯಕ್ಷತೆ: ಡಾ. ಅಶೋಕ ಗುರುದಾಸ್. ಸಾನ್ನಿಧ್ಯ: ಎಂ. ನಾರಾಯಣದಾಸ್, ಪ್ರೊ. ಡಿ. ಪ್ರಹ್ಲಾದಾಚಾರ್, ಡಾ. ವಿನಯ್ ಪಿ. ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ. 6.00

ವಿಜಯ ಕರ್ನಾಟಕ

ಬುಧವಾರ, 5 ಸೆಪ್ಟೆಂಬರ್ 2012, ಬೆಂಗಳೂರು

ಬೆಂಗಳೂರು ಬ್ರಹ್ಮಸಮಾಜ: ಬ್ರಹ್ಮಧರ್ಮ ಕೃತಿ ಲೋಕಾರ್ಪಣೆ: ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಮಲ್ಲೇಪುರಂ ಜಿ. ವೆಂಕಟೇಶ್. ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ. 6.00

ಪ್ರಜಾವಾಣಿ ಶನಿವಾರ 1ನೇ ಸೆಪ್ಟೆಂಬರ್ 2012

'ವಿದ್ಯಾರ್ಥಿಗಳು ಕೌಶಲ್ಯ ಬೆಳೆಸಿಕೊಳ್ಳಬೇಕು'

ಯಲಹಂಕ: ವಿದ್ಯಾರ್ಥಿಗಳು ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡಿ ಪದವಿಗಳನ್ನು ಪಡೆಯುವುದರ ಜೊತೆಗೆ ಇತರ ಕೌಶಲ್ಯಗಳನ್ನು ಬೆಳೆಸಿಕೊಂಡರೆ ಜೀವನದಲ್ಲಿ ಯಶಸ್ಸನ್ನು ಸಾಧಿಸಬಹುದು ಎಂದು ಗಾಂಧೀವಾದಿ ಚನ್ನಮ್ಮ ಹಳ್ಳಿಕೇರಿ ಹೇಳಿದರು.

ಇಲ್ಲಿನ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರದ ಅಡಿಯಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಎಲ್ಲ ವರ್ಗದ ಜನರನ್ನು ಒಂದುಗೂಡಿಸುವ ಮೂಲಕ ರಾಷ್ಟ್ರೀಯ ಭಾವೈಕ್ಯ ಸಾಧಿಸಬೇಕು ಎಂದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಚಿಂತನೆ, ತತ್ವ-ಸಿದ್ಧಾಂತ ಮತ್ತು ಆದರ್ಶ ಗುಣಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರಾಂಶುಪಾಲರಾದ ಡಾ.ಎಂ.ಪ್ರಕಾಶ್, ಡಾ.ಎಸ್.ಎನ್.ವೆಂಕಟೇಶ್, ದೈಹಿಕ ಶಿಕ್ಷಣ ನಿರ್ದೇಶಕ ಆರ್.ರಾಜಣ್ಣ, ಮಾನವಿಕ ವೇದಿಕೆ ಸಂಚಾಲಕ ಜನಾರ್ದನ್, ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕ ರಮೇಶ್ ಮೊದಲಾದವರು ಉಪಸ್ಥಿತರಿದ್ದರು.



ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಗಾಂಧಿ ಪುಸ್ತಕ ಕೇಂದ್ರವನ್ನು ಗಾಂಧೀವಾದಿ ಚನ್ನಮ್ಮ ಹಳ್ಳಿಕೇರಿ ಅವರು ಉದ್ಘಾಟಿಸಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಮೊದಲಾದವರು ಚಿತ್ರದಲ್ಲಿದ್ದಾರೆ

ಗುರುವಾರ
30-8-2012

ನಾವು ಕನ್ನಡಿಗರು




ಎಚ್.ಎಸ್. ರೇಣುಕಪ್ರಸಾದ್ ಲಾ-ಸೋಶಿಯಲ್-ಕಲ್ಚರಲ್ ಫೌಂಡೇಷನ್ ನಗರದಲ್ಲಿ ಹಮ್ಮಿಕೊಂಡಿದ್ದ ಎಚ್.ಎಸ್.ಆರ್. -80 ಅಭಿನಂದನಾ ಸಮಾರಂಭದಲ್ಲಿ ಎಚ್.ಎಸ್. ರೇಣುಕಪ್ರಸಾದ್ ಮತ್ತು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ನ್ಯಾ. ವಿ.ಎಸ್. ಮಳಿಮಠ, ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಎಂ.ವಿ. ರಾಜಶೇಖರನ್, ನಿವೃತ್ತ ನ್ಯಾಯಾಧೀಶೆ ಮಂಜುಳಾದೇವಿ, ನಾಡೆ ಪಿ. ಕೃಷ್ಣ, ಕಸಾಪ ರಾಜ್ಯಾಧ್ಯಕ್ಷ ಪುಂಡಲೀಕ ಹಾಲಂಬಿ, ವಕೀಲರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ, ಜಿ.ಬಿ. ರಾಜು ಮತ್ತಿತರರಿದ್ದರು.

ಈ ಸಂಜೆ

ಆ.29 ಬುಧವಾರ, 2012




ಎಚ್.ಎಸ್. ರೇಣುಕಾಪ್ರಸಾದ್ ಲಾ-ಸೋಶಿಯಲ್-ಕಲ್ಚರಲ್ ಫೌಂಡೇಷನ್ ನಗರದಲ್ಲಿ ಹಮ್ಮಿಕೊಂಡಿದ್ದ ಎಚ್.ಎಸ್.ಆರ್.-80 ಅಭಿನಂದನಾ ಸಮಾರಂಭದಲ್ಲಿ ಎಚ್.ಎಸ್. ರೇಣುಕಾಪ್ರಸಾದ್ ಮತ್ತು ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ಅವರನ್ನು ಅಭಿನಂದಿಸಲಾಯಿತು. ನ್ಯಾ. ವಿ.ಎಸ್. ಮಳಿಮಠ, ಬೇಲಿ ಮಠದ ಶ್ರೀ ಶಿವರುದ್ರಸ್ವಾಮೀಜಿ, ವಿಧಾನ ಪರಿಷತ್ ಸದಸ್ಯ ಎಂ.ವಿ. ರಾಜಶೇಖರನ್, ನಿವೃತ್ತ ನ್ಯಾಯಾಧೀಶೆ ಮಂಜುಳಾ ದೇವಿ, ವೂಡೆ.ಪಿ. ಕೃಷ್ಣ, ಕಸಾಪ ರಾಜ್ಯಾಧ್ಯಕ್ಷ ಪುಂಡಲೀಕ ಹಾಲಂಬಿ, ವಕೀಲರ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ, ಜಿ.ಬಿ. ರಾಜು ಮತ್ತಿತರರಿದ್ದರು.



ಕೃತಿ ಬಿಡುಗಡೆ...

ಕುಂಚಿಟಿಗರ ಮಹಾಸಮ್ಮೇಳನ 2012ರ ಸ್ಮರಣ ಸಂಚಿಕೆ ಕುರಿತ ಸಂವಾದದಲ್ಲಿ ಡಾ. ದೊಡ್ಡರಂಗೇಗೌಡ ಕೃತಿ ಬಿಡುಗಡೆ ಮಾಡಿದರು. ಡಾ. ವೂಡೆ ಪಿ. ಕೃಷ್ಣ, ಎಸ್. ಲಿಂಗಮೂರ್ತಿ, ಪಾಲಿಕೆ ಸದಸ್ಯ ಅನಿಲ್‌ಕುಮಾರ್, ಸುಂದರಮೂರ್ತಿ ಹಾಜರಿದ್ದರು.

ವಿಜಯವಾಣಿ 2 ಭಾನುವಾರ, 26 ಆಗಸ್ಟ್ 2012



80 ವರ್ಷ ತುಂಬಿದ ಸಾಮಾಜಿಕ ಕಾರ್ಯಕರ್ತ ಎಚ್.ಎಸ್. ರೇಣುಕಾಪ್ರಸಾದ್ ಮತ್ತು ಅವರ ಪತ್ನಿ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರನ್ನು ಬೆಂಗಳೂರಿನಲ್ಲಿ ಶನಿವಾರ ಅಭಿಮಾನಿಗಳು ಆತ್ಮೀಯವಾಗಿ ಅಭಿನಂದಿಸಿದರು. ನ್ಯಾ. ವಿ.ಎಸ್. ಮಳೀಮಠ, ನ್ಯಾ. ಮಂಜುಳಾದೇವಿ, ಎಂ.ವಿ. ರಾಜಶೇಖರನ್ ಮತ್ತಿತರರು ಉಪಸ್ಥಿತರಿದ್ದರು.

ರೇಣುಕಾಪ್ರಸಾದ್‌ಗೆ 80: ಅಭಿನಂದನೆ

■ ಸಮಾಜ ಸೇವಕನ ಸಾರ್ಥಕ ಬದುಕು– ಗಣ್ಯರ ಗುಣಗಾನ

ಬೆಂಗಳೂರು: ಸಮಾಜದಲ್ಲಿ ಬರುವ ಎಲ್ಲಾ ಏಳುಬೀಳುಗಳನ್ನು ಸಮಾಧಾನದಿಂದ ಸ್ವೀಕರಿಸಿ ಧನ್ಯತೆ ಪಡೆಯುವುದೇ ಸಂಸ್ಕಾರ ಎಂದು ಬೇಲಿಮಠದ ಶ್ರೀ ಶಿವರುದ್ರ ಮಹಾಸ್ವಾಮಿಗಳು ಅಭಿಪ್ರಾಯಪಟ್ಟರು.

ಎಚ್.ಎಸ್. ರೇಣುಕ ಪ್ರಸಾದ್ ಅವರಿಗೆ 80 ವರ್ಷ ತುಂಬಿದ ಹಿನ್ನೆಲೆಯಲ್ಲಿ ಲಾ - ಸೋಷಿಯಲ್- ಕಲ್ಚರಲ್ ಫೌಂಡೇಷನ್ ಮತ್ತು ಎಚ್.ಎಸ್.ಆರ್ – 80 ಅಭಿನಂದನಾ ಸಮಿತಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ವಯಸ್ಸು 60 ದಾಟಿದ ನಂತರ ಇಳಿ ವಯಸ್ಸಾಗಿದೆ ಎಂದು ಭಾವಿಸುವುದು ತಪ್ಪು, ನಿಜವಾದ ಜೀವನ ಆರಂಭವಾಗುವುದೇ ಆಗ ಎಂದರು.

ಯೌವನ ಕಹಿ ಮಾವಿನ ಕಾಯಿ ಇದ್ದ ಹಾಗೆ. 40ರ ವಯಸ್ಸು ಹುಳಿ ಮಾವಿನ ಕಾಯಿಯಂತದ್ದು. 60ರ ವಯಸ್ಸು ಸಿಹಿಯಾದುದು. ಅರ್ಥ ಮಾಡಿಕೊಂಡವರ ಬದುಕು ಅಮೃತ ಸೆಲೆ ಇದ್ದಂತೆ. ಎಲ್ಲಾ ವಿಚಾರಗಳನ್ನು ಅರ್ಥಮಾಡಿಕೊಳ್ಳುವ ಪಕ್ವಕಾಲ. 80ನೇ ವರ್ಷದ ಹುಟ್ಟು ಹಬ್ಬ ಆಚರಿಸಿಕೊಳ್ಳುತ್ತಿರುವ ರೇಣುಕಾ ಪ್ರಸಾದ್ ಸೇವೆ ಇತರರಿಗೆ ಅನುಕರಣೀಯ ಎಂದರು.

ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ಡಾ. ವಿ.ಎಸ್. ಮಳಿಮಠ ಮಾತನಾಡಿ, ರೇಣುಕಾ ಪ್ರಸಾದ್ ವಕೀಲರಾಗಿ, ಬಸವ ತತ್ವ ಪ್ರಚಾರಕರಾಗಿ ಸಮಾಜಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಬಸವ ಸಮಿತಿಯ ಕೀರ್ತಿಯನ್ನು ಇಷ್ಟು ಎತ್ತರಕ್ಕೆ ಕೊಂಡೊಯ್ದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ ಎಂದು ಕೊಂಡಾಡಿದರು.

ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್ ಮಾತನಾಡಿ, ಬಸವ ತತ್ವವನ್ನು ರಾಜ್ಯದಲ್ಲಿ ಮಾತ್ರವಲ್ಲದೇ ವಿಶ್ವ ಮಟ್ಟದಲ್ಲಿ ಪ್ರಚುರ ಪಡಿಸಿದವರಲ್ಲಿ ರೇಣುಕಾ ಪ್ರಸಾದ್ ಒಬ್ಬರು ಎಂದು ಹೇಳಿದರು.

ರೇಣುಕಾಪ್ರಸಾದ್ ಪತ್ನಿ, ಮಾಜಿ ಸಚಿವೆ ಲೀಲಾದೇವಿ ಪ್ರಸಾದ್ 'ಲೀಲಾಪ್ರಿಯ' ಕವನ ವಾಚಿಸಿದರು. ಪ್ರಸಾದ್ ಸಹೋದರ ಶಿವಪ್ರಕಾಶ್ ಅಣ್ಣನಿಗೆ ಪುಷ್ಪಗುಚ್ಛ ನೀಡಿ ಕವನ ವಾಚಿಸಿ ಅಭಿನಂದನೆ ಸಲ್ಲಿಸಿದರು. ಕಸಾಪ ಅಧ್ಯಕ್ಷ ಪುಂಡಲೀಕ ಹಾಲಂಬಿ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ನ್ಯಾ. ಟಿ.ಎನ್. ಮಂಜುಳಾದೇವಿ, ಎಸ್. ಎಸ್. ಪಾಟೀಲ್, ಎಸ್.ವಿ. ಶ್ರೀನಿವಾಸ್ ಮೂರ್ತಿ ಮತ್ತಿತರರು ಹಾಜರಿದ್ದರು.

4 ವಿಜಯ ಕರ್ನಾಟಕ
ಸೋಮವಾರ, 27 ಆಗಸ್ಟ್ 2012, ಬೆಂಗಳೂರು

ವಿಶ್ವಮಾನವರಾಗಲು ಪ್ರಯತ್ನಿಸಿ

■ ವಿಕ ಸುದ್ದಿಲೋಕ ಬೆಂಗಳೂರು



ಸರಕಾರಿ ಸವಲತ್ತುಗಳನ್ನು ಪಡೆಯುವಾಗಷ್ಟೇ ಕುಂಚಿಟಿಗ ಎಂದು ಹೇಳಬೇಕು. ಉಳಿದಂತೆ ವಿಶ್ವಮಾನವರಾಗಲು ಪ್ರಯತ್ನಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಡಾ. ದೊಡ್ಡರಂಗೇಗೌಡ ಹೇಳಿದರು.

2012 ಕುಂಚಿಟಿಗರ ಮಹಾಸಮ್ಮೇಳನ ಸ್ವಾಗತ ಸಮಿತಿ ಹಾಗೂ ಸ್ಮರಣ ಸಂಚಿಕೆ ಸಮಿತಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಕುಂಚಿಟಿಗರು' ಸ್ಮರಣ ಸಂಚಿಕೆ ಕುರಿತ ಸಂವಾದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜಕೀಯ ಪ್ರಾತಿನಿಧ್ಯ ಪಡೆಯುವಾಗ, ಆರ್ಥಿಕವಾಗಿ ಸಬಲರಾಗಲು, ಸರಕಾರದ ಯಾವುದೇ ಸವಲತ್ತುಗಳನ್ನು ಪಡೆಯುವಾಗ ಮಾತ್ರ ಕುಂಚಿಟಿಗ ಎಂಬ ಜಾತಿ ಹೆಸರು ಬಳಸಬೇಕು. ಇಂತಹ ಸಂದರ್ಭಗಳನ್ನು ಹೊರತುಪಡಿಸಿದರೆ ಕುವೆಂಪು ಅವರು ಹೇಳಿದಂತೆ ನಾವೆಲ್ಲಾ ವಿಶ್ವಮಾನವರಾಗಲು ಪ್ರಯತ್ನಿಸಬೇಕು. ನಮ್ಮ ಮನಸ್ಸುಗಳನ್ನು ನದಿಗಳಂತೆ, ಸಮುದ್ರಗಳಂತೆ ವಿಶಾಲವಾಗಿಸಿಕೊಳ್ಳಬೇಕು ಎಂದು ಹೇಳಿದರು.

ಸದ್ಯ ಜಾತಿ, ಧರ್ಮದ ಹೆಸರಿನಲ್ಲಿ ಆಗಬಾರದ್ದು ಆಗುತ್ತಿದೆ. ಈ ಸಂದರ್ಭದಲ್ಲಿ ನಾವು ಕುಂಚಿಟಿಗರು ಎಂದು ಹೇಳಿಕೊಂಡು ತುಪ್ಪ ಸುರಿಯುವ ಕೆಲಸ ಮಾಡಬಾರದು. ಕುಂಚಿಟಿಗರಾದರೂ ಒಕ್ಕಲಿಗರ ವಾಹಿನಿಯಲ್ಲೇ ಗುರುತಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕುಂಚಿಟಿಗ ಸಮುದಾಯದಲ್ಲಿ ಶೇ.90ರಷ್ಟು ಜನ ಒಕ್ಕಲುತನವನ್ನೇ ನಂಬಿದ್ದಾರೆ. ಶೇ.10ರಷ್ಟು ಜನರು ಮಾತ್ರ ಹೆಚ್ಚಿನ ವಿದ್ಯಾಭ್ಯಾಸ ಕಲಿತು ಅನ್ಯ ಉದ್ಯೋಗಗಳಲ್ಲಿದ್ದಾರೆ. ಅನೇಕ ರೈತರು ಈಗಲೂ ಮೋಡ ನೋಡಿ ಬಿತ್ತನೆ ಮಾಡಬೇಕಾದಂತಹ ದುಸ್ಥಿತಿ ಇದೆ. ನದಿಗಳ ಜೋಡಣೆ ಸರಿಯಾಗಿ ಆದರೆ ರೈತರಿಗೆ ನಿರಂತರವಾಗಿ ನೀರು ಒದಗಿಸಬಹುದು. ಗಂಗಾ- ಕಾವೇರಿಯನ್ನು ಒಟ್ಟಾಗಿ ಜೋಡಿಸುವಂತಹ ನಾಯಕರು ಇನ್ನು ಮುಂದಾದರೂ ಹುಟ್ಟಿ ಬರಬೇಕು ಎಂದರು.

ಬಿಬಿಎಂಪಿ ಸದಸ್ಯ ಎಸ್.ಅನಿಲ್‌ಕುಮಾರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ವೂಡೆ, ಪಿ. ಕೃಷ್ಣ, ಸ್ಮರಣ ಸಂಚಿಕೆ ಸಂಪಾದಕ ಡಾ.ಮೀರಾಸಾಬಿಹಳ್ಳಿ ಶಿವಣ್ಣ, ರೇಷ್ಮೆ ತಳಿ ವಿಜ್ಞಾನಿ ಡಾ.ಎಂ.ಎನ್. ನರಸಿಂಹಣ್ಣ ಮತ್ತಿತರರು ಉಪಸ್ಥಿತರಿದ್ದರು.

ಉದಯವಾಣಿ ಸೋಮವಾರ | ಆಗಸ್ಟ್ | 27 | 2012

ಕುಂಚಿಟಿಗರಿಗೆ ರಾಜಕೀಯ ಸ್ಥಾನವಿಲ್ಲ: ದೊಡ್ಡರಂಗೇಗೌಡ

ಬೆಂಗಳೂರು: ರಾಜಕೀಯದಲ್ಲಿ ಕುಂಚಿಟಿಗ ಸಮುದಾಯಕ್ಕೆ ಸರಿಯಾದ ಸ್ಥಾನಮಾನ ಇನ್ನೂ ಸಿಕ್ಕಿಲ್ಲ ಹಾಗೂ ಆರ್ಥಿಕ ಪ್ರಗತಿಯಲ್ಲೂ ಹಿಂದುಳಿದಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ದೊಡ್ಡರಂಗೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಭಾನುವಾರ 2012 ಕುಂಚಿಟಿಗರ ಮಹಾಸಮ್ಮೇಳನ ಸ್ವಾಗತ ಸಮಿತಿ ಹಾಗೂ ಸ್ಮರಣ ಸಂಚಿಕೆ ಸಮಿತಿ ಹಮ್ಮಿಕೊಂಡಿದ್ದ 'ಕುಂಚಿಟಿಗರು' ಸ್ಮರಣ ಸಂಚಿಕೆ ಕುರಿತ ಮಾತನಾಡಿದ ಅವರು, ರಾಜಕೀಯ ಕ್ಷೇತ್ರದಲ್ಲಿ ಸಿಗಬೇಕಾದ ಸ್ಥಾನಮಾನ ಸಿಗದಿರುವುದು ಬೇಸರ ಮೂಡಿಸಿದೆ. ರಾಜಕಾರಣಕ್ಕೆ ಹಾಗೂ ಸರ್ಕಾರದ ಸವಲತ್ತುಗಳಿಗಾಗಿ 'ಕುಂಚಿಟಿಗರು' ಎಂಬುದನ್ನು ಬಳಸಿಕೊಳ್ಳಬೇಕು. ಇಲ್ಲದಿದ್ದರೆ, ಕುವೆಂಪು ಅವರ ತತ್ವದಂತೆ ವಿಶ್ವಮಾನವರಾಗಬೇಕು ಎಂದರು.

ಕುಂಚಿಟಿಗ ಸಮುದಾಯದಲ್ಲಿ ಶೇ. 90ರಷ್ಟು ಮಂದಿ ಕೃಷಿಯನ್ನೇ ಅವಲಂಬಿಸಿದ್ದಾರೆ. ಹಾಗಾಗಿ, ಇಂದಿನ ಪರಿಸ್ಥಿತಿಯಲ್ಲಿ ಕುಂಚಿಟಿಗರು ಒಕ್ಕಲಿಗರ ವಾಹಿನಿಯಲ್ಲೇ ಗುರುತಿಸಿಕೊಳ್ಳುವುದು ಒಳ್ಳೆಯದು. ಆರ್ಥಿಕವಾಗಿ ಹಿಂದುಳಿದ ರೈತರು ಇಂದಿಗೂ ಮಳೆಯನ್ನೇ ಅವಲಂಬಿಸಿದ್ದಾರೆ. ಆದರೆ, ಸಮಯಕ್ಕೆ ಸರಿಯಾಗಿ ಬರದ ಮಳೆಯಿಂದ ರೈತ ಕಂಗಾಲಾಗಿದ್ದಾನೆ. ಇಂತಹ ಸಮಸ್ಯೆಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಗಂಗಾ- ಕಾವೇರಿ ನದಿಯನ್ನು ಜೋಡಿಸುವಂತಹ ಕೆಲಸ ಆಗಬೇಕಿದೆ ಎಂದು ಆಗಬೇಕಿದೆ ಎಂದು ಅಭಿಪ್ರಾಯಪಟ್ಟರು.

'ಕುಂಚಿಟಿಗರು' ಸ್ಮರಣ ಸಂಚಿಕೆಯು ಸಮುದಾಯದ ಅಧ್ಯಯನಕ್ಕೆ ಮೌಲಿಕ ಗ್ರಂಥವಾಗಿದೆ. ಜನಾಂಗದ ಬಗ್ಗೆ ಅನೇಕ ವಿದ್ಯಾರ್ಥಿಗಳು ಪಿಎಚ್‌ಡಿ ಅಧ್ಯಯನ ನಡೆಸುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳು ಸಂಪೂರ್ಣ ಅಧ್ಯಯನಕ್ಕಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಗ್ರಂಥವನ್ನು ಓದಬೇಕಾಗದ ಅಗತ್ಯವಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಸಂಚಿಕೆಯ ಸಹಾಯಕ ಸಂಪಾದಕ ಪ್ರೊ. ಎಚ್. ಜಿ. ಕೃಷ್ಣಪ್ಪ ಕುಂಚಿಟಿಗ ಸಮುದಾಯ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಡಿ. ಬನುಮಯ್ಯ ಅವರು ಮೈಸೂರಿನಲ್ಲಿ ಶಿಕ್ಷಣ ಸಂಸ್ಥೆಯನ್ನೇ ಆರಂಭಿಸಿದರು. ಈ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಾಂಗ ಮಾಡಿದವರು ಅಂದಿನ ಮೈಸೂರು ಸಂಸ್ಥಾನದಲ್ಲಿ ಉನ್ನತ ಹುದ್ದೆಗೇರಿದರು. ಮೂಲಕ ಸಮುದಾಯವನ್ನು ಗೌರವಯುತವಾಗಿ ಕಾಣುವ ಪರಂಪರೆಗೆ ನಾಂದಿ ಹಾಡಿದರು. ಅವರ ಆದರ್ಶ ಇಂದಿಗೂ ಸ್ಫೂರ್ತಿ ಎಂದರು. ಸಮಿತಿಯ ಅಧ್ಯಕ್ಷ ಎನ್. ದೇವರಾಜಯ್ಯ, ಕಾರ್ಯದರ್ಶಿ ಮುರಳೀಧರ ಹಾಲಪ್ಪ, ಬಿಬಿಎಂಪಿ ಸದಸ್ಯ ಎಸ್. ಅನಿಲ್ ಕುಮಾರ್, ಸ್ಮರಣ ಸಂಚಿಕೆ ಸಂಪಾದಕ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಉಪಸ್ಥಿತರಿದ್ದರು.



ನಗರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಕುಂಚಿಟಿಗರು' ಸ್ಮರಣ ಸಂಚಿಕೆಯನ್ನು ವಿಧಾನ ಪರಿಷತ್ ಸದಸ್ಯ ಡಾ. ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು. ಪ್ರೊ. ಎಚ್. ಜಿ. ಕೃಷ್ಣಪ್ಪ, ಎನ್. ದೇವರಾಜಯ್ಯ, ಇತರರು ಇದ್ದರು.

ಸಂಯುಕ್ತ ಕರ್ನಾಟಕ | ಆಗಸ್ಟ್ | 27 | 2012

ಕುಂಚಿಟಿಗರಿಗೆ ಸಿಗದ ಸೌಲಭ್ಯ–ವಿಷಾದ


ಬೆಂಗಳೂರು, ಆ. 26: ಒಕ್ಕಲಿಗರ ಸಮುದಾಯ ಕುಂಚಿಟಿಗರ ಸಂಖ್ಯಾಬಲವನ್ನು ತಮ್ಮ ರಾಜಕೀಯ ಉದ್ದೇಶಗಳಿಗೆ ಬಳಸಿಕೊಂಡಿತ್ತೆ ವಿನಃ ಸಮುದಾಯಕ್ಕೆ ಯಾವ ಸವಲತ್ತುಗಳನ್ನು ಪೂರೈಸಲಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಡಾ. ದೊಡ್ಡರಂಗೇಗೌಡ ವಿಷಾದಿಸಿದರು.

ಕುಂಚಿಟಿಗರ ಮಹಾಸಮ್ಮೇಳನ ಸ್ವಾಗತ ಸಮಿತಿ ಆಯೋಜಿಸಿದ್ದ 'ಕುಂಚಿಟಿಗರು' ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಕುಂಚಿಟಿಗರು ಸ್ವಾಭಿಮಾನಿಗಳು. ಯಾರ ನೆರವೂ ಇಲ್ಲದೆ ಎಲ್ಲ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ ಕುಂಚಿಟಿಗರ ಸಮುದಾಯದಲ್ಲಿ ಸಾಹಿತಿಗಳು, ವಿದ್ವಾಂಸರು ಹಾಗೂ 60 ಜನಕ್ಕಿಂತಲೂ ಹೆಚ್ಚು ಕವಿಗಳಿದ್ದಾರೆ. ಸಮಾಜ ಸೇವೆಯ ಚಿಂತಕರಿದ್ದಾರೆ, ಸಮುದಾಯವನ್ನು ಅಭಿವೃದ್ಧಿ ಕೆಲಸವನ್ನು ಮಾಡಿದ್ದಾರೆ ಎಂದು ಹೇಳಿದರು. ಸಮುದಾಯದಲ್ಲಿ ಒಗ್ಗಟಿದ್ದರೆ ಮಾತ್ರ ಹೆಚ್ಚು ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಡಾ. ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿ ಸಂಘಟಿತ ಹೋರಾಟದ ಮೂಲಕ ಸವಲತ್ತುಗಳನ್ನು ಪಡೆದುಕೊಳ್ಳಬೇಕಾದ ಅನಿವಾರ್ಯಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ಕುಂಚಿಟಿಗರ ಸ್ಮರಣ ಸಂಚಿಕೆಯಲ್ಲಿ ಕುಂಚಿಟಿಗರು ಸಮಾಜಕ್ಕೆ ನೀಡಿದ ಕೊಡುಗೆಗಳು ಕುಂಚಿಟಿಗರ ಸಮುದಾಯ ಬೆಳೆದುಬಂದ ರೀತಿನೀತಿಗಳು, ಕ್ರೀಡೆ, ಕಲೆ, ಸ್ವಾತಂತ್ರ್ಯ ಹೋರಾಟಗಾರರು, ವ್ಯಕ್ತಿ ಚಿತ್ರಗಳು ಹೀಗೆ ಜನಾಂಗದ ಎಲ್ಲ ಮುಖಗಳನ್ನು ಸಮಗ್ರವಾಗಿ ಚಿತ್ರಿಸುವ ಮಾಹಿತಿಪೂರ್ಣವಾದ ನೂರಕ್ಕೂ ಹೆಚ್ಚು ಲೇಖನಗಳನ್ನು ಬರೆಯಲಾಗಿದೆ, ಇದು ಮುಂದಿನ ಯುವಪೀಳಿಗೆಗೆ ದಾರಿ ದೀಪವಾಗಬೇಕು ಎಂದು ಹೇಳಿದರು.



2012 ಕುಂಚಿಟಿಗರ ಮಹಾಸಮ್ಮೇಳನ ಸ್ವಾಗತ ಸಮಿತಿ ಭಾನುವಾರ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಕುಂಚಿಟಿಗರು' ಕೃತಿಯನ್ನು ಸಾಹಿತಿ ಡಾ. ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಎನ್. ದೇವರಾಜಯ್ಯ, ಮುರಳೀಧರ ಹಾಲಪ್ಪ, ವೂಡೇ ಪಿ. ಕೃಷ್ಣ, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಡಾ. ವಿ. ಆಂಜನಪ್ಪ ಮತ್ತಿತರರು ಉಪಸ್ಥಿತರಿದ್ದರು.

ಸಂಯುಕ್ತ ಕರ್ನಾಟಕ । ಬೆಂಗಳೂರು । ಆಗಸ್ಟ್ 26 । 2012

ರೇಣುಕಾಪ್ರಸಾದ್ 80ನೇ ಹುಟ್ಟುಹಬ್ಬ: ಆತ್ಮೀಯ ಸನ್ಮಾನ

ಬೆಂಗಳೂರು, ಆ. 25: ವಕೀಲರಾಗಿ, ಬಸವ ಸಮಿತಿ ಕಟ್ಟಿ ಬೆಳೆಸಿ, ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಚ್. ಎಸ್. ರೇಣುಕಾಪ್ರಸಾದ್ ಅವರಿಗೆ 80 ವರ್ಷ ತುಂಬಿದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು.

ಎಚ್.ಎಸ್.ರೇಣುಕಾಪ್ರಸಾದ್ ಲಾ ಅಂಡ್ ಸೋಷಿಯಲ್ ಫೌಂಡೇಶನ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಮಾಜದ ಹಲವು ಗಣ್ಯರು, ಸ್ನೇಹಿತರು ರೇಣುಕಾಪ್ರಸಾದ್ ಅವರ ಸರಳತೆ, ಸಜ್ಜನಿಕೆ, ಬಡವರ ಬಗ್ಗೆ ಇರುವ ಕಳಕಳಿ, ಸಮಾಜಸೇವೆ, ಸ್ನೇಹಸಂಬಂಧವನ್ನು ನೆನಪಿಸಿಕೊಂಡರು. ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಮಳೀಮಠ ಮಾತನಾಡಿ, ಸರಳ ವ್ಯಕ್ತಿತ್ವ ಹೊಂದಿರುವ ರೇಣುಕಾಪ್ರಸಾದ್ ಅವರು ವಕೀಲ ವೃತ್ತಿ ಮಾಡುವಾಗ ಬಡ ಕಕ್ಷಿದಾರರಿಂದ ಒಂದು ರೂ. ಸಹ ಫೀಜು ಪಡೆಯದೆ ಅವರ ಪರವಾಗಿ ವಾದ ಮಾಡುತ್ತಿದ್ದರು. ಕಡಿಮೆ ಮಾತು, ಹೆಚ್ಚು ಕೆಲಸ ಅವರ ವಿಶೇಷತೆ. ಬಸವ ತತ್ವ ಅಳವಡಿಸಿಕೊಂಡ ರೇಣುಕಾ ಪ್ರಸಾದ್ ಸಮಾಜದ ದೊಡ್ಡ ಆಸ್ತಿಯಾಗಿದ್ದಾರೆ. ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರಾಗಿರುವ ಲೀಲಾದೇವಿ ಆರ್. ಪ್ರಸಾದ್ ಅವರ ಹಿಂದಿನ ಶಕ್ತಿ. ರೇಣುಕಾ ಪ್ರಸಾದ್ 60 ವರ್ಷಗಳು ತುಂಬು ಸಂಸಾರ ನಡೆಸಿ, ಇಂದಿನ ಯುವಕರಿಗೆ ಮಾದರಿಯಾಗಿದ್ದಾರೆ ಎಂದು ನುಡಿದರು.

ವಿಧಾನ ಪರಿಷತ್ ಸದಸ್ಯ ಎಂ.ವಿ. ರಾಜಶೇಖರನ್ ಮಾತನಾಡಿ, ರೇಣುಕಾಪ್ರಸಾದ್ ಅವರ ಜೊತೆ ತಮ್ಮದು 62 ವರ್ಷಗಳ ಸ್ನೇಹವಿದೆ. ಮಹಾರಾಜ ಕಾಲೇಜು ದಿನಗಳಲ್ಲಿ ಜೊತೆಯಾಗಿ ಅಭ್ಯಾಸ ಮಾಡಿದ್ದೇವೆ ಎಂದು ಅವರ ಜೊತೆಗಿನ ಸ್ನೇಹ, ಸಂಬಂಧ ನೆನಪಿಸಿಕೊಂಡರು. ಬಸವ ತತ್ವವನ್ನು ದೇಶವಿದೇಶಗಳಲ್ಲಿ ಪ್ರಚಾರ ಮಾಡುವಲ್ಲಿ ಅವರ ಶ್ರಮ ಇದೆ. ರೇಣುಕಾಪ್ರಸಾದ್ ಮತ್ತು ಲೀಲಾದೇವಿ ದಂಪತಿಗಳು ಸಮಾಜ ಮತ್ತು ರಾಷ್ಟ್ರಕ್ಕೆ ಬಹಳ ಕೊಡುಗೆ ನೀಡಿದ್ದಾರೆ ಎಂದು ರಾಜಶೇಖರನ್ ನುಡಿದರು. ಬೇಲಿಮಠದ ಶ್ರೀಗಳು ಮಾತನಾಡಿ, ಸಮಾಜದಲ್ಲಿನ ಎಲ್ಲ ವೈಶಿಷ್ಟತೆಗಳನ್ನು ಸ್ವೀಕರಿಸಿ ಭಿನ್ನತೆಯನ್ನು ತಡೆಯುವುದೆ ಸಂಸ್ಕಾರ. ಅರ್ಥಪೂರ್ಣ ಜೀವನ ನಡೆಸಿರುವ ರೇಣುಕಾ ಪ್ರಸಾದ್ ಅವರು ತಮಗೆ 80 ವಯಸ್ಸಾಯಿತು ಎಂದು ತಿಳಿದುಕೊಳ್ಳದೆ ಇನ್ನಷ್ಟು ಉತ್ಸಾಹ, ಹುಮ್ಮಸ್ಸಿನಿಂದ ಜನರ ಸೇವೆ ಮಾಡಲಿ ಎಂದು ಹಾರೈಸಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಂಡಲೀಕ ಹಾಲಂಬಿ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ಕೆ.ಎನ್. ಸುಬ್ಬಾರೆಡ್ಡಿ ಅವರು ರೇಣುಕಾ ಪ್ರಸಾದ ಜೊತೆಗಿನ ಸ್ನೇಹ, ಗುಣಗಳ ಕುರಿತು ಮಾತನಾಡಿದರು.

ಕರ್ನಾಟಕ ಆಡಳಿತ ನ್ಯಾಯಮಂಡಳಿ ಮಾಜಿ ಸದಸ್ಯ ಪಿ.ಎನ್. ಮಂಜುಳಾದೇವಿ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೆ ಪಿ. ಕೃಷ್ಣ, ಗಾಂಧಿ ಭವನದ ಹೊ. ಶ್ರೀನಿವಾಸಯ್ಯ, ಬೆಂಗಳೂರು ದೂರದರ್ಶನ ಕೇಂದ್ರದ ಉಪ ಮಹಾನಿರ್ದೇಶಕ ಮಹೇಶ್ ಜೋಶಿ ಮುಂತಾದವರು ಉಪಸ್ಥಿತರಿದ್ದರು.



80ನೇ ಹುಟ್ಟುಹಬ್ಬದ ಅಂಗವಾಗಿ ಹಿರಿಯ ವಕೀಲ, ಸಮಾಜ ಸೇವಕ ಎಚ್. ಎಸ್. ರೇಣುಕಾಪ್ರಸಾದ್ ಹಾಗೂ ಲೀಲಾದೇವಿ ಆರ್. ಪ್ರಸಾದ್ ಅವರನ್ನು ಬೆಂಗಳೂರಿನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಸನ್ಮಾನಿಸಿದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಎಂ.ವಿ.ರಾಜಶೇಖರನ್, ನಿವೃತ್ತ ನ್ಯಾಯಮೂರ್ತಿ ವಿ.ಎಸ್. ಮಳೀಮಠ, ಕೆ.ಎನ್. ಸುಬ್ಬಾರೆಡ್ಡಿ, ವೂಡೆ ಪಿ.ಕೃಷ್ಣ, ಕಸಾಪ ಅಧ್ಯಕ್ಷ ಪುಂಡಲೀಕ ಹಾಲಂಬಿ ಮುಂತಾದವರು ಉಪಸ್ಥಿತರಿದ್ದರು.


ಈ ಸಂಜೆ
ಭಾನುವಾರ, 26 ಆಗಸ್ಟ್, 2012



…ಚಿಟಿಗರ ಮಹಾ ಸಮ್ಮೇಳನ ಸ್ವಾಗತ ಸಮಿತಿ ಹೊರ ತಂದಿರುವ 'ಕುಂಚಿಟಿಗರು' ಸ್ಮರಣ ಸಂಚಿಕೆಯನ್ನು ವಿಧಾನ …ಪರಿಷತ್ ಸದಸ್ಯ ಡಾ.ದೊಡ್ಡರಂಗೇಗೌಡ ಬಿಡುಗಡೆ ಮಾಡಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ, ಮಹಾ ಸಮ್ಮೇಳನ ಕಾರ್ಯಾಧ್ಯಕ್ಷ ಎಸ್.ಲಿಂಗಮೂರ್ತಿ, ಬಿಬಿಎಂಪಿ ಸದಸ್ಯ ಎಸ್.ಅನಿಲ್ ಕುಮಾರ್, ರೇಷ್ಮೆ ತಳಿ ವಿಜ್ಞಾನಿ ಡಾ.ಎಂ.ಎನ್.ನರಸಿಂಹಣ್ಣ, ಖ್ಯಾತ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ, ಸಂಚಿಕೆ ಸಂಪಾದಕ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಪಾಲ್ಗೊಂಡಿದ್ದರು.

ಈ ಸಂಜೆ — ಸುದಿನ — ಶನಿವಾರ, 25 ಆಗಸ್ಟ್, 201

80ರ ಸಾರ್ಥಕ ಬದುಕು ಬತ್ತದ ಉತ್ಸಾಹ



ಸಮಾಜ ಸೇವಾಕರ್ತ, ಹಿರಿಯ ವಕೀಲರಾದ ಎಚ್.ಎಸ್. ರೇಣುಕಾಪ್ರಸಾದ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಚಿರಪರಿಚಿತರಾಗಿ,ಸಮಾಜಸೇವೆ ಮಾಡುತ್ತಾ ಜನಾನುರಾಗಿಯಾಗಿದ್ದಾರೆ.

ವಿವಿಧ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಾರ್ಥಕ ಬದುಕು ಸಾಗಿಸಿ ಇದೀಗ 80ನೇ ವರ್ಷಕ್ಕೆ ಕಾಲಿಡುತ್ತಿದ್ದಾರೆ.

ಎಚ್.ಎಸ್. ರೇಣುಕಾ ಪ್ರಸಾದ್ ಅವರು 1932ರ ಮಾರ್ಚ್ 14 ರಂದು ತುಮಕೂರಿನಲ್ಲಿ ಜನಿಸಿದರು. ಅವರು ಈಗ ಬೆಂಗಳೂರಿನಲ್ಲಿ ಜೀವನ ನಡೆಸುತ್ತಿದ್ದಾರೆ. ಅವರ ತಂದೆ ಡಾ. ಬಿ. ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ತಾಯಿ ಸುಬ್ಬಮ್ಮ ಅನ್ನಪೂರ್ಣಮ್ಮನವರು .

ರೇಣುಕಾ ಪ್ರಸಾದರ ಪತ್ನಿ ಲೀಲಾದೇವಿ ಆರ್.ಪ್ರಸಾದ್ ಅವರು ಕರ್ನಾಟಕ ಸರ್ಕಾರದ ಸಚಿವರಾಗಿ ಎಸ್. ಆರ್. ಬೊಮ್ಮಾಯಿ, ದೇವೇಗೌಡರು ಹಾಗೂ ಜೆ.ಎಚ್. ಪಟೇಲ್ ಅವರ ಸಂಪುಟದಲ್ಲಿ ಸೇವೆ ಸಲ್ಲಿಸಿದ್ದಾರೆ.

ಹಲವು ಕಾಲ ರಾಜ್ಯ ಸಭಾ ಸದಸ್ಯರಾಗಿ ಜನ ಸೇವೆ ಮಾಡಿದ್ದಾರೆ. ಈಗಲೂ ಪತಿಯೊಂದಿಗೆ ಸೇರಿ ಸೇವಾಕಾರ್ಯ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ.

ರೇಣುಕಾ ಪ್ರಸಾದ್‌ರವರು ಈಗ ಬಸವ ಸಮಿತಿಯ ಹಿರಿಯ ಉಪಾಧ್ಯಕ್ಷರಾಗಿ ಹಾಗೂ ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೆ, ಬೆಂಗಳೂರಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳ ಬಾಂಧವ್ಯ ಹೊಂದಿದ್ದಾರೆ.

ಗೋಕಾಕ್ ಚಳವಳಿ ಮತ್ತು ಕನ್ನಡಪರ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕನ್ನಡ ಭಾಷೆ ಉಳಿವಿಗೆ ಹೋರಾಟ ನಡೆಸಿದ್ದರು. ರೇಣುಕಾ ಪ್ರಸಾದ್ ಅವರ ತಮ್ಮ ಎಚ್.ಎಸ್ .ಶಿವಪ್ರಸಾದ್ ಖ್ಯಾತ ಸಾಹಿತಿಗಳಾಗಿದ್ದು ಈಗ ಜರ್ಮನಿಯಲ್ಲಿ ರವೀಂದ್ರನಾಥ್ ಠಾಗೋರ್ ಸಂಸ್ಥೆಗೆ ಸರ್ಕಾರ ಅವರನ್ನು ನಿರ್ದೇಶಕರಾಗಿ ನೇಮಕ ಮಾಡಿದೆ.

ರೇಣುಕಾ ಪ್ರಸಾದ್ ಅವರು ಕರ್ನಾಟಕ ರಾಜ್ಯದ ಬಾರ್ ಕೌನ್ಸಿಲ್‌ನಲ್ಲಿ ಸದಸ್ಯರಾಗಿ, ಕರ್ನಾಟಕ ರಾಜ್ಯ ರೋಟರಿಗಳ ಸಂಘದ ಅಧ್ಯಕ್ಷರಾಗಿ, ಅಖಿಲ ಭಾರತ ರೋಟರಿಗಳ ಸಂಘದ ಉಪಾಧ್ಯಕ್ಷರಾಗಿ, ಕೆಲವು ಕಾಲ ವಕೀಲರ ಸಂಘದ ಕಾರ್ಯ ಸಮಿತಿಯ ಸದಸ್ಯರಾಗಿ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ರಾಜಾಜಿನಗರ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಈಗಲೂ ಸಹಕಾರಿ ರಂಗದಲ್ಲಿ ಕ್ರಿಯಾತ್ಮಕವಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅಲ್ಲದೆ, ಬೆಂಗಳೂರು ಜಿಲ್ಲೆಯ ಸರ್ಕಾರಿ ವಕೀಲರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಕಾಲಿರಿಸಿ ರಮಣ ಮಹರ್ಷಿ, ಜಗಜ್ಯೋತಿ ಬಸವೇಶ್ವರ, ಮಡಿವಾಳ ಮಾಚಿದೇವರ ಬಗ್ಗೆ ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದಾರಲ್ಲದೆ, ಇಂಗ್ಲಿಷ್‌ನಲ್ಲಿ 25ಕ್ಕೂ ಹೆಚ್ಚು ಕಾನೂನಿನ ಪುಸ್ತಕಗಳನ್ನೂ ಸಂಪಾದಿಸಿ ಪ್ರಕಟಿಸಿದ್ದಾರೆ.

ಕರ್ನಾಟಕ ಸಂಘ-ಸಂಸ್ಥೆಗಳ ಅಧಿನಿಯಮದ ಕೃತಿ 10 ಬಾರಿ ಪುನರ್ ಮುದ್ರಣಗೊಂಡಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸಿರುವುದಲ್ಲದೆ, ಬೆಂಗಳೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ.

ಹಲವು ಚುಟುಕು ಸಾಹಿತ್ಯ ಸಮ್ಮೇಳನವನ್ನು ನಡೆಸಿದ ಹೆಗ್ಗಳಿಕೆ ರೇಣುಕಾ ಪ್ರಸಾದ್‌ರದ್ದು. ಇವರ ಕಾರ್ಯವನ್ನು ಮೆಚ್ಚಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಇವರನ್ನು ಗೌರವಿಸಿದೆ.

ರೋಟರಿ ಸಂಸ್ಥೆ, ಲಯನ್ಸ್ ಸಂಸ್ಥೆ, ಎಂಜಿಎಫ್ ಮತ್ತು ಇನ್ನಿತರ ಸಂಘಗಳು ಸದಸ್ಯತ್ವವನ್ನು ನೀಡಿದೆ. ರಾಜ್ಯದ ಖ್ಯಾತ ಶ್ರೀಮುರುಘಾಮಠ ಶರಣರು ಹಾಗೂ ಹಲವಾರು ಸಂಸ್ಥೆಗಳು ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ.

ಬೆಂಗಳೂರು ನಗರ ಕಾರ್ಪೊರೇಷನ್ ವತಿಯಿಂದ ಕೆಂಪೇಗೌಡ ಪ್ರಶಸ್ತಿ ನೀಡಿ ಸತ್ಕರಿಸಿದ್ದಾರೆ. ಇವರು ತಮ್ಮ ವಿದ್ಯಾರ್ಥಿ ಜೀವನದಲ್ಲಿ ವಿದ್ಯಾರ್ಥಿ ಎಂಬ ವಾರ ಪತ್ರಿಕೆಯ ಸಂಪಾದಕರಾಗಿ, ಪ್ರಕಾಶಕರಾಗಿ ನಿರ್ವಹಿಸಿದ್ದರು.

ಅಲ್ಲದೆ, ವಿಶ್ವ ಕರ್ನಾಟಕ ದಿನಪತ್ರಿಕೆ ಉಪಸಂಪಾದಕರಾಗಿ ಮತ್ತು ತಾಯಿನಾಡು ಪತ್ರಿಕೆ ಹಾಗೂ ಇತರ ಪತ್ರಿಕೆಗಳಿಗೆ ಕಾನೂನಿನ ವರದಿಗಾರರಾಗಿ ಸೇವೆ ಸಲ್ಲಿಸಿದ್ದರು ಹಾಗೂ 25 ವರ್ಷಗಳಿಗೂ ಹೆಚ್ಚು ಕಾಲ ಶರಣ ಸಾಹಿತ್ಯ ಪತ್ರಿಕೆಯ ಉಪಸಂಪಾದಕರಾಗಿಯೂ ಸೇವೆ ಸಲ್ಲಿಸುತ್ತಿರುವುದು ವಿಶೇಷ.

ರೇಣುಕಾ ಪ್ರಸಾದ್ ಅವರ ಅಭಿಮಾನಿ ಮಿತ್ರರು ಎಚ್‌ಎಸ್‌ಆರ್. 80 ಅಭಿನಂದನಾ ಸಮಿತಿ ರಚಿಸಿ ನಗರದ ನಯನ ಸಭಾಂಗಣದಲ್ಲಿ ಇಂದು ಸಂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ನಾಳೆ ನಡೆಯಲಿರುವ ಅಭಿನಂದನಾ ಸಮಾರಂಭದಲ್ಲಿ ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ ಸಾನಿಧ್ಯ ವಹಿಸುವರು. ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷ ಡಾ. ಜಸ್ಟೀಸ್ ವಿ.ಎಸ್.ಮಳಿಮಠ್ ಉದ್ಘಾಟಿಸುವರು. ವಿಧಾನಪರಿಷತ್ ಸದಸ್ಯ ಹಾಗೂ ಅಭಿನಂದನಾ ಸಮಿತಿ ಅಧ್ಯಕ್ಷರಾದ ಎಂ.ವಿ.ರಾಜಶೇಖರನ್ ಅಧ್ಯಕ್ಷತೆ ವಹಿಸುವರು.

ಗಾಂಧಿಭವನದ ಅಧ್ಯಕ್ಷ ಹೋ.ವಿ.ಶ್ರೀನಿವಾಸಯ್ಯ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ವಕೀಲರ ಸಂಘದ ಅಧ್ಯಕ್ಷ ಕೆ.ಎನ್.ಸುಬ್ಬಾರೆಡ್ಡಿ, ಕಸಾಪ ಅಧ್ಯಕ್ಷ ಪುಂಡಲೀಕ ಹಾಲಂಬಿ, ಕರ್ನಾಟಕ ಆಡಳಿತ ಟ್ರಿಬ್ಯುನಲ್ ಮಾಜಿ ಸದಸ್ಯೆ ಟಿ.ಎನ್.ಮಂಜುಳಾದೇವಿ ಪಾಲ್ಗೊಳ್ಳುವರು.

ಪ್ರಜಾವಾಣಿ
ಗುರುವಾರ 23ನೇ ಆಗಸ್ಟ್, 2012

‘ಯಶಸ್ಸು ಸಾಧನೆಗೆ ಧೈರ್ಯ, ಆತ್ಮವಿಶ್ವಾಸ ಅಗತ್ಯ’

ಪ್ರಜಾವಾಣಿ ವಾರ್ತೆ.

ಯಲಹಂಕ: ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ವ್ಯಕ್ತಿತ್ವದ ನಿರ್ಮಾಣ, ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಬೇಕು ಎಂದು ಹಲಸೂರು ರಾಮಕೃಷ್ಣ ಮಠದ ಸ್ವಾಮಿ ಪರಮ ಸುಖಾನಂದಜಿ ಹೇಳಿದರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಯುವ ಜಾಗೃತಿ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ವಿರೋಧಿಸುವ ಮೂಲಕ ನಮ್ಮತನವನ್ನು ಉಳಿಸಿ, ಬೆಳೆಸಬೇಕು ಎಂದು ಸಲಹೆ ನೀಡಿದರು.

ಸಮಕಾಲೀನ ಯುವಜಗತ್ತಿಗೆ ಸ್ವಾಮಿ ವಿವೇಕಾನಂದರ ತತ್ವಗಳ ಪ್ರಸ್ತುತತೆ ಮತ್ತು ಅಗತ್ಯತೆಯ ಬಗ್ಗೆ ವಿವರಿಸಿದ ಅವರು, ಬುದ್ಧ, ಬಸವಣ್ಣ, ಮಹಾತ್ಮ ಗಾಂಧೀಜಿ, ಮದರ್ ತೆರೇಸಾ



ಯಲಹಂಕದ ಶೇಷಾದ್ರಿಪುರ ಕಾಲೇಜಿನಲ್ಲಿ ನಡೆದ ಯುವ ಜಾಗೃತಿ ಕಾರ್ಯಕ್ರಮವನ್ನು ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಡಾ.ರವೀಂದ್ರ ಉದ್ಘಾಟಿಸಿದರು. ಹಲಸೂರು ರಾಮಕೃಷ್ಣ ಮಠದ ಸ್ವಾಮಿ ಪರಮ ಸುಖಾನಂದಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಅಭಯಾನಂದಜಿ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ.ಪಿ.ಕೃಷ್ಣ ಇತರರು ಚಿತ್ರದಲ್ಲಿದ್ದಾರೆ

ಮತ್ತಿತರ ಮಹಾನ್ ಪುರುಷರು ತಮ್ಮ ಯಶಸ್ವಿಯಾದರೆ ಹೊರತು ಬೇರೆ ಸ್ವಂತಿಕೆಯ ಬಲದಿಂದಲೆ ಜೀವನದಲ್ಲಿ ಯವರ ಬೆಂಬಲದಿಂದಲ್ಲ ಎಂದು ತಿಳಿಸಿದರು.

ಮನಸ್ಸನ್ನು ಕೇಂದ್ರೀಕರಿಸಲು ಧ್ಯಾನ, ಪ್ರಾರ್ಥನೆ, ಯೋಗ ಅಳವಡಿಸಿಕೊಳ್ಳಬೇಕು. ಇದರಿಂದ ಮನಸ್ಸು ಏಕಾಗ್ರತೆ ಸಾಧಿಸಿ, ನಿಯಂತ್ರಣ ಮತ್ತು ಶುದ್ಧೀಕರಣ ಸಾಧ್ಯವಾಗುತ್ತದೆ ಎಂದರು.

ಸ್ಥಳೀಯ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ಅಭಯಾನಂದಜಿ ಅವರು ಭಜನೆ ಕಾರ್ಯಕ್ರಮ ನಡೆಸಿಕೊಟ್ಟರು. ಬ್ರಹ್ಮಚಾರಿ ಕೃಷ್ಣಮಹಾರಾಜ್ ಮತ್ತು ಬ್ರಹ್ಮಚಾರಿ ಭರತರಾಜ್ ಅವರು ವಿವೇಕಾನಂದರ ಜೀವನ ಕುರಿತಂತೆ ಏಕವ್ಯಕ್ತಿ ಅಭಿನಯ ಪ್ರದರ್ಶನ ನೀಡಿದರು.

ತುಮಕೂರಿನ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ಡಾ.ರವೀಂದ್ರ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ. ಪಿ.ಕೃಷ್ಣ, ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಜಯಂತಿ

ಶೇಷಾದ್ರಿಪುರ ಸಂಜೆ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ಸ್ವಾಮಿ ವಿವೇಕಾನಂದರ 150ನೇ ಜಯಂತಿ ಅಂಗವಾಗಿ ಏರ್ಪಡಿಸಿದ್ದ ಯುವ ಜಾಗೃತಿ ಕಾರ್ಯಕ್ರಮವನ್ನು ರಾಮಕೃಷ್ಣ ಮಠದ ಸ್ವಾಮಿ ಧರ್ಮ ವ್ರತಾನಂದ ಮಹಾರಾಜ್ ಉದ್ಘಾಟಿಸಿದರು




ಪ್ರಜಾವಾಣಿ

ಮಂಗಳವಾರ
21ನೇ ಆಗಸ್ಟ್ 2012

B 3B

ಉದಯವಾಣಿ
ಸೋಮವಾರ | ಆಗಸ್ಟ್ | 20 | 2012

ಶೇಷಾದ್ರಿಪುರ ಸಂಜೆ ಕಾಲೇಜಲ್ಲಿ ಯುವಜಾಗೃತಿ



ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಏರ್ಪಡಿಸಿದ್ದ 'ಯುವ ಜಾಗೃತಿ' ಕಾರ್ಯಕ್ರಮವನ್ನು ಸ್ವಾಮಿ ಧರ್ಮ ವ್ರತಾನಂದ ಮಹಾರಾಜ್, ಸ್ವಾಮಿ ಪರಮ ಸುಖಾನಂದಜೀ ಮಹಾರಾಜ್ ಉದ್ಘಾಟಿಸಿದರು.

ಬೆಂಗಳೂರು: ಸಮಾಜದಲ್ಲಿ ವಿದ್ಯಾರ್ಥಿಗಳಿಗೆ ಜವಾಬ್ದಾರಿ ಹಾಗೂ ಆತ್ಮಗೌರವ ಮುಖ್ಯವಾಗಿದ್ದು ಜೊತೆಗೆ ಸಾಧನೆ ಕರ್ತವ್ಯವಾಗಬೇಕು ಎಂದು ಹಲಸೂರು ರಾಮಕೃಷ್ಣ ಮಠದ ಸ್ವಾಮಿ ಧರ್ಮವ್ರತಾನಂದಜೀ ಮಹಾರಾಜ್ ಹೇಳಿದ್ದಾರೆ.

ನಗರದ ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ನಡೆದ ಸ್ವಾಮಿ ವಿವೇಕಾನಂದರ ಜಯಂತಿ ಅಂಗವಾಗಿ ಯುವ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ದೇಶದ ಅಭಿವೃದ್ಧಿಗೆ ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯವಾದುದು. ಆದ್ದರಿಂದ ವಿದ್ಯಾರ್ಥಿಗಳು ಅನ್ಯವಿಚಾರಗಳ ಬಗ್ಗೆ ಒಲವು ನೀಡದೆ ತಮ್ಮ ಸ್ವಾರ್ಥಕ್ಕಾಗಿ ಬದುಕಬೇಕಿದೆ. ಆಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಹೇಳಿದರು. ವಿವೇಕಾನಂದರ ಆದರ್ಶ, ಸೇವೆ, ತ್ಯಾಗ ಮನೋಭಾವನೆಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಆಗ ಜ್ಞಾನದ ಶ್ರೀಮಂತಿಕೆ ತಾನಾಗಿಯೇ ವೃದ್ಧಿಯಾಗುತ್ತದೆ. ಉತ್ತಮ ವಿಚಾರಗಳ ಅಧ್ಯಯನ ಹಾಗೂ ಪಾಲನೆಗೆ ಮಾತ್ರ ಸಂಸ್ಕೃತಿಗಳು ಸೀಮಿತವಾಗಿರಬೇಕು ಎಂದರು. ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಕಣ್ಣೂರು ಶಾಂತಿ ಕುಟೀರದ ಬ್ರಹ್ಮಚಾರಿ ಕೃಷ್ಣ ಮಹರಾಜ್, ಶಿಕ್ಷಣ ದತ್ತಿ ಖಜಾಂಚಿ ಬಿ.ಎಂ. ಪಾರ್ಥಸಾರಥಿ, ಮತ್ತಿತರರು ಹಾಜರಿದ್ದರು.

ಈ ಸಂಜೆ

ಗುರುವಾರ, 16 ಆಗಸ್ಟ್ 2012



ಶೇಷಾದ್ರಿಪುರಂ ಕಾಲೇಜಿನಲ್ಲಿ 66ನೆ ಸ್ವಾತಂತ್ರ್ಯೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಅವರನ್ನು ಸನ್ಮಾನಿಸಲಾಯಿತು. ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಚ್.ಬಿ.ದಿನೇಶ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ವೂಡೆ.ಪಿ.ಕೃಷ್ಣ, ಪ್ರಾಂಶುಪಾಲ ಡಾ.ಎಂ.ಪ್ರಕಾಶ್ ಮತ್ತಿತರರು ಹಾಜರಿದ್ದರು.

ಸಂಜೆವಾಣಿ ಗುರುವಾರ 16 ಆಗಸ್ಟ್ 2012



ಶೇಷಾದ್ರಿಪುರಂ ಕಾಲೇಜು ಏರ್ಪಡಿಸಿದ್ದ 66ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ಚನ್ನಮ್ಮ ಹಳ್ಳಿಕೇರಿ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಚ್.ಬಿ. ದಿನೇಶ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಡಾ. ಎಂ. ಪ್ರಕಾಶ್, ಕೋಶಾಧ್ಯಕ್ಷ ಬಿ.ಎಂ. ಪಾರ್ಥಸಾರಥಿ, ಟ್ರಸ್ಟಿ ಬಿ.ಸಿ. ಲೋಕನಾಥ್ ಹಾಗೂ ಇತರರು ಉಪಸ್ಥಿತರಿದ್ದರು.

ಗುರುವಾರ, 26 ಜುಲೈ 2012 | ಕನ್ನಡಪ್ರಭ



ಉದ್ಘಾಟನೆ

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಶೇಷಾದ್ರಿಪುರಂ ಕಾಲೇಜಿನಲ್ಲಿ ಬೆಟಗುರು ರಸಗ್ರಹಣ ಕಾರ್ಯಕ್ರಮವನ್ನು ಶಿಕ್ಷಣ ತಜ್ಞ ಡಾ.ಪ್ರಕಾಶ್ ಬಿ.ಕೆ.ಪ್ರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿಚಾರವಾದಿ ಗಂ.ದಯಾನಂದ, ಮುಖ್ಯೋಪಾಧ್ಯಾಯ ಸಿ.ಬಿ.ಉಪಾಧ್ಯಾ, ಗಾಯಕ ಯ.ಜಿ.ದೊಡ್ಡಯ್ಯ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ

ಸೋಮವಾರ 16ನೇ ಜುಲೈ 2012

ಸನ್ಮಾನ



ಶೇಷಾದ್ರಿಪುರ [illegible] ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನ ಪ್ರಥಮ ಪದವಿ ತರಗತಿಗಳ ಉದ್ಘಾಟನಾ ಸಮಾರಂಭದಲ್ಲಿ ಇತ್ತೀಚೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು.

ಕಾಮಸೂತ್ರ ಓದಿದರೆ ಸಂಸಾರ ಸುಗಮ: ರಾಮಚಂದ್ರ ಗೌಡ

• ವಿಕ ಸುದ್ದಿಲೋಕ ಬೆಂಗಳೂರು

ರಮಣ ಮಹರ್ಷಿ ಹೇಳಿರುವಂತೆ ಸಂಸಾರದಲ್ಲಿ ಪುರುಷಾರ್ಥ ಇರಬೇಕು. ಕಾಮಸೂತ್ರವನ್ನು ಸರಿಯಾಗಿ ಓದಿಕೊಂಡರೆ ಸಂಸಾರ ಸುಗಮವಾಗುತ್ತದೆ. ಅದರಲ್ಲಿರುವ ಅರ್ಥ ಅಪಾರ ಎಂದು ಮಾಜಿ ಸಚಿವ ರಾಮಚಂದ್ರ ಗೌಡ ಅಭಿಪ್ರಾಯ ಪಟ್ಟಿದ್ದಾರೆ.

'ಕುಟುಂಬ ದೌರ್ಜನ್ಯ-ಮಹಿಳೆಯರ ಮತ್ತು ಮಹನೀಯರ ಸಮಸ್ಯೆಗಳು ಮತ್ತು ಪರಿಹಾರಗಳು' ಕುರಿತು ಗಾಂಧಿ ಭವನದಲ್ಲಿ ಶನಿವಾರ ಮಾತನಾಡಿ,'ವೇಮನ ಹೇಳಿರುವಂತೆ ಸರಿಯಿಲ್ಲದ ಸಂಸಾರ ಚಪ್ಪಲಿಯಲ್ಲಿರುವ ಕಲ್ಲಿನಂತೆ. ಕಿರಿಕಿರಿ ಉಂಟು ಮಾಡುತ್ತದೆ. ಗಂಡ ಹೆಂಡತಿ ಜಗಳವಾಡಿದರೆ ಪರವಾಗಿಲ್ಲ. ಅಪ್ಪ ಅಮ್ಮ ಜಗಳ ವಾಡಿದರೆ, ಮಕ್ಕಳ ಮೇಲೆ ಕೆಟ್ಟ ಪರಿಣಾಮ ವಾಗುತ್ತದೆ. ನಮ್ಮ ಸಂಸ್ಕೃತಿಯಲ್ಲೇ ಎಲ್ಲವೂ ಇರುವಾಗ ಬೇರೆಡೆಯಿಂದ ಸ್ವೀಕರಿಸುವ ಅಗತ್ಯ ವಿಲ್ಲ. ಶ್ರೀಕೃಷ್ಣ, ಶಂಕರರಿಂದ ಡಿವಿಜಿವರೆಗೂ ಅದನ್ನೇ ಹೇಳುತ್ತ ಬಂದಿದ್ದಾರೆ. ಸಹಬಾಳ್ವೆ ಸೂತ್ರವನ್ನು ಅನುಸರಿಸಿದಾಗ ಜೀವನ ಸುಗಮ ವಾಗುತ್ತದೆ' ಎಂದರು.

ಕಾನೂನಿನ ಶಕ್ತಿ ಬಗ್ಗೆ ನಂಬಿಕೆಯಿಲ್ಲ: ಕಾನೂನಿನಲ್ಲಿ ಎಲ್ಲದಕ್ಕೂ ಪರಿಹಾರ ಇದೆ ಎಂಬುದು ಸುಳ್ಳು. ಹಲವು ಕಾನೂನು ರಚನೆಯಲ್ಲಿ ಪಾಲ್ಗೊಂಡು ಅದರ ಒಳಹೊರಗು ತಿಳಿದುಕೊಂಡಿದ್ದರೂ, ನನಗೆ ಕಾನೂನಿನ ಶಕ್ತಿ ಬಗ್ಗೆ ನಂಬಿಕೆಯಿಲ್ಲ, ಏಕೆಂದರೆ, ಕಾನೂನು ಬೆಡ್ ರೂಂ ಹಾಗೂ ಅಡುಗೆ ಮನೆಯನ್ನು ಪ್ರವೇಶಿಸುವುದಿಲ್ಲ. ನಮ್ಮದು ಕರ್ತವ್ಯ ಪ್ರಧಾನ ದೇಶ, ಅಧಿಕಾರಕ್ಕಾಗಿ ಹಂಬಲಿಸಬೇಡಿ. ಸುಖ ಸಂಸಾರಕ್ಕೆ ಪರಸ್ಪರ ಪ್ರೀತಿಯೇ ಮಾರ್ಗದರ್ಶಿ' ಎಂದು ನಿವೃತ್ತ ಮು.ನ್ಯಾ. ವಿ.ಎಸ್.ಮಳೀಮಠ್ ತಿಳಿಸಿದರು.

ಮಾಜಿ ಸಚಿವೆಯರಾದ ರಾಣಿ ಸತೀಶ್, ಬಿ.ಟಿ. ಲಲಿತಾನಾಯಕ್, ಕಾನೂನು ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ಎನ್.ಫಣೀಂದ್ರ, ಮಂಜುಳಾದೇವಿ, ಟ್ರಾಫಿಕ್ ಕೋರ್ಟ್‌ಗಳ ಬೆಂಗಳೂರು ನಗರ ಮುಖ್ಯ ದಂಡಾಧಿಕಾರಿಗಳಾದ ಸುಧಾ ಸೇತುರಾಮ್ ಓಂಕಾರ್, ಎ.ಜಿ.ಗಂಗಾಧರ್, ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ಸಿ. ಮಂಜುಳ, ಜಂಟಿ ಪೊಲೀಸ್ ಆಯುಕ್ತ ಪ್ರಣವ್ ಮೊಹಂತಿ, ಕರ್ನಾಟಕ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೆ ಪಿ.ಕೃಷ್ಣ, ಕುಮಾರ್ ಜಾಗೀರ್‌ದಾರ್ ಪಾಲ್ಗೊಂಡಿದ್ದರು.

ವಿಕ ಚಿತ್ರಲೋಕ



ಗಾಂಧಿ ಭವನದಲ್ಲಿ ಶನಿವಾರ ನಡೆದ ಸಂವಾದದಲ್ಲಿ ನಿವೃತ್ತ ನ್ಯಾ. ವಿ.ಎಸ್. ಮಳೀಮಠ್, ರಾಮಚಂದ್ರಗೌಡ, ರಾಣಿ ಸತೀಶ್ ಮತ್ತಿತರರು ಪಾಲ್ಗೊಂಡಿದ್ದರು.

ಹೊಸ ದಿಗಂತ 3
ಶನಿವಾರ 30, ಜೂನ್ 2012

ಸಂಸ್ಕೃತಿ ಉಳಿಸಿ: ಪಂಡಿತಾರಾಧ್ಯ ಕರೆ



ಬೆಂಗಳೂರು: ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳಸಲು ಮುಂದಾಗುವಂತೆ ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್. ಆರ್.ಪಂಡಿತಾರಾಧ್ಯ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಪ್ರಥಮ ಪದವಿ ತರಗತಿಗಳ ಉದ್ಘಾಟನೆ [illegible] ದತ್ತಿಯ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಕಲಿಕೆಯೊಂದಿಗೆ ಕೆಲವು ವೃತ್ತಿ ಅಳವಡಿಸಿಕೊಳ್ಳುವ ಜತೆಗೆ ಹಿಂದೂ ಸಂಸ್ಕೃತಿಯನ್ನು ಗೌರವಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪ್ರೊ.ಎಚ್. ಕೆ.ಕುಮಾರರಾಜ್ ಅರಸ್ ಮಾತನಾಡಿ, ಸರ್ಕಾರಗಳು ಮತ್ತು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಓದಲು ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತಿವೆ. ಇವುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಷ್ಟದ ದುಡಿಮೆಯ ಜೊತೆಗೆ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ತಮ್ಮ ಪ್ರತಿಭೆಗಳನ್ನು ಹೊರಹಾಕಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಗೌರವ ಜಂಟಿ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಗೌರವ ಸಹಾಯಕ ಕಾರ್ಯದರ್ಶಿ ಸರೋಜ ಕೆ.ಎಂ.ನಂಜಪ್ಪ, ಆಡಳಿತ ಸಲಹಾ ಮಂಡಳಿ ಅಧ್ಯಕ್ಷ ಪ್ರೊ. ಸಿ.ಎಲ್. ಬಸವರಾಜಯ್ಯ ಮತ್ತು ಕಾಲೇಜಿನ ಪ್ರಾಂಶುಪಾಲ ಪ್ರೊ. ಚಂದ್ರಿಕಾ ಪುರಾಣಿಕ ಉಪಸ್ಥಿತರಿದ್ದರು.

'ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗದ ಕಾರ್ಯಕ್ಕೆ ಶ್ಲಾಘನೆ, 'ಜ್ಞಾನದೇಗುಲ' ಶಿಕ್ಷಣ ಮೇಳಕ್ಕೆ ತೆರೆ

ಸಿಇಟಿ ಮಾಹಿತಿಗೆ ಮುಗಿಬಿದ್ದ ವಿದ್ಯಾರ್ಥಿ ಸಮೂಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹದ ಆಶ್ರಯದಲ್ಲಿ ನಗರದ ಅರಮನೆ ಮೈದಾನದ 'ತ್ರಿಪುರ ವಾಸಿನಿ'ಯಲ್ಲಿ ಏರ್ಪಡಿಸಿದ್ದ 'ಜ್ಞಾನ ದೇಗುಲ' ಶಿಕ್ಷಣ ಮೇಳದಲ್ಲಿ ಎರಡನೇ ದಿನವಾದ ಭಾನುವಾರವೂ ವಿದ್ಯಾರ್ಥಿಗಳು ಹಾಗೂ ಪೋಷಕರು ಸಿಇಟಿ ಮಾಹಿತಿಗಾಗಿ ಮುಗಿಬಿದ್ದರು. ಆ ಮೂಲಕ ಎರಡು ದಿನಗಳ 'ಜ್ಞಾನ ದೇಗುಲ' ಶಿಕ್ಷಣ ಮೇಳಕ್ಕೆ ಅಂತಿಮ ತೆರೆ ಬಿದ್ದಿತು.

ಸುಮಾರು ಐದು ಸಾವಿರಕ್ಕೂ ಅಧಿಕ ಮಂದಿ ಶಿಕ್ಷಣ ಮೇಳದ ಲಾಭ ಪಡೆದರು. ಸಾವಿರಾರು ಮಂದಿ ಐದು ಗೋಷ್ಠಿಗಳ ಪ್ರಯೋಜನ ಪಡೆದರು. ಮಳಿಗೆಗಳ ಬಗ್ಗೆಯೂ ಮೆಚ್ಚುಗೆ ವ್ಯಕ್ತವಾಯಿತು.

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹದ ಕಾಳಜಿ ಶ್ಲಾಘನೀಯ ಎಂದು ಮೇಳದಲ್ಲಿ ಪಾಲ್ಗೊಂಡವರು ಮೆಚ್ಚುಗೆ ವ್ಯಕ್ತಪಡಿಸಿದರು. ಸಿಇಟಿ ಆಯ್ಕೆ ಪ್ರಕ್ರಿಯೆಗೆ ಕೆಲವೇ ದಿನಗಳು ಉಳಿದಿರುವಾಗ ಸಿಇಟಿ ಬಗ್ಗೆ ಮಾಹಿತಿ ನೀಡಿರುವುದು ಸಕಾಲಿಕ ಎಂದು ಪೋಷಕರು ಸಂತಸ ವ್ಯಕ್ತಪಡಿಸಿದರು. ಸಿಇಟಿ ಗೋಷ್ಠಿ ಮುಗಿದ ಬಳಿಕವೂ ಸುಮಾರು ಹೊತ್ತು ಸಂಪನ್ಮೂಲ ವ್ಯಕ್ತಿಗಳಲ್ಲಿ ವಿದ್ಯಾರ್ಥಿಗಳು ಮಾಹಿತಿ ಪಡೆದುಕೊಂಡರು.

'ನಿರ್ವಹಣಾ ಶಿಕ್ಷಣದಲ್ಲಿ ಅವಕಾಶಗಳು' ಕುರಿತು ಮಾತನಾಡಿದ ಶೇಷಾದ್ರಿಪುರಂ ಶಿಕ್ಷಣ ಸಮೂಹದ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ, 'ಐವತ್ತು ವರ್ಷಗಳ ಹಿಂದೆ ನಿರ್ವಹಣಾ ಶಿಕ್ಷಣ ಕ್ಷೇತ್ರ ವಾಣಿಜ್ಯ ಶಿಕ್ಷಣದ ಭಾಗವಾಗಿತ್ತು. ಇದರ ಬಗ್ಗೆ ಜನರಿಗೆ ಹೆಚ್ಚು ಜಾಗೃತಿಯೂ ಇರಲಿಲ್ಲ. ಈಗ ದೇಶದಲ್ಲಿ 1250 'ಬಿ' ಸ್ಕೂಲ್‌ಗಳಿದ್ದು, 1.25 ಲಕ್ಷ ವಿದ್ಯಾರ್ಥಿಗಳು ಪ್ರತಿ ವರ್ಷ ಶಿಕ್ಷಣ ಪಡೆಯುತ್ತಿದ್ದಾರೆ. ಒಂದು ಲಕ್ಷ ಮಂದಿ ದೂರಶಿಕ್ಷಣ ಮೂಲಕ ಎಂಬಿಎ ಶಿಕ್ಷಣ ಪಡೆಯುತ್ತಿದ್ದಾರೆ' ಎಂದರು.


ಶೇಷಾದ್ರಿಪುರ ಶಿಕ್ಷಣ ಸಮೂಹದ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ.ಕೃಷ್ಣ


ಬೆಂಗಳೂರು ಅನಿಮೇಷನ್ ಉದ್ಯಮ ಸಂಘಗಳ ಉಪಾಧ್ಯಕ್ಷ ಎಂ.ಆರ್. ಬಾಲಕೃಷ್ಣ

'ನಿರ್ವಹಣಾ ಶಿಕ್ಷಣ ಜಾಗತಿಕ ಮನೋಭಾವದ ನಾಯಕರನ್ನು ರೂಪಿಸುತ್ತದೆ. ಶೇ 85ರಷ್ಟು ಕಂಪೆನಿಗಳು ಜಾಗತಿಕ ನಾಯಕರನ್ನು ಆಯ್ಕೆ ಮಾಡಿಕೊಳ್ಳಲು ಇಷ್ಟಪಡುತ್ತವೆ. ಎಂಬಿಎ ಪದವೀಧರರನ್ನು ನಾಯಕರನ್ನಾಗಿ ಪರಿವರ್ತಿಸುತ್ತದೆ' ಎಂದು ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾಲಯದ ಮಾಹಿತಿ ವಿಜ್ಞಾನದ ಅಂತರರಾಷ್ಟ್ರೀಯ ಶಾಲೆ ನಿರ್ದೇಶಕಿ ಪ್ರೊ. ಶಾಲಿನಿ ಅರಸ್, 'ವ್ಯವಹಾರಿಕ ಕ್ಷೇತ್ರದಲ್ಲಿ ಹೊಸ ಅವಕಾಶ' ಕುರಿತು ಉಪನ್ಯಾಸ ನೀಡಿ, 'ದಕ್ಷಿಣ ಭಾರತದ ಯುವಜನತೆ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಶಿಕ್ಷಣ ಕಲಿತರೆ ಶ್ರೇಷ್ಠ ಹಾಗೂ ಅಲ್ಲಿ ಸಾಕಷ್ಟು ಉದ್ಯೋಗಾವಕಾಶ ಲಭ್ಯವಿದೆ ಎಂದು ಭಾವಿಸಿದ್ದಾರೆ. ಆದರೆ, ಉತ್ತರ ಭಾರತದಲ್ಲಿ ವಿದ್ಯಾರ್ಥಿಗಳು ಈ ಎರಡು ಕ್ಷೇತ್ರ ಹೊರತುಪಡಿಸಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕಲಿಕೆಗೆ ಹೆಚ್ಚು ಒತ್ತು ನೀಡುತ್ತಾರೆ' ಎಂದರು.

'ಆಧುನಿಕ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳಿಗೆ ಅವಕಾಶಗಳ ಬಾಗಿಲು ತೆರೆದಿದ್ದು, ಕೌಶಲ ಅಳವಡಿಸಿಕೊಂಡು ಯಶಸ್ಸು ಗಳಿಸಬೇಕು. ಯುವಜನತೆ ತಮಗೆ ಖುಷಿ ನೀಡುವಂತಹ ವೃತ್ತಿಯನ್ನು ಆಯ್ದುಕೊಳ್ಳಬೇಕು' ಎಂದು ಅವರು ಸಲಹೆ ನೀಡಿದರು.

'ಅನಿಮೇಶನ್, ಗೇಮಿಂಗ್ ಕ್ಷೇತ್ರದಲ್ಲಿ ಅವಕಾಶಗಳು' ಕುರಿತು ಉಪನ್ಯಾಸ ನೀಡಿದ ಬೆಂಗಳೂರು ಅನಿಮೇಷನ್ ಉದ್ಯಮ ಸಂಘಗಳ ಉಪಾಧ್ಯಕ್ಷ ಎಂ.ಆರ್.ಬಾಲಕೃಷ್ಣ, 'ಅರ್ಧ ದಶಕದಿಂದ ಅನಿಮೇಷನ್ ಕ್ಷೇತ್ರದಲ್ಲಿ ವ್ಯಾಪಕ ಉದ್ಯೋಗಾವಕಾಶ ಸೃಷ್ಟಿಯಾಗಿದೆ' ಎಂದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ನರಸಿಂಹಮೂರ್ತಿ ಸಿಇಟಿ ಬಗೆ ಮಾಹಿತಿ ನೀಡಿದರು.


'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹದ ಆಶ್ರಯದಲ್ಲಿ ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ 'ಜ್ಞಾನ ದೇಗುಲ' ಶಿಕ್ಷಣ ಮೇಳದಲ್ಲಿ ಪಾಲ್ಗೊಂಡ ಪೋಷಕರು ಹಾಗೂ ವಿದ್ಯಾರ್ಥಿಗಳು. -ಪ್ರಜಾವಾಣಿ ಚಿತ್ರ

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಆನ್‌ಲೈನ್ ವ್ಯವಸ್ಥೆ: ರಶ್ಮಿ


ವಿ.ರಶ್ಮಿ

'ವಿದ್ಯಾರ್ಥಿಗಳ ಅಲೆದಾಟ ತಪ್ಪಿಸಿ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸಿಇಟಿ ಆಯ್ಕೆ ಪ್ರಕ್ರಿಯೆಯಲ್ಲಿ ಆನ್‌ಲೈನ್ ಜಾರಿಗೆ ತರಲಾಗಿದೆ' ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರಾದ ವಿ.ರಶ್ಮಿ ತಿಳಿಸಿದರು.

'ಸಿಇಟಿ ನಿಯಮಗಳು' ಕುರಿತು ಉಪನ್ಯಾಸ ನೀಡಿದ ಅವರು, 'ವಿದ್ಯಾರ್ಥಿಗಳಿಗೆ ಗೊಂದಲ ಮೂಡಿದಾಗ ಇಲಾಖೆಯ ಜೊತೆಗೆ ಸಂವಹನ ನಡೆಸಿ ಸಂಶಯ ಪರಿಹರಿಸಿಕೊಳ್ಳಬಹುದು. ವೆಬ್‌ಸೈಟ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಫೇಸ್ ಬುಕ್ ಮೂಲಕ ಇಲಾಖೆಯ ಅಧಿಕಾರಿಗಳ ಜೊತೆಗೆ ಸಂವಹನ ನಡೆಸಬಹುದು. ಕೈಪಿಡಿಯಲ್ಲಿ ಎಲ್ಲ ಮಾಹಿತಿಯೂ ಲಭ್ಯವಿದೆ' ಎಂದರು.

'ಕಳೆದ ವರ್ಷ ಕೆಲವು ವಿದ್ಯಾರ್ಥಿಗಳು ಹಾಗೂ ಪೋಷಕರು ಸಿಇಟಿ ಪ್ರಕ್ರಿಯೆ ವೇಳೆಗೆ 10ಕ್ಕೂ ಅಧಿಕ ಬಾರಿ ಅಲೆದಾಡಿದ ಉದಾಹರಣೆಗಳು ಇವೆ. ಈ ಬಾರಿ ಪರಿಶೀಲನೆ ವೇಳೆಗೆ ಒಂದು ಬಾರಿ ಹಾಜರಾದರೆ ಸಾಕು. ಬಳಿಕ ಆನ್‌ಲೈನ್ ಮೂಲಕವೇ ಪರಿಶೀಲನೆ ಪ್ರಕ್ರಿಯೆ ಮುಂದುವರಿಯುತ್ತದೆ' ಎಂದು ಅವರು ಮಾಹಿತಿ ನೀಡಿದರು.

'ಕಳೆದ ವರ್ಷ ಹಲವು ವಿದ್ಯಾರ್ಥಿಗಳು ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಎರಡನ್ನೂ ಆಯ್ಕೆ ಮಾಡಿಕೊಂಡು ಸಮಸ್ಯೆ ಸೃಷ್ಟಿಸಿಕೊಂಡಿದ್ದರು. ಪಿಯುಸಿ ಫಲಿತಾಂಶ ಪ್ರಕಟಗೊಂಡ ಬಳಿಕ ಸಿಇಟಿಗೆ ಸಾಕಷ್ಟು ಕಾಲಾವಕಾಶ ಇದ್ದು, ಈ ಅವಧಿಯಲ್ಲಿ ವಿದ್ಯಾರ್ಥಿಗಳು ಕಾಲೇಜುಗಳು ಹಾಗೂ ಕೋರ್ಸ್‌ನ ಮಾಹಿತಿ ಪಡೆಯಬೇಕು. ಮತ್ತೆ ಗೊಂದಲಕ್ಕೆ ಒಳಗಾಗುವುದು ಬೇಡ' ಎಂದು ಅವರು ಸಲಹೆ ನೀಡಿದರು.

ರ‍್ಯಾಂಕ್ ಪಡೆಯುವುದೇ ಸಾಧನೆಯಲ್ಲ: ಬಿ.ಎಂ.ಹೆಗ್ಡೆ


ಪ್ರೊ. ಬಿ.ಎಂ.ಹೆಗ್ಡೆ

'ಹೆಚ್ಚು ಅಂಕ, ರ‍್ಯಾಂಕ್ ಪಡೆಯುವುದೇ ದೊಡ್ಡ ಸಾಧನೆ ಅಲ್ಲ. ಇತರರನ್ನು ಅರ್ಥ ಮಾಡಿಕೊಂಡು ಅವರ ನೋವಿಗೆ ಸ್ಪಂದಿಸುವ ಶಿಕ್ಷಣ ದೊರಕಬೇಕು' ಎಂದು ವೈದ್ಯಕೀಯ ಲೇಖಕ ಡಾ. ಬಿ.ಎಂ. ಹೆಗ್ಡೆ ತಿಳಿಸಿದರು.

'ವೃತ್ತಿ ಮಾರ್ಗದರ್ಶನ' ಕುರಿತು ಅವರು ಉಪನ್ಯಾಸ ನೀಡಿ, 'ಶೇ 100 ಅಂಕ ಪಡೆದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಹೆಚ್ಚು ಅಂಕ ಗಳಿಸಲು ಅವಕಾಶಗಳು ಇರುವುದಿಲ್ಲ. ಪ್ರಥಮ ದರ್ಜೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಹೆಚ್ಚು ಅಂಕ ಗಳಿಸಲು ಬಾಗಿಲು ತೆರೆದಿರುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಜೀವನದ ಯಶಸ್ಸು ಅಲ್ಲ' ಎಂದು ಅಭಿಪ್ರಾಯಪಟ್ಟರು.

'ತಂದೆ– ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವುದು ಭಾರತೀಯ ಸಂಸ್ಕೃತಿ ಅಲ್ಲ. ಜೀವನದಲ್ಲಿ ನೈತಿಕತೆ ಅಳವಡಿಸಿಕೊಳ್ಳಬೇಕು' ಎಂದು ಅವರು ಸಲಹೆ ನೀಡಿದರು.

ಉದಯವಾಣಿ
ಸೋಮವಾರ | ಮೇ | 28 | 2012

■ ಎಂಜಿನಿಯರ್ ಸಂಸ್ಥೆಗೆ ಅಧ್ಯಕ್ಷರ ಆಯ್ಕೆ

ಬೆಂಗಳೂರು: ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯ 2012-14ರ ಅವಧಿಗೆ ಅಧ್ಯಕ್ಷರಾಗಿ ಡಾ.ಪೂಡೇ ಪಿ. ಕೃಷ್ಣ ಹಾಗೂ ಕಾರ್ಯದರ್ಶಿಯಾಗಿ ಡಾ.ಪಿ. ವಿಜಯಕುಮಾರ್ ಆಯ್ಕೆಯಾಗಿದ್ದಾರೆ.

ಭಾನುವಾರ 27ನೇ, ಮೇ, 2012

ಅವಿರೋಧ ಆಯ್ಕೆ

ಭಾರತೀಯ ಇಂಜಿನಿಯರುಗಳ ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷರಾಗಿ ಡಾ. ಹೆಗಡೇ ಕೃಷ್ಣ ಹಾಗೂ ಗೌರವ ಕಾರ್ಯದರ್ಶಿಯಾಗಿ ಡಾ. ಜಿ. ವಿಜಯಕುಮಾರ್ ಅವರು 2012 - 14 ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಭಾನುವಾರ, 27 ಮೇ 2012 | ಕನ್ನಡಪ್ರಭ, ಬೆಂಗಳೂರು

ಪಿಯುಸಿ ಪ್ರವೇಶ ಶುಲ್ಕ: ಸರ್ಕಾರ, ಖಾಸಗಿ ಕಾಲೇಜುಗಳ ನಡುವೆ ಚೌಕಾಸಿ

- 2007ರಲ್ಲಿನ ಶುಲ್ಕ ನಿಗದಿ ಆದೇಶ ಜಾರಿಯಾಗಲಿ: ಸರ್ಕಾರ
- ಆದೇಶ ಪಾಲಿಸಬೇಕಾದರೆ ಸೌಲಭ್ಯ ನೀಡಿ: ಖಾಸಗಿ ಕಾಲೇಜುಗಳು
- ಶಿಕ್ಷಣ ಸಚಿವ ಕಾಗೇರಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಚರ್ಚೆ

ಸರ್ಕಾರದ ನಿಲುವು ಬದಲಾಗದು

ಅನುದಾನ ಮತ್ತು ಅನುದಾನ ರಹಿತ ಕಾಲೇಜುಗಳು ಇಂತಿಷ್ಟೇ ಶುಲ್ಕ ಸ್ವೀಕರಿಸಬೇಕೆಂದು ನಿಗದಿ ಮಾಡಿರುವ 2007ರ ಆದೇಶ ಜಾರಿಗೊಳಿಸಲಾಗುತ್ತಿದೆ. ಸರ್ಕಾರದ ಈ ನಿಲುವು ಬದಲಾಗುವುದಿಲ್ಲ ಎಂದು ಎಂದು ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು. ಈ ಆದೇಶ ಜಾರಿ ಕುರಿತು ಇರುವ ಕೆಲವು ಸಮಸ್ಯೆಗಳನ್ನು ಸರಿಪಡಿಸಲಾಗುವುದು. ವಿದ್ಯಾರ್ಥಿಗಳ ಪ್ರವೇಶಕ್ಕೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ. ಹಾಗಾಗಿ ವಿದ್ಯಾರ್ಥಿ ಪೋಷಕರು ಆತಂಕ ಪಡುವ ಅಗತ್ಯವಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು.



ಬೆಂಗಳೂರು: ಪಿಯುಸಿ ಪ್ರವೇಶ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಖಾಸಗಿ ಕಾಲೇಜುಗಳು ಹಾಗೂ ರಾಜ್ಯ ಸರ್ಕಾರದ ನಡುವೆ ಶುಲ್ಕ ಕುರಿತ ಚೌಕಾಸಿ ಶುರುವಾಗಿದೆ.

ಆದರಲ್ಲೂ ಶುಲ್ಕ ನಿಗದಿ ಸಂಬಂಧಿಸಿ ಸರ್ಕಾರ 2007ರಲ್ಲಿ ಹೊರಡಿಸಿದ್ದ ಆದೇಶ ಜಾರಿಗೊಳಿಸುವುದಕ್ಕೆ ಮುಂದಾಗುತ್ತಿದ್ದಂತೆ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘಟನೆ ಆಕ್ಷೇಪ ವ್ಯಕ್ತಪಡಿಸಿದ್ದು, ಇದು ಸರ್ಕಾರಕ್ಕೆ ಕೊಂಚ ತಲೆನೋವು ತಂದಿದೆ.

ಸರ್ಕಾರದ ಈ ಆದೇಶ ಪಾಲಿಸಬೇಕಾದರೆ, ಸರ್ಕಾರದಿಂದ ಶಿಕ್ಷಣ ಸಂಸ್ಥೆಗಳಿಗೆ ದೊರೆಯಬೇಕಿರುವ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕೆಂದು ಆಡಳಿತ ಮಂಡಳಿಗಳು ಆಗ್ರಹಿಸಿವೆ. ಈ ಹಿನ್ನೆಲೆಯಲ್ಲಿ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದಲ್ಲಿ ಶನಿವಾರ ನಡೆದ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತು.

ಏನಿದು ಸಮಸ್ಯೆ?: ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಪಿಯುಸಿ ಪ್ರವೇಶ ಹಾಗೂ ಇತರ ಶುಲ್ಕಗಳಿಗೆ ಸಂಬಂಧಿಸಿದಂತೆ ಸರ್ಕಾರ 2007ರಲ್ಲಿ ಹೊರಡಿಸಿದ್ದ ಆದೇಶ ಜಾರಿಗೊಳಿಸಬೇಕೆಂದು ಇತ್ತೀಚೆಗೆ ಸೂಚಿಸಿತ್ತು. ಆದರೆ, ಈ ಆದೇಶ ಇತ್ತೀಚೆಗೆ ಸಮಸ್ಯೆಗಳಿಗೆ ಅಷ್ಟಾಗಿ ಸ್ಪಂದಿಸದೆ ಅಪ್ರಸ್ತುತವಾಗಿದೆ ಎಂಬ ಕಾರಣಕ್ಕೆ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳು ಆಕ್ಷೇಪ ವ್ಯಕ್ತಪಡಿಸಿದ್ದವು ಅಲ್ಲದೆ, ಈ ಆದೇಶ ಜಾರಿಗೆ ಒತ್ತಡ ಹೇರಿದರೆ, ನ್ಯಾಯಾಲಯ ಮೆಟ್ಟಿಲೇರುವ ಬಗ್ಗೆಯೂ ಬೆದರಿಕೆ ಹಾಕಿದ್ದವು.

ಈ ಹಿನ್ನೆಲೆಯಲ್ಲಿ ಸಚಿವರು, ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆ ಪರಿಹರಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕಾಗೇರಿ ಅವರು, ಕಳೆದ ನಾಲ್ಕು ವರ್ಷಗಳಿಂದ ಈ ಆದೇಶ ಜಾರಿಗೊಳಿಸಿರಲಿಲ್ಲ. ಈಗ ಜಾರಿಗೊಳಿಸಬೇಕೆಂದು ಉದ್ದೇಶಿಸಲಾಗಿದೆ. ಆದರೆ, ಕೆಲವು ಸಮಸ್ಯೆಗಳಿರುವುದರಿಂದ ಅನುದಾನಿತ ಕಾಲೇಜುಗಳವರು ಆಕ್ಷೇಪಿಸಿವೆ. ಈ ವಾದದಲ್ಲೂ ಅರ್ಥವಿದೆ. ಹೀಗಾಗಿ ಈ ಸಮಸ್ಯೆ ಬಗ್ಗೆ ಈಗ ಚರ್ಚೆ ಶುರುವಾಗಿದ್ದು, ಯಾರಿಗೂ ತೊಂದರೆಯಾಗದಂತೆ ಪರಿಹಾರ ಕಂಡುಕೊಳ್ಳಲಾಗುವುದು ಎಂದು ಹೇಳಿದರು.

ಸಂಘದ ಪದಾಧಿಕಾರಿಗಳಾದ ಡಾ.ಎಂ.ಕೆ. ಪಾಂಡುರಂಗಶೆಟ್ಟಿ, ಪ್ರೊ.ಬಿ.ಆರ್. ಶೇಷಾದ್ರಿ ಅಯ್ಯರ್, ಡಾ. ವೂಡೇ ಪಿ.ಕೃಷ್ಣ, ಪ್ರೊ. ಅಜೀಜ್ ಅಹಮ್ಮದ್ ಸಭೆಯಲ್ಲಿದ್ದರು.

ವಿಜಯ ಕರ್ನಾಟಕ
ಬುಧವಾರ, 9 ಮೇ 2012, ಬೆಂಗಳೂರು

ಎಂತಹ ಶಿಕ್ಷಣ ಬೇಕೆಂಬ ಚಿಂತನೆ ಇಲ್ಲ: ವಿಷಾದ



ನಗರದಲ್ಲಿ ನಡೆದ ನಾ.ಸು. ಹರ್ಡೀಕರ್ ಜನ್ಮದಿನಾಚರಣೆಯಲ್ಲಿ ಶಿವರಾಣಪ್ಪ(?) ವಾಲಿ, ದೊರೆಸ್ವಾಮಿ, ಕಲ್ಲನಗೌಡ(?) ಶಿವನಗೌಡ(?), ಪ್ರೊ. ಡಿ.ಕೆ.(?) [illegible] ಮತ್ತಿತರರು ಹರ್ಡೀಕರ್ ಅವರಿಗೆ ನಮನ ಸಲ್ಲಿಸಿದರು.

ವಿಕ ಸುದ್ದಿಲೋಕ ಬೆಂಗಳೂರು

ಪ್ರಜಾಪ್ರಭುತ್ವ(?) ಮತ್ತು(?) ರಾಷ್ಟ್ರ ನಿರ್ಮಾಣದಿಂದ ಭಾರತ ಸೇವಾದಳದ ಕನಸು ನನಸಾಗಲಿದೆ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅಭಿಪ್ರಾಯಪಟ್ಟರು.

ಭಾರತ ಸೇವಾದಳ ಸೋಮವಾರ ಆಯೋಜಿಸಿದ್ದ ಪದ್ಮಭೂಷಣ ಡಾ. ನಾ.ಸು. ಹರ್ಡೀಕರ್ ಅವರ 123ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಇಂದು ಎಲ್ಲರಿಗೂ ಶಿಕ್ಷಣ ನೀಡಬೇಕೆಂಬ ಸಾಮಾಜಿಕ ಅರಿವು(?) ಮೂಡಿದೆ. ಆದರೆ ಎಂತಹ ಶಿಕ್ಷಣ ನೀಡಬೇಕು ಎಂಬ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಶಿಕ್ಷಣ ಮಕ್ಕಳನ್ನು ವಿದ್ಯಾವಂತರನ್ನಾಗಿ(?) ಮಾಡುವ [illegible] ರೂಪಿಸಬೇಕು. ಆದರೆ ಸೇವಾದಳದಲ್ಲಿ ಈಗ ಹಿಂದಿನ ಶಿಸ್ತು ಉಳಿದಂತೆ ಕಾಣುತ್ತಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಭಾರತ ಸೇವಾದಳ ಕೇಂದ್ರ ಸಮಿತಿ ಉಪಾಧ್ಯಕ್ಷ ಶಿವಶರಣಪ್ಪ(?) ವಾಲಿ ಮಾತನಾಡಿ, ಭಾರತ ಸೇವಾದಳ ಇಂದು ಅನುದಾನಕ್ಕಾಗಿ ಸರಕಾರದ ಮುಂದೆ ಭಿಕ್ಷೆ ಬೇಡುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸೇವಾದಳ ಕೇಂದ್ರ ಸಮಿತಿ ಸಂಘಟನಾ ಕಾರ್ಯದರ್ಶಿ ಕಲ್ಲನಗೌಡ(?) [illegible], ಸಮಿತಿ ಸದಸ್ಯ ರಾಮಣ್ಣ(?), ಡಾ. ಪ್ರೊ. ಡಿ.ಕೆ.(?) [illegible], ಬಿ.ಕೆ. ವೆಂಕಟನಾರಾಯಣ್(?), ಬೆಂ. ನಗರ ಜಿಲ್ಲಾ ಸಮಿತಿ ಅಧ್ಯಕ್ಷ [illegible] ಮಾಡಲಾದ(?) [illegible] ಉಪಸ್ಥಿತರಿದ್ದರು.

ಸಂಜೆವಾಣಿ
ಶುಕ್ರವಾರ 6 ಏಪ್ರಿಲ್ 2012



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಿರುಮಲ ತಿರುಪತಿ ದೇವಸ್ಥಾನದ ಸ್ಥಳೀಯ ಸಲಹಾ ಸಮಿತಿ ಮಾಜಿ ಸದಸ್ಯ ಬಿ.ವಿ. ಲಕ್ಷ್ಮಣ್ ದಂಪತಿಗಳನ್ನು ಇಸ್ಕಾನ್‌ನ ಶ್ರೀ ಕೃಷ್ಣ ಕಲಾಕ್ಷೇತ್ರದ ತಿರುದಾಸರು, ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷ ರಾಮಚಂದ್ರೇಗೌಡರು, ಡಾ. ಎ. ರಾಧಾಕೃಷ್ಣರಾಜುರವರು ಸನ್ಮಾನಿಸಿದರು. ಬೆಂ. ನಗರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ, ವೂಡೆ ಪಿ. ಕೃಷ್ಣರವರನ್ನು ಕಾಣಬಹುದು.

ಸಂಜೆವಾಣಿ
ಭಾನುವಾರ 18 ಮಾರ್ಚ್ 2012



ಶೇಷಾದ್ರಿಪುರಂ ವಾಣಿಜ್ಯ ಕಾಲೇಜಿನ ವಾರ್ಷಿಕೋತ್ಸವದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಅವರು ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ವಿ. ಕಮಲಮ್ಮ ಅವರನ್ನು ಸನ್ಮಾನಿಸಿದರು. ಶಿಕ್ಷಣತಜ್ಞ ಡಾ. ವೂಡೇ ಪಿ. ಕೃಷ್ಣ, ಸಂಸ್ಥೆಯ ಸಹ ಕಾರ್ಯದರ್ಶಿ ಎ.ಆರ್. ಶ್ರೀನಿವಾಸಯ್ಯ, ಕೋಶಾಧ್ಯಕ್ಷ ಬಿ.ಎಂ. ಪಾರ್ಥಸಾರಥಿ ಮುಂತಾದವರಿದ್ದಾರೆ.

ನಾವು ಕನ್ನಡಿಗರು

ಶನಿವಾರ
17-3-2012

ಸ್ವೀಕಾರ



ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರ ಪ್ರಕಟಿಸಿರುವ ಸರ್‌ಎಂ.ವಿಶ್ವೇಶ್ವರಯ್ಯ ಜೀವನ ಸಾಧನೆ ಕೃತಿಯನ್ನು ಗೌರವ ಪೂರ್ವಕವಾಗಿ ಸ್ವೀಕರಿಸಲಾಗಿದೆ. ಸಾರ್ವಜನಿಕ ವಲಯದಲ್ಲಿ ಭರವಸೆಯ ಬೆಳ್ಳಿಗೆರೆಯಾಗಿರುವ ಡಾ. ವೂಡೇ ಪಿ. ಕೃಷ್ಣ ಅವರು ರಚಿಸಿರುವ ಈ ಪುಸ್ತಕಕ್ಕೆ ಹಿರಿಯ ವಿದ್ವಾಂಸ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸೊಗಸಾದ ಮುನ್ನುಡಿ ಬರೆದು ಕೊಟ್ಟಿದ್ದಾರೆ.


ಡಾ. ವೂಡೇ ಪಿ. ಕೃಷ್ಣ

1860ರ ಸೆಪ್ಟೆಂಬರ್ 15ರಂದು ಮುದ್ದೇನಹಳ್ಳಿಯಲ್ಲಿ ಜನಿಸಿ 1962ರ ಏಪ್ರಿಲ್ 14ರಂದು ಬೆಂಗಳೂರಿನಲ್ಲಿ ನಿಧನ ರಾಗುವವರೆಗಿನ ಪ್ರಮುಖ ಘಟನೆಗಳನ್ನು ಒಳಗೊಂಡಿರುವ ಈ ಕೃತಿ ಕೊನೆಯಲ್ಲಿ ಸರ್‌ಎಂ.ವಿ. ಅವರ ಬಗೆಗೆ ಗಣ್ಯಾತಿಗಣ್ಯರ ಅನಿಸಿಕೆಗಳನ್ನು ಪ್ರಕಟಿಸಲಾಗಿದೆ.


ಸರ್ ಎಂ.ವಿ. ಅವರ ಅಪರೂಪದ ಭಾವಚಿತ್ರ (1940)


ಮೈಸೂರಿನ ದಿವಾನರಾಗಿ ಸರ್ ಎಂ.ವಿ.

ಶುಕ್ರವಾರ | ಮಾರ್ಚ್ | 16 | 2012 ಉದಯವಾಣಿ



ಸಾಧಕಿಯರಿಗೆ ಸನ್ಮಾನ: ನಗರದ ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯ ಇದ್ದಾರೆ.



ಗುರುವಾರ, 15 ಮಾರ್ಚ್ 2012 | ಕನ್ನಡಪ್ರಭ

ಸನ್ಮಾನ...

ಶೇಷಾದ್ರಿಪುರ ಕಾಮರ್ಸ್ ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕಿ ಡಾ. ಪಿ. ಕಮಲಮ್ಮ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ತಜ್ಞ ವೂಡೆ ಪಿ. ಕೃಷ್ಣ, ಸಂಸ್ಥೆಯ ಕಾರ್ಯದರ್ಶಿ ಎ. ಆರ್. ಶ್ರೀನಿವಾಸಯ್ಯ, ಕೋಶಾಧ್ಯಕ್ಷ ಬಿ.ಎಂ. ಪಾರ್ಥಸಾರಥಿ ಹಾಜರಿದ್ದರು.

ಈ ಸಂಜೆ
ಶುಕ್ರವಾರ, 09 ಮಾರ್ಚ್, 2012



ಶೇಷಾದ್ರಿಪುರಂ ಕಾಲೇಜಿನ ವಾರ್ಷಿಕೋತ್ಸವ ಕಲಾ ಸಿಂಚನವನ್ನು ಬೆಂ. ವಿವಿ ಕುಲ ಸಚಿವ ಬಿ.ಸಿ. ಮೈಲಾರಪ್ಪ ಉದ್ಘಾಟಿಸಿದರು. ನಟಿ ಭಾವನ, ನಟ ಅನಿರುದ್ಧ್, ಶಿಕ್ಷಣ ಸಂಸ್ಥೆ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಮತ್ತಿತರರು ಹಾಜರಿದ್ದರು.

ಸುಸ್ಥಿರ ನಗರಾಭಿವೃದ್ಧಿಗೆ ಚಿಂತನೆ

• ವಿಕ ಸುದ್ದಿಲೋಕ ಬೆಂಗಳೂರು

ಸುಸ್ಥಿರ ಅಭಿವೃದ್ಧಿ ವಿಧಾನಗಳ ಮೂಲಕ ನಗರಗಳನ್ನು ಯೋಜಿತ ರೀತಿಯಲ್ಲಿ ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕಿದೆ ಎಂದು ಸಚಿವ ಎಸ್.ಸುರೇಶ್‌ಕುಮಾರ್ ಹೇಳಿದರು.

ನಗರದ ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಸಂಸ್ಥೆಯು ಮಂಗಳವಾರ ಹಮ್ಮಿಕೊಂಡಿದ್ದ 'ಸುಸ್ಥಿರ ನಗರಾಭಿವೃದ್ಧಿ: ಸವಾಲುಗಳು ಮತ್ತು ಅವಕಾಶಗಳು' ಕುರಿತ 27ನೇ ವಾಸ್ತುಶಿಲ್ಪ ಎಂಜಿನಿಯರ್‌ಗಳ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ನಗರವಾಸಿಗಳಿಗೆ ಸುಲಭ ದರದಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುತ್ತಿರುವ ಖಾಸಗಿ ಸಂಸ್ಥೆಗಳ ಕಾರ್ಯ ಉತ್ತಮವಾಗಿದೆ. ಕೊಳೆಗೇರಿಗಳು ನಿರ್ಮಾಣವಾಗುವುದನ್ನು ತಡೆಗಟ್ಟಲು ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲು ಸರಕಾರ ಕ್ರಮ ಕೈಗೊಂಡಿದೆ. ಜಾಗತಿಕ ತಾಪಮಾನದ ದುಷ್ಪರಿಣಾಮ ತಡೆಗಟ್ಟಲು ಸುಸ್ಥಿರ ಅಭಿವೃದ್ಧಿ ವಿಧಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಿದೆ ಎಂದರು.

ಮುಖ್ಯಮಂತ್ರಿಗಳ ಸಲಹೆಗಾರ (ಮೂಲ ಸೌಕರ್ಯ) ಡಾ. ಎ.ರವೀಂದ್ರ, ಅಭಿವೃದ್ಧಿ ಕಾರ್ಯಗಳು ಹೆಚ್ಚಾದಂತೆ ನೈಸರ್ಗಿಕ ಸಂಪನ್ಮೂಲಗಳು ಬರಿದಾಗುತ್ತವೆ. ಹಾಗಾಗಿ ತತ್ತ್ವಗಳಿಗೆ ಬದ್ಧವಾಗಿ ಸುಸ್ಥಿರ ಅಭಿವೃದ್ಧಿ ವಿಧಾನವನ್ನು ಅಳವಡಿಸಿಕೊಂಡು ಸಾಮಾಜಿಕ, ಆರ್ಥಿಕ ಮತ್ತು ಭೌಗೋಳಿಕ ಅಭಿವೃದ್ಧಿ ಸಾಧಿಸುವತ್ತ ಗಮನ ನೀಡಬೇಕು ಎಂದು ಹೇಳಿದರು.



ನಗರದಲ್ಲಿ ನಡೆದ ವಾಸ್ತುಶಿಲ್ಪ ಎಂಜಿನಿಯರ್‌ಗಳ ಸಮಾವೇಶದಲ್ಲಿ ಭಾಗವಹಿಸಿದ್ದ ಸಚಿವ ಎಸ್. ಸುರೇಶ್ ಕುಮಾರ್ ಅವರು ಸರ್ ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ವೂಡೇ ಪಿ. ಕೃಷ್ಣ ಮುಖ್ಯಮಂತ್ರಿಗಳ ಸಲಹೆಗಾರ ಡಾ.ಎ. ರವೀಂದ್ರ ಚಿತ್ರದಲ್ಲಿದ್ದಾರೆ.

ನಗರಗಳು ಯೋಜಿತವಲ್ಲದ ರೀತಿಯಲ್ಲಿ ಅಭಿವೃದ್ಧಿಯಾಗುತ್ತಿವೆ. ಪರಿಣಾಮವಾಗಿ ಸಾಕಷ್ಟು ಸಮಸ್ಯೆಗಳು ತಲೆದೋರಿವೆ. ನಗರೀಕರಣದಿಂದ ವಾಹನ ದಟ್ಟಣೆ ತೀವ್ರವಾಗಿದೆ. ಆದರೆ ಆಟೋಮೊಬೈಲ್ ಕಂಪನಿಗಳ ಉದ್ಯಮ ಸ್ಥಾಪನೆಗೆ ಸಾಕಷ್ಟು ಪ್ರೋತ್ಸಾಹ ನೀಡಲಾಗುತ್ತಿದೆ. ದೇಶದಲ್ಲಿ ಒಟ್ಟು ಇಂಧನ ಬಳಕೆಯಲ್ಲಿ ಮೂರನೇ ಎರಡಷ್ಟು ಇಂಧನವು ನಗರ ಪ್ರದೇಶಗಳಲ್ಲೇ ಬಳಕೆಯಾಗುತ್ತಿದೆ. ಇನ್ನಾದರೂ ಸಮೂಹ ಸಾರಿಗೆ ಬಳಕೆಗೆ ಆದ್ಯತೆ ನೀಡಬೇಕಿದೆ ಎಂದರು.

ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್‌ನ ಕರ್ನಾಟಕ ಕೇಂದ್ರದ ಅಧ್ಯಕ್ಷ ಡಾ.ಕೆ. ಗೋಪಾಲಕೃಷ್ಣನ್, ಗೌರವ ಕಾರ್ಯದರ್ಶಿ ಜಿ.ಶ್ರೀಕಾಂತ್, ಸಂಚಾಲಕ ಡಾ. ಎ.ಎಸ್.ಕೋದಂಡಪಾಣಿ, ವಾಸ್ತುಶಿಲ್ಪ ವಿಭಾಗದ ಅಧ್ಯಕ್ಷ ಪ್ರೊ. ಜಿತೇಂದ್ರ ಸಿಂಗ್ ಉಪಸ್ಥಿತರಿದ್ದರು.

ಸಂಜೆವಾಣಿ

ಮಂಗಳವಾರ 6 ಮಾರ್ಚ್ 2012




ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನಲ್ಲಿ ಇಂದು ನಡೆದ ಆರ್ಕಿಟೆಕ್ಚರಲ್ ಇಂಜಿನಿಯರುಗಳ 27ನೇ ರಾಷ್ಟ್ರೀಯ ಸಮಾವೇಶದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದ ಸಂದರ್ಭದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಗೆ ಸಚಿವ ಸುರೇಶ್ ಕುಮಾರ್ ಮಾಲಾರ್ಪಣೆ ಮಾಡಿದರು. ಡಾ. ರವೀಂದ್ರ, ವೂಡೆ ಕೃಷ್ಣ ಇದ್ದಾರೆ.

ಈ ಸಂಜೆ

ಭಾನುವಾರ, 04 ಮಾರ್ಚ್, 2012

ವಿಜ್ಞಾನವನ್ನು ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ



ಬೆಂಗಳೂರು, ಮಾ.4- ವಿಜ್ಞಾನವೆಂದರೆ ಶ್ರೈ ವಿಜ್ಞಾನವನ್ನು ಪ್ರಶ್ನಿಸದೆ ವಿದ್ಯಾರ್ಥಿಗಳು ಯಾವುದನ್ನು ಒಪ್ಪಿಕೊಳ್ಳಬಾರದು ಎಂದು ತಿಳಿಸಿದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ.ವೈ.ಎಸ್.ರಾಜನ್ ಎಲ್ಲರೂ ವಿಜ್ಞಾನವನ್ನು ಅರ್ಥೈಸಲು ತೊಡಗಬೇಕೆಂದರು.

ಬೆಂಗಳೂರು ಭಾರತೀಯ ಎಂಜಿನಿಯರ್‌ಗಳ ಸಂಸ್ಥೆಯ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಶಿಕ್ಷಣ ತಜ್ಞ ಡಾ.ವೂಡೆ ಪಿ ಕೃಷ್ಣ ವಿರಚಿತ ಸರ್.ಎಂ.ವಿಶ್ವೇಶ್ವರಯ್ಯ ಜೀವನ ಸಾಧನೆ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಸರ್.ಸಿ.ವಿ. ರಾಮನ್‌ರವರಂತಹ ವ್ಯಕ್ತಿಯನ್ನು ಕಂಡ ಈ ನಾಡು, ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸುತ್ತಿರುವುದು ಸಂತೋಷಕರ ವಿಷಯ. ಸಿ.ವಿ. ರಾಮನ್‌ರವರ ಪರಿಣಾಮದ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ವಿಜ್ಞಾನದ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿ ಕೆರಳುವಂತೆ ಅವರು ಪ್ರೋತ್ಸಾಹದ ನುಡಿಗಳನ್ನಾಡಿದರು. ತಮ್ಮ ಉಪನ್ಯಾಸದಲ್ಲಿ ಜವಹರ್‌ಲಾಲ್ ನೆಹರುರವರ ವಿಜ್ಞಾನದ ಬಗ್ಗೆ ಹೊಂದಿದ್ದ ಅಭಿಪ್ರಾಯವನ್ನು ಉಲ್ಲೇಖಿಸಿದರು.


ಹಿರಿಯ ಗಾಂಧಿವಾದಿ ಡಾ.ಹೊ.ಶ್ರೀನಿವಾಸಯ್ಯ ಮಾತನಾಡಿ, ವೂಡೇ ಪಿ.ಕೃಷ್ಣರವರ ಈ ಕಾರ್ಯ ಮೆಚ್ಚತಕ್ಕದ್ದು. ಎಂಜಿನಿಯರಾಗಿ, ಶಿಕ್ಷಣ ಸಂಸ್ಥೆಯ ನೇತಾರರಾಗಿ ಮಾಹಿತಿಯನ್ನು ನೀಡಬಲ್ಲದ್ದಾಗಿದೆ. ಎಂದರಲ್ಲದೆ ಪ್ರತಿಯೊಬ್ಬರು ಕೊಂಡು ಓದುವ ಅವಶ್ಯಕ ಪುಸ್ತಕವೆಂದರು.

ವೇದಿಕೆಯಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್‌ನ ಅಧ್ಯಕ್ಷರಾದ ಡಾ.ಕೆ. ಗೋಪಾಲಕೃಷ್ಣನ್, ಸಂಚಾಲಕರಾದ ಡಾ.ಎಸ್.ಪಾರ್ಥನ್, ಲೇಖಕ ಡಾ.ವೂಡೆ ಪಿ.ಕೃಷ್ಣರವರು ಉಪಸ್ಥಿತರಿದ್ದರು.

ಪ್ರಜಾವಾಣಿ

ಶುಕ್ರವಾರ, 2 ನೇ ಮಾರ್ಚ್ 2012

ಉತ್ತಮ ಶಿಕ್ಷಣ ನೀಡಲು ಸಲಹೆ



[illegible] ನಿವೇದಿತಾ ವಿದ್ಯಾಕೇಂದ್ರದ [illegible] ಉದ್ಘಾಟನಾ ಸಮಾರಂಭದಲ್ಲಿ [illegible] ಮಾತನಾಡಿದರು. [illegible] ದೊಡ್ಡರಂಗೇಗೌಡ, [illegible] ಶ್ರೀನಿವಾಸಯ್ಯ, ಪ್ರಕಾಶ್ ಚಂದ್ರಪ್ಪ ಭಾಗವಹಿಸಿದ್ದರು.

ಹೊಸನಗರ: ಉತ್ತಮ ಶಿಕ್ಷಣ ನೀಡಿ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸಿದಾಗ ಭಾರತವು ವಿಶ್ವದಲ್ಲಿ ಉತ್ತಮ ಹೆಸರು ಗಳಿಸಲು ಸಾಧ್ಯ ಎಂದು [illegible] ಸಹಾಯಕ ಕಾರ್ಯದರ್ಶಿ [illegible] ಹೇಳಿದರು.

[illegible] ನಿವೇದಿತಾ ವಿದ್ಯಾಕೇಂದ್ರದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿದರು.

ಸಾಹಿತಿ ಡಾ. ದೊಡ್ಡರಂಗೇಗೌಡ ಗಣಕಯಂತ್ರ ಕೊಠಡಿ ಉದ್ಘಾಟಿಸಿ ಮಾತನಾಡಿ, ಆದರ್ಶ ವ್ಯಕ್ತಿಗಳಿಂದ ಸಮಾಜದ ಸಮೃದ್ಧಿ ಸಾಧ್ಯ ಎಂದರು.

[illegible] ಭೋಜನ ಶಾಲೆಯನ್ನು [illegible] ಉದ್ಘಾಟಿಸಿದರು. [illegible] ಮಾತನಾಡಿದರು. [illegible] ಶ್ರೀನಿವಾಸಯ್ಯ, ಪ್ರಕಾಶ್ ಚಂದ್ರಪ್ಪ ಭಾಗವಹಿಸಿದರು.

ವಿವೇಕಾನಂದರ ಕುರಿತ ಸ್ಪರ್ಧೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ವಿವೇಕಾನಂದರದು ಆದರ್ಶ ವ್ಯಕ್ತಿತ್ವ: ಡಾ||ದೊಡ್ಡರಂಗೇಗೌಡ



ತೋವಿನಕೆರೆ: ಸ್ವಾಮಿ ವಿವೇಕಾನಂದರು ತಮ್ಮ ವ್ಯಕ್ತಿತ್ವದಿಂದ ಪ್ರಭಾವ ಬೀರಿ ಇಡೀ ವಿಶ್ವವೇ ದೇಶದತ್ತ ತಿರುಗುವಂತೆ ಮಾಡಿದರು ಎಂದು ವಿಧಾನ ಪರಿಷತ್ತಿನ ಸದಸ್ಯ ಹಾಗೂ ಖ್ಯಾತ ಕವಿ ಡಾ.ದೊಡ್ಡರಂಗೇಗೌಡ ತಿಳಿಸಿದರು.

ಅವರು ಕೊರಟಗೆರೆ ತಾಲ್ಲೂಕು ಜುಂಜರಾಮನಹಳ್ಳಿಯ ನಿವೇದಿತಾ ವಿದ್ಯಾಪೀಠದಲ್ಲಿ ಹೊಸದಾಗಿ ನಿರ್ಮಿಸಿರುವ ಶಾಲಾ ಕೊಠಡಿ, ಗಣಕಯಂತ್ರ ಕೊಠಡಿ, ಅನ್ನಪ್ರಸಾದಂ ಭೋಜನಶಾಲಾ ಸನ್ಯಾಸಿಯರ ವಸತಿಗೃಹಗಳ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ಮಕ್ಕಳಿಂದ ನಾವು ಬಯಸುವುದು ಯಾವುದೇ ಕಾರಣದಿಂದ ಪರೀಕ್ಷೆಗಳಲ್ಲಿ ಕಾಪಿ ಮಾಡದೆ ಉತ್ತರ ಬರೆಯುವುದು ಇದರಿಂದ ಮಕ್ಕಳು ಆದರ್ಶಪ್ರಾಯವಾದ ವ್ಯಕ್ತಿತ್ವ ರೂಪಿಸಿಕೊಳ್ಳಲು ಸಾಧ್ಯವಾಗುತ್ತಿದೆ.

ಇತಿಹಾಸವಿಲ್ಲದ ಅಮೇರಿಕಾ ದೇಶವನ್ನು ನಾವು ಅನುಸರಿಸುವ ಅವಶ್ಯಕತೆ ಇಲ್ಲ. ಚೀನಾ, ಗ್ರೀಸ್ ಹಾಗೂ ಭಾರತ ಮಾತ್ರ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುತ್ತದೆ. ನಮ್ಮ ದೇಶದ ಬಗ್ಗೆ ನಾವು ಹೆಮ್ಮೆ ಪಡಬೇಕಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೊಲ್ಕತ್ತಾ ಶಾರದಾ ಮಠದ ದಕ್ಷಿಣೇಶ್ವರ ಸಹಾಯಕ ಕಾರ್ಯದರ್ಶಿ ಪ್ರವ್ರಾಜಿಕಾ ಜ್ಞಾನದಾಪ್ರಾಣ ಮಾತಾಜಿ ಭವಿಷ್ಯದ ಮಕ್ಕಳಿಂದ ದೇಶವು ವಿಶ್ವದಲ್ಲಿ ಉನ್ನತ ಸ್ಥಾನಕ್ಕೇರುತ್ತದೆ. ಮಕ್ಕಳು ವಿವೇಕಾನಂದರ ಆದರ್ಶಗಳನ್ನು ಪಾಲಿಸುವುದರ ಮೂಲಕ ದೇಶದ ಗೌರವವನ್ನು ಕಾಪಾಡಬೇಕು ಎಂದು ತಿಳಿಸಿದರು. ಸವಿತಾ ಟಿ.ಕೃಷ್ಣ ವಿಠಲ್ ರಾವ್ ನೂತನ ಕಟ್ಟಡಗಳನ್ನು ಪ್ರಾರಂಭಿಸಿದರು.

ಸಮಾರಂಭದ ಸಾನಿಧ್ಯವನ್ನು ವೇದಿಕೆ ಪ್ರವ್ರಾಜಿಕಾ ಧ್ಯಾನಪ್ರಾಣ ಮಾತಾಜಿ, ಪ್ರವ್ರಾಜಿಕಾ ಅತುಲಪ್ರಾಣ ಮಾತಾಜಿ, ಪ್ರವ್ರಾಜಿಕಾ ಪರಹಿತಪ್ರಾಣ ಮಾತಾಜಿ, ಪ್ರವ್ರಾಜಿಕಾ ಯುಕ್ತಪ್ರಾಣ ಮಾತಾಜಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸತ್ಯಶೀಲ ವಾಸ್, ಜ್ಯೋತಿ ಭಾಗವಹಿಸಿದ್ದರು. ಪ್ರೊ.ಕೆ.ಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀನಿವಾಸಯ್ಯ ಸ್ವಾಗತಿಸಿ, ಶಾಂತಾ ವಂದಿಸಿದರು.

ಹೊಸ ದಿಗಂತ
01 ಗುರುವಾರ, ಮಾರ್ಚ್ 2012

ವಿಜ್ಞಾನದ ಬಗ್ಗೆ ಆಸಕ್ತಿ ವಹಿಸಿ


ಬೆಂಗಳೂರು: ವಿಜ್ಞಾನವೆಂದರೆ ಪ್ರಶ್ನೆ. ವಿಜ್ಞಾನವನ್ನು ಪ್ರಶ್ನಿಸದೆ ವಿದ್ಯಾರ್ಥಿಗಳು ಯಾವುದನ್ನೂ ಒಪ್ಪಿಕೊಳ್ಳಬಾರದು. ಎಲ್ಲರೂ ವಿಜ್ಞಾನವನ್ನೂ ಅರ್ಥೈಸಲು ತೊಡಗಬೇಕು ಎಂದು ಪದ್ಮಶ್ರೀ ಪುರಸ್ಕೃತ ವಿಜ್ಞಾನಿ ಡಾ. ವೈ.ಎಸ್. ರಾಜನ್ ಕಿವಿಮಾತು ಹೇಳಿದರು.

ಭಾರತೀಯ ಎಂಜಿನಿಯರುಗಳ ಸಂಸ್ಥೆಯ ರಾಜ್ಯ ಘಟಕ ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಹಾಗೂ ಡಾ. ವೂಡೇ ಪಿ.ಕೃಷ್ಣ ಬರೆದ ಸರ್ ಎಂ. ವಿಶ್ವೇಶ್ವರಯ್ಯ ಜೀವನ ಸಾಧನೆ ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು. ಸರ್ ಸಿ.ವಿ. ರಾಮನ್ ಅವರಂತಹ ವ್ಯಕ್ತಿಯನ್ನು ಕಂಡ ಈ ನಾಡು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸುತ್ತಿರುವುದು ಸಂತೋಷದ ವಿಷಯ ಎಂದ ಅವರು ವಿಜ್ಞಾನದ ಬಗ್ಗೆ ಹೆಚ್ಚು ಆಸಕ್ತಿ ವಹಿಸುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಇದೇ ಸಂದರ್ಭದಲ್ಲಿ ಎಸ್.ಎಂ. ವಿಶ್ವೇಶ್ವರಯ್ಯನವರ ಜೀವನ ಸಾಧನೆ ಕೃತಿ ಲೋಕಾರ್ಪಣೆ ಮಾಡಿದರು.

ಗಾಂಧಿ ಭವನದ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ, ಎಂಜಿನಿಯರ್ ಸಂಸ್ಥೆಯ ಅಧ್ಯಕ್ಷ ಡಾ. ಕೆ. ಗೋಪಾಲಕೃಷ್ಣ, ಸಂಚಾಲಕ ಡಾ. ಎಸ್. ಪಾದೆನ್, ಡಾ. ವೂಡೇ ಪಿ.ಕೃಷ್ಣ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಂಜೆವಾಣಿ

ಗುರುವಾರ 1 ಮಾರ್ಚ್ 2012



ಭಾರತೀಯ ಇಂಜಿನಿಯರುಗಳ ಸಂಸ್ಥೆಯು ಏರ್ಪಡಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಸಮಾರಂಭದಲ್ಲಿ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ವಿರಚಿತ ಸರ್ ಎಂ. ವಿಶ್ವೇಶ್ವರಯ್ಯ ಜೀವನ ಸಾಧನೆ ಕೃತಿಯನ್ನು ಗಾಂಧಿಭವನದ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಬಿಡುಗಡೆಗೊಳಿಸಿದರು. ಸಂಸ್ಥೆಯ ಅಧ್ಯಕ್ಷ ಡಾ. ಕೆ. ಗೋಪಾಲಕೃಷ್ಣನ್, ಸಂಚಾಲಕ ಡಾ. ಎಸ್. ಪಾರ್ಥನ್, ಪದ್ಮಶ್ರೀ ಪುರಸ್ಕೃತ ವಿಜ್ಞಾನಿ ಡಾ. ವೈ.ಎಸ್. ರಾಜನ್ ಕೃತಿಕಾರರು ಇದ್ದಾರೆ.

ಗಾಂಧಿ ಹೆಸರಲ್ಲಿ ಕೀಳು ಎಸ್‌ಎಂಎಸ್: ಸಚಿವ ಬೇಸರ



ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯೊಂದಿಗೆ ಗಾಂಧಿ ಭವನದಲ್ಲಿ ಸ್ಥಾಪಿಸಿರುವ ಪುಸ್ತಕಗಳ ಧ್ಯಾನ ಕೇಂದ್ರ ಗ್ರಂಥಾಲಯವನ್ನು ಸಚಿವ ರೇವು ನಾಯಕ್ ಬೆಳಮಗಿ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸುರೇಶ್ ಕುಮಾರ್ ಉದ್ಘಾಟಿಸಿದರು. ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಹೊ.ಶ್ರೀನಿವಾಸಯ್ಯ ಹಾಜರಿದ್ದರು.

ಬೆಂಗಳೂರು: ಮಹಾತ್ಮ ಗಾಂಧೀ ಅವರ ಬಗ್ಗೆ ಕೀಳು ಅಭಿರುಚಿಯ ಎಸ್‌ಎಂಎಸ್ ಕಳುಹಿಸುವ ಮೂಲಕ ಗಾಂಧಿ ಹೆಸರಿಗೆ ಅವಮಾನ ಮಾಡಲಾಗುತ್ತಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಸ್. ಸುರೇಶ್ ಕುಮಾರ್ ವಿಷಾದ ವ್ಯಕ್ತಪಡಿಸಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಸಾರ್ವಜನಿಕ ಗ್ರಂಥಾಲಯ ಇಲಾಖೆ ಸಹಯೋಗದೊಂದಿಗೆ ಗಾಂಧಿ ಭವನದಲ್ಲಿ ಸ್ಥಾಪಿಸಿರುವ ಪುಸ್ತಕಗಳ ಧ್ಯಾನಕೇಂದ್ರ ಉದ್ಘಾಟಿಸಿ ಮಾತನಾಡಿದರು. ಕೆಲವು ದಿನಗಳ ಹಿಂದೆ ನನ್ನ ಮೊಬೈಲ್‌ಗೆ ಎಸ್‌ಎಂಎಸ್ ಒಂದು ಬಂತು. ಅದರಲ್ಲಿ ನಾನು ಗಾಂಧೀಜಿ ಭಾವಚಿತ್ರವನ್ನು ಸಂಗ್ರಹಿಸುತ್ತಿದ್ದೇನೆ. ದಯವಿಟ್ಟು ನಿಮ್ಮ ಬಳಿ ಗಾಂಧಿ ಚಿತ್ರವಿರುವ ₹500 ಮತ್ತು ₹1000 ನೋಟುನ್ನು ಕೊಡುಗೆಯಾಗಿ ನೀಡಿ ಎಂದು ಕೇಳಿಕೊಂಡಿದ್ದರು. ಈ ಎಸ್‌ಎಂಎಸ್ ಓದಿ ನನಗೆ ಬಾರಿ ಬೇಸರ ಉಂಟಾಯಿತು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾನ್ ವ್ಯಕ್ತಿಯನ್ನು ಈ ರೀತಿ ಕೆಳಮಟ್ಟದಲ್ಲಿ ಕಾಣುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧೀ ಪ್ರೇರಣೆ: ಅಬ್ದುಲ್ ಕಲಾಂ ರಾಷ್ಟ್ರಪತಿಯಾಗಿದ್ದ ಸಂದರ್ಭದಲ್ಲಿ ದಕ್ಷಿಣ ಅಫ್ರಿಕಾಗೆ ಭೇಟಿ ನೀಡಿದ್ದರು.

ಆ ಸಂದರ್ಭದಲ್ಲಿ ನೆಲ್ಸನ್ ಮಂಡೆಲಾ ಅವರು 27ವರ್ಷ ಸೆರೆಮನೆ ವಾಸ ಅನುಭವಿಸಿದ್ದ 6 ಅಡಿ ಎತ್ತರ ಮತ್ತು 6 ಅಡಿ ಅಗಲದ ವಿಸ್ತೀರ್ಣದ ಜೈಲಿನಲ್ಲಿ ಕಳೆದ ಜೈಲನ್ನು ನೋಡಿ ಆಶ್ಚರ್ಯ ಪಟ್ಟರಂತೆ. ಅನಂತರ ಮಂಡೆಲಾ ಅವರನ್ನು ಭೇಟಿ ಮಾಡಿ ಇಷ್ಟು ವರ್ಷ ಹೇಗೆ ಈ ಜೈಲಿನಲ್ಲಿ ಕಾಲ ಕಳೆದಿರಿ ಎಂದು ಪ್ರಶ್ನಿಸಿದಾಗ ಇದೆಲ್ಲದಕ್ಕೂ ಗಾಂಧಿಜೀ ಪ್ರೇರಣೆ ಎಂದಿದ್ದರು. ಆದರೆ ನಮ್ಮ ದೇಶದಲ್ಲಿ ಮಾತ್ರ ರಾಷ್ಟ್ರಪಿತನ ಬಗ್ಗೆ ಕೀಳು ಅಭಿರುಚಿಯ ಸಂದೇಶ ರವಾನಿಸುತ್ತಿರುವುದು ವಿಷಾದನೀಯ ಎಂದರು.

ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊ. ಶ್ರೀನಿವಾಸಯ್ಯ ಮಾತನಾಡಿ, ಯುವಕರಿಗೆ ಗಾಂಧಿ ವಿಚಾರಧಾರೆಗಳನ್ನು ತಿಳಿದುಕೊಳ್ಳುವ ಆಸಕ್ತಿ ಇದೆ.


ಹೀಗಾಗಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಪಂಚಾಯ್ತಿ ಕೇಂದ್ರಗಳಲ್ಲಿ ಗಾಂಧೀಜಿ ಅವರ ಪುಸ್ತಕಗಳನ್ನು ಇಡಬೇಕೆಂದು ಅಭಿಪ್ರಾಯಪಟ್ಟರು. ಗ್ರಂಥಾಲಯ ಇಲಾಖೆ ಸಚಿವ ರೇವುನಾಯಕ್ ಬೆಳಮಗಿ, ಗಾಂಧೀಜಿ ಅವರದ್ದು ಮಹಾನ್ ವ್ಯಕ್ತಿತ್ವ

ಅವರ ಬಗೆಗಿನ ಪುಸ್ತಕಗಳನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು ಎಂದರು. ಸಮಾರಂಭದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಕೆ.ಜಿ. ವೆಂಕಟೇಶ್, ಸಾಹಿತಿ ಶೂದ್ರ ಶ್ರೀನಿವಾಸ್, ಗಾಂಧೀ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ಗಾಂಧೀ ಗ್ರಂಥಾಲಯ: ಗಾಂಧೀ ಗ್ರಂಥಾಲಯದಲ್ಲಿ ಸುಮಾರು 45,000 ಪುಸ್ತಕಗಳು ಇವೆ. ಗಾಂಧೀಜಿ ಅವರು ನಡೆಸುತ್ತಿದ್ದ ಪತ್ರಿಕೆಗಳಾಗಿದ್ದ, ಯಂಗ್ ಇಂಡಿಯಾ ಮತ್ತು ಹರಿಜನದ ಪ್ರತಿಯನ್ನು ಗ್ರಂಥಾಲಯದಲ್ಲಿ ಕಾಣಬಹುದಾಗಿದೆ. ಬೇರೆ ಬೇರೆ ದೇಶದ ನಾಣ್ಯ, ಹೊ.ಶ್ರೀನಿವಾಸಯ್ಯ ಅವರು ಗಾಂಧೀಜಿ ಅವರನ್ನು ಭೇಟಿಮಾಡಲು ತೆರಳಿದ ಟ್ರೈನ್ ಟಿಕೇಟ್, ಗಾಂಧೀಜಿ ಅವರು ಬರೆದಿರುವ ಪತ್ರಗಳು ಸೇರಿದಂತೆ ಅತಿ ಹಳೆಯ ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯವಿದೆ.

ಸಂಯುಕ್ತ ಕರ್ನಾಟಕ | ಬೆಂಗಳೂರು 18-2-2012

ಗ್ರಂಥಾಲಯ ಕರ ಬಿಡುಗಡೆಗೆ ಆಗ್ರಹ



ಬೆಂಗಳೂರಿನ ಗಾಂಧಿ ಭವನದಲ್ಲಿ ಮಹಾತ್ಮ ಗಾಂಧಿ ಗ್ರಂಥಾಲಯದ ಉದ್ಘಾಟನಾ ಸಮಾರಂಭದಲ್ಲಿ ಸಚಿವರಾದ ಎಸ್. ಸುರೇಶ್ ಕುಮಾರ್, ರೇವೂನಾಯಕ ಬೆಳಮಗಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು, ಫೆ. 17 : ಸ್ಥಳೀಯ ಸಂಸ್ಥೆಗಳು ಉಳಿಸಿಕೊಂಡಿರುವ ಗ್ರಂಥಾಲಯ ಕರವನ್ನು ಬಿಡುಗಡೆ ಮಾಡಬೇಕು ಎಂದು ಗ್ರಂಥಾಲಯ ಸಚಿವ ರೇವೂನಾಯಕ್ ಬೆಳಮಗಿ ಆಗ್ರಹಿಸಿದ್ದಾರೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ಗಾಂಧಿ ಭವನದಲ್ಲಿ ಪುಸ್ತಕಗಳ ಧ್ಯಾನ ಕೇಂದ್ರ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಿಬಿಎಂಪಿ ಸೇರಿದಂತೆ ರಾಜ್ಯದ ಪಾಲಿಕೆಗಳಿಂದ ಗ್ರಂಥಾಲಯ ಕರ ಬಾಕಿ ಉಳಿದುಕೊಂಡಿದೆ. ಇದರಿಂದ ಗ್ರಂಥಾಲಯ ನಿರ್ವಹಣೆ ಕಷ್ಟಕರವಾಗಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯ ಕಟ್ಟಡಗಳು ದುರಸ್ತಿಯಾಗಬೇಕಾಗಿದೆ. ಕೆಲವೆಡೆ ಸ್ವಂತ ಕಟ್ಟಡ ಹೊಂದಬೇಕಾಗಿದೆ. ಇದಕ್ಕೆ ಹಣದ ಅವಶ್ಯಕತೆ ಇದೆ. ಈ ಹಿನ್ನೆಲೆಯಲ್ಲಿ ಗ್ರಂಥಾಲಯ ಇಲಾಖೆಗೆ ಬರಬೇಕಾದ ಬಾಕಿಯನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದರು.

ಹಗುರ ಎಸ್‌ಎಂಎಸ್ ಬೇಡ

ದೇಶ ವಿದೇಶಗಳಲ್ಲಿ ಗಣ್ಯರ ಸ್ಥಾನದಲ್ಲಿರುವ ಮಹಾತ್ಮಗಾಂಧಿ ಕುರಿತು ಹಗುರವಾಗಿ ಮಾತನಾಡುವುದಾಗಲೀ, ಅವರ ಕುರಿತು ಎಸ್‌ಎಂಎಸ್‌ಗಳನ್ನು ಕಳುಹಿಸುವುದಾಗಲೀ ಸರಿಯಲ್ಲ. ಗಾಂಧೀಜಿಯವರ ಹೆಸರನ್ನು ಕೀಳುಮಟ್ಟದಲ್ಲಿ ಬಿಂಬಿಸುವಂತೆ ಎಸ್‌ಎಂಎಸ್‌ಗಳು ರವಾನೆಯಾಗುತ್ತಿವೆ. ಇದು ಯುವಜನಾಂಗದಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತದೆ.

ಇಂತಹ ಬೆಳವಣಿಗೆಗಳು ಸರಿಯಾದ ಮಾರ್ಗವಲ್ಲ ಎಂದು ಕಾನೂನು ಸಚಿವ ಸುರೇಶ್ ಕುಮಾರ್ ಅಭಿಪ್ರಾಯಪಟ್ಟು ಮುಂದೆ ಇಂತಹ ಎಸ್‌ಎಂಎಸ್‌ಗಳನ್ನು ಕಳುಹಿಸುವುದನ್ನು ನಿಲ್ಲಿಸಬೇಕು ಎಂದು ತಾಕೀತು ಮಾಡಿದರು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೊ. ಶ್ರೀನಿವಾಸಯ್ಯ ಮಾತನಾಡಿ, ಯುವಕರಿಗೆ ಗಾಂಧಿ ತತ್ವ ಆದರ್ಶಗಳ ಬಗ್ಗೆ ಆಸಕ್ತಿಯಿದೆ. ಆದರೆ, ಅದನ್ನು ಸೂಕ್ತ ರೀತಿಯಲ್ಲಿ ತಿಳಿಸುವ ಕೆಲಸವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ, ರಾಜ್ಯದ ಎಲ್ಲ ಗ್ರಂಥಾಲಯಗಳಲ್ಲಿ ಗಾಂಧೀಜಿಯವರ ವಿಚಾರಧಾರೆಗಳಿರುವ ಗ್ರಂಥಗಳನ್ನಿಡಬೇಕು ಎಂದು ಸಲಹೆ ನೀಡಿದರು.

ಸಾಹಿತಿ ಶೂದ್ರ ಶ್ರೀನಿವಾಸ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ, ಗ್ರಂಥಾಲಯ ನಿರ್ದೇಶಕ ಕೆ.ಜಿ. ವೆಂಕಟೇಶ್, ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಸತೀಶ್ ಕುಮಾರ್ ಎಸ್. ಹೊಸಮನಿ ಮತ್ತಿತರರು ಉಪಸ್ಥಿತರಿದ್ದರು.

45 ಸಾವಿರ ಪುಸ್ತಕ

ಶುಕ್ರವಾರ ಉದ್ಘಾಟನೆಗೊಂಡ ಗಾಂಧಿ ಜೀವನ ಶಾಖಾ ಗ್ರಂಥಾಲಯದಲ್ಲಿ 45 ಸಾವಿರ ಪುಸ್ತಕಗಳಿವೆ. ಮಹಾತ್ಮ ಗಾಂಧೀಜಿಯವರ ಸಾಹಿತ್ಯ ಸ್ವಾತಂತ್ರ್ಯ ಸಂಗ್ರಾಮದ ಕೃತಿಗಳು, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಇನ್ನಿತರ ನಾಯಕರ ಕುರಿತ ಕೃತಿಗಳು ಇಲ್ಲಿ ಲಭ್ಯ. ಅಲ್ಲದೆ, ಗಾಂಧೀಜಿಯವರಿಗೆ ಸಂಬಂಧಿಸಿದ ಸಿಡಿಗಳು, ಭಾಷಣದ ತುಣುಕುಗಳ ಸಿಡಿಗಳೂ ಸಹ ಲಭ್ಯವಿವೆ.

ಸಂಜೆವಾಣಿ ಶುಕ್ರವಾರ 17 ಫೆಬ್ರವರಿ 2012

ಗ್ರಂಥಾಲಯಕರ ಬಿಡುಗಡೆಗೆ ಸಚಿವ ಬೆಳಮಗಿ ಆಗ್ರಹ



ನಗರದ ಗಾಂಧಿಭವನದಲ್ಲಿ ಇಂದು ಮಹಾತ್ಮಗಾಂಧಿ ಶಾಖಾ ಗ್ರಂಥಾಲಯವನ್ನು ಕಾನೂನು ಸಚಿವ ಸುರೇಶ್‌ಕುಮಾರ್ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಗ್ರಂಥಾಲಯ ಸಚಿವ ರೇವುನಾಯಕ್ ಬೆಳಮಗಿ ಮತ್ತಿತರರು ಇದ್ದಾರೆ.

ಗ್ರಂಥಾಲಯದಲ್ಲೇನಿದೆ

ಗಾಂಧೀ ಜೀವನ ಶಾಖಾ ಗ್ರಂಥಾಲಯದಲ್ಲಿ 45 ಸಾವಿರ ಪುಸ್ತಕಗಳಿವೆ. ಮಹಾತ್ಮ ಗಾಂಧೀಜಿಯವರ ಸಾಹಿತ್ಯ ಸ್ವಾತಂತ್ರ್ಯ ಸಂಗ್ರಾಮದ ಆಂದೋಲನದ ಕೃತಿಗಳು, ಅಲ್ಲದೆ ವಿಶ್ವದ ಅನೇಕ ನಾಯಕರ ಕೃತಿಗಳಿವೆ.

ಗಾಂಧೀಜಿಯವರಿಗೆ ಸಂಬಂಧಪಟ್ಟ ಸಿ.ಡಿಗಳು ಭಾಷಣದ ತುಣುಕುಗಳನ್ನು ಸಂಗ್ರಹಿಸಿಡಲಾಗಿದೆ.

ನಾಡಿನ ಯಾವುದೇ ಭಾಗದ ಆಸಕ್ತರು, ವಿಶೇಷವಾಗಿ ವಿದ್ಯಾರ್ಥಿಗಳು, ಸಂಶೋಧಕರು, ರಾಜಕಾರಣಿಗಳು ಇದರ ಪ್ರಯೋಜನ ಪಡೆದುಕೊಳ್ಳಬಹುದು.

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಫೆ.೧೭- ಬಿಬಿಎಂಪಿ ಸೇರಿದಂತೆ ರಾಜ್ಯದ ಮಹಾನಗರ ಪಾಲಿಕೆಗಳಿಂದ ಗ್ರಂಥಾಲಯ ಇಲಾಖೆಗೆ ಬರಬೇಕಾದ 'ಗ್ರಂಥಾಲಯಕರ'ವನ್ನು ಬಿಡುಗಡೆ ಮಾಡಬೇಕೆಂದು ಗ್ರಂಥಾಲಯ ಮತ್ತು ಪಶುಸಂಗೋಪನಾ ಸಚಿವ ರೇವೂನಾಯಕ್ ಬೆಳಮಗಿರವರು ಆಗ್ರಹಪಡಿಸಿದ್ದಾರೆ.

ಮಹಾನಗರಪಾಲಿಕೆಗಳು ಸಂಗ್ರಹಿಸುವ ಗ್ರಂಥಾಲಯಕರವನ್ನು ಬಾಕಿ ಉಳಿಸಿಕೊಂಡಿರುವುದರಿಂದ ಗ್ರಂಥಾಲಯ ನಿರ್ವಹಣೆ ಕಷ್ಟಕರವಾಗಿದೆ ಎಂದವರು ತಿಳಿಸಿದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ಗಾಂಧೀಭವನದಲ್ಲಿ ಪುಸ್ತಕಗಳ ಧ್ಯಾನ ಕೇಂದ್ರ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯಗಳಿದ್ದರೂ ಕಟ್ಟಡಗಳು ದುರಸ್ತಿಯಾಗಬೇಕಿದೆ. ಹಾಗಾಗಿ ಸ್ವತಃ ಗ್ರಂಥಾಲಯ ಕಟ್ಟಡ ಹೊಂದಲು ಹಾಗೂ ಇರುವ ಕಟ್ಟಡಗಳ ರಿಪೇರಿಗಾಗಿ ಇಲಾಖೆಗೆ ಹಣದ ಅವಶ್ಯಕತೆಯಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಜೀವನದಲ್ಲಿ ಗುರಿಯಿಟ್ಟುಕೊಂಡಾಗ ಮಾತ್ರ ಏನಾದರೂ ಸಾಧಿಸಲು ಸಾಧ್ಯ ಎಂದು ಸಚಿವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಾನೂನು ಸಂಸದೀಯ ವ್ಯವಹಾರಗಳ ಸಚಿವ ಎಸ್. ಸುರೇಶ್‌ಕುಮಾರ್‌ರವರು ಮಹಾತ್ಮಗಾಂಧೀಜಿಯವರ ಒಂದಂಶವನ್ನು ಜೀವನದಲ್ಲಿ ಅಳವಡಿಕೊಂಡರೆ ಸಾಕು. ಅವರು ಸಮಾಜದ ಅಮೂಲ್ಯ ಆಸ್ತಿಯಾಗುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯರವರು ಮಾತನಾಡಿ ಗಾಂಧೀಭವನದ ಈ ಶಾಖಾ ಗ್ರಂಥಾಲಯ ಸ್ಥಾಪನೆ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಗ್ರಂಥಾಲಯ ಇಲಾಖೆಯು ಇನ್ನೊಂದು ಸಂಸ್ಥೆ ಜತೆ ಸೇರಿ ಗ್ರಂಥಾಲಯ ಸ್ಥಾಪಿಸಿದ ಉದಾಹರಣೆ ಭಾರತದಲ್ಲಿ ಉದಾಹರಣೆ ಇದ್ದಂತಿಲ್ಲ ಎಂದರು.

ಯುವಕರಿಗೆ ಗಾಂಧಿ ತತ್ವ ಆದರ್ಶಗಳ ಬಗ್ಗೆ ಆಸಕ್ತಿಯಿದೆ ಆದರೆ ಅದನ್ನು ಸೂಕ್ತ ರೀತಿಯಲ್ಲಿ ತಿಳುವಳಿಕೆ ನೀಡುವ ಕೆಲಸ ಆಗುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ರಾಜ್ಯದ ಎಲ್ಲ ಜಿಲ್ಲಾ, ಗ್ರಾಮ ಪಂಚಾಯಿತಿ ಹಾಗೂ ಕೇಂದ್ರ ಗ್ರಂಥಾಲಯಗಳಲ್ಲಿ ಗಾಂಧಿ ವಿಚಾರಧಾರೆಯುಳ್ಳ ಗ್ರಂಥಗಳನ್ನಿಡಬೇಕು ಎಂದು ಒತ್ತಾಯಿಸಿದರು.

ಸಮಾರಂಭದಲ್ಲಿ ಸಾಹಿತಿ ಶೂದ್ರ ಶ್ರೀನಿವಾಸ್, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ವೂಡೇ ಪಿ. ಕೃಷ್ಣ, ನಗರ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕ ಸತೀಶ್‌ಕುಮಾರ್, ಎಸ್. ಹೊಸಮನಿ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಕೆ.ಜಿ. ವೆಂಕಟೇಶ್ ಸ್ವಾಗತಿಸಿದರು.

ಗಾಂಧಿಜೀಯವರ ಬಗ್ಗೆ ಹಗುರ ಎಸ್‌ಎಂಎಸ್‌ಗಳು ಬೇಡ



ಗಾಂಧಿಭವನದಲ್ಲಿ ಮಹಾತ್ಮಗಾಂಧೀ ಶಾಖಾ ಗ್ರಂಥಾಲಯವನ್ನು ಸಚಿವರಾದ ರೇವೂ ನಾಯಕ ಬೆಳಮಗಿ, ಎಸ್.ಸುರೇಶ್‌ಕುಮಾರ್ ಉದ್ಘಾಟಿಸಿದರು. ಅಧ್ಯಕ್ಷ ಹೋ.ಶ್ರೀನಿವಾಸಯ್ಯ, ವೂಡೆ ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.

ಬೆಂಗಳೂರು, ಫೆ.17– ದೇಶ ವಿದೇಶಗಳ ಗಣ್ಯ ನಾಯಕರು ಮಹಾತ್ಮ ಗಾಂಧಿಯವರ ಆದರ್ಶ ಗಳಿಂದ ಪ್ರೇರಣೆ ಪಡೆದಿದ್ದಾರೆ. ಹೀಗಿದ್ದರೂ ಗಾಂಧಿ ಕ್ಲಾಸ್ ಎನ್ನುವ ಮೂಲಕ ಮಹಾತ್ಮರ ಬಗ್ಗೆ ಹಗುರವಾಗಿ ಮಾತನಾಡುವುದು ದುರ್ದೈವ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಸುರೇಶ್ ಕುಮಾರ್ ವಿಷಾದಿಸಿದರು.

ನಗರದ ಗಾಂಧಿ ಭವನದಲ್ಲಿ ಮಹಾತ್ಮಗಾಂಧಿ ಶಾಖಾ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಾಂಧಿಜೀಯವರ ಹೆಸರನ್ನು ಕೀಳು ಮಟ್ಟದಲ್ಲಿ ಬಿಂಬಿಸುವ ಎಸ್‌ಎಂಎಸ್‌ಗಳು ರವಾನೆಯಾಗುತ್ತಿವೆ. ಇದು ಯುವ ಜನಾಂಗದಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತದೆ ಎಂದು ವಿಷಾದಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ರೈಲಿನಿಂದ ನೂಕಲ್ಪಟ್ಟ ಗಾಂಧಿಜೀಯವರಿಗೆ ಸ್ವಾಭಿಮಾನ ಕೆರಳಿತ್ತು. ಅಲ್ಲಿಂದ ಭಾರತ ಸ್ವಾತಂತ್ರ್ಯ ಹೋರಾಟ ಆರಂಭಿಸಿದರು. ಅಹಿಂಸೆಯ ಮೂಲಕ ಬ್ರಿಟಿಷರನ್ನು ಗೆದ್ದು ವಿಶ್ವಕ್ಕೆ ಮಹಾನ್ ಸಂದೇಶ ಸಾರಿದರು. ಇವರನ್ನು ನೆಲ್ಸನ್‌ಮಂಡೇಲರಿಂದ ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರೆಗೆ ಎಲ್ಲರೂ ಅನುಸರಿಸುತ್ತಾರೆ. ದೇಶದಲ್ಲಷ್ಟೆ ಅಲ್ಲದೆ ವಿದೇಶಗಳಲ್ಲೂ ಮಹಾನ್ ನಾಯಕರು ಮಹಾತ್ಮರನ್ನು ಅನುಸರಿಸುತ್ತಾರೆ ಎಂದು ವಿವರಿಸಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಹೋ.ಶ್ರೀನಿವಾಸಯ್ಯ ಮಾತನಾಡಿ, ಗಾಂಧಿ ತತ್ವ ಮತ್ತು ಆದರ್ಶಗಳು ಯುವ ಜನತೆಗೆ ಆದರ್ಶವಾಗಬೇಕು ಎಂದರು.

ಪಂಚಾಯತ್ ಕಚೇರಿಯಲ್ಲಿರುವ ಗ್ರಂಥಾ ಲಯಗಳಲ್ಲಿ ಮಹಾತ್ಮರ ಪುಸ್ತಕಗಳನ್ನು ಇಟ್ಟು ಓದುಗರಿಗೆ ತಲುಪಿಸಬೇಕು. ಶಾಲೆಗಳಲ್ಲೂ ಗಾಂಧಿ ಗ್ರಂಥಾಲಯ ಸ್ಥಾಪಿಸಬೇಕು. ವಿದ್ಯಾರ್ಥಿಗಳಿಗೆ ಗಾಂಧಿಜೀಯವರ ನೀತಿಗಳನ್ನು ವಿವರಿಸುವ ಕೆಲಸ ಇನ್ನಷ್ಟು ಪರಿಣಾಮಕಾರಿಯಾಗಿ ನಡೆಯಬೇಕು ಎಂದರು. ಸಚಿವ ರೇವುನಾಯಕ್ ಬೆಳಮಗಿ, ಸಾರ್ವ ಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಕೆ.ಜಿ.ವೆಂಕಟೇಶ್, ಸಾಹಿತಿ ಶೂದ್ರ ಶ್ರೀನಿವಾಸ್, ಗಾಂಧಿ ಶಾಂತಿ ಪ್ರತಿಷ್ಠಾನದ ವೂಡೆ. ಪಿ.ಕೃಷ್ಣ ಮತ್ತಿತರರು ಭಾಗವಹಿಸಿದ್ದರು.

ಈ ಸಂಜೆ 5

ಮಂಗಳವಾರ, 07 ಫೆಬ್ರವರಿ, 2012



ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಕಾಲೇಜಿನಲ್ಲಿ ಕೆ.ಎಂ.ನಂಜಪ್ಪನವರ ಜನ್ಮ ಶತಮಾನೋತ್ಸವ ಅಂಗವಾಗಿ ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ರಾಜ್ಯಪ್ರಶಸ್ತಿ ಪುರಸ್ಕೃತ ರಕ್ತದಾನ ಸಂಘಟಕ ಡಾ.ರಾಜು ಚಂದ್ರಶೇಖರ್ ಉದ್ಘಾಟಿಸಿದರು. ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ, ಪ್ರೊ.ಚಂದ್ರಿಕಾ ಪುರಾಣಿಕ್ ಮತ್ತಿತರರು ಹಾಜರಿದ್ದರು.

ಸಂಜೆವಾಣಿ ಶನಿವಾರ 4 ಫೆಬ್ರುವರಿ 2012

ಮಹಾತ್ಮಗಾಂಧಿ ಯುವ ಶಿಬಿರ ಉದ್ಘಾಟನೆ

ಬೆಂಗಳೂರು, ಫೆ. ೪- ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ವಿಶ್ವನೀಡಂ ಅಂತಾರಾಷ್ಟ್ರೀಯ ಸರ್ವೋದಯ ಕೇಂದ್ರ "ಮಹಾತ್ಮಗಾಂಧಿ ತತ್ವ ಪ್ರಣೀತ ಯುವ ಪ್ರೇರಣಾ ಶಿಬಿರ"ದ ಉದ್ಘಾಟನಾ ಸಮಾರಂಭವನ್ನು ನಾಳೆ ಬೆ. 10.30ಕ್ಕೆ ಮಾಗಡಿ ರಸ್ತೆಯ ವಿಶ್ವನೀಡಂ ಅಂತಾರಾಷ್ಟ್ರೀಯ ಸರ್ವೋದಯ ಕೇಂದ್ರದಲ್ಲಿ ಹಮ್ಮಿಕೊಂಡಿದೆ. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಬ್ರಹ್ಮವಿದ್ಯಾ ಮಂದಿರದ ಸಂಸ್ಥಾಪಕಿ ಉಷಾ ಬೆಹನ್‌ಜಿ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ, ಬ್ರಹ್ಮವಿದ್ಯಾ ಮಂದಿರದ ಟ್ರಸ್ಟಿ ಗೌತಮ್ ಬಾಲಾಜಿ, ಡಾ. ಕೆ.ಬಿ. ಧನಂಜಯಪ್ಪ ಹಾಗೂ ಖದ್ರಿ ನರಸಿಂಹಯ್ಯರವರು ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ಎಚ್. ಶ್ರೀನಿವಾಸಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಈ ಶಿಬಿರವು ಫೆ. 11ರ ವರೆಗೆ ನಡೆಯಲಿದ್ದು, ಪ್ರತಿದಿನ ಗಾಂಧಿ ಬಗ್ಗೆ ವಿಶೇಷ ವ್ಯಕ್ತಿಗಳಿಂದ ಉಪನ್ಯಾಸ ಏರ್ಪಡಿಸಲಾಗಿದೆ.

ಪ್ರಜಾವಾಣಿ
ಬುಧವಾರ 25ನೇ ಜನವರಿ 2012

ಶಿಬಿರ



ಶೇಷಾದ್ರಿಪುರ ಸಂಜೆ ಪದವಿ ಕಾಲೇಜು ಈಚೆಗೆ ಆಯೋಜಿಸಿದ್ದ ಹೃದಯ, ಮಧುಮೇಹ ಶಿಬಿರವನ್ನು ವೈದ್ಯ ಡಾ.ಮಹಾಂತೇಶ್ ಚರಂತಿಮಠ ಉದ್ಘಾಟಿಸಿದರು. ರಕ್ತದಾನಿಗಳ ಸಂಘದ ಅಧ್ಯಕ್ಷ ರಾಜು ಚಂದ್ರಶೇಖರ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಡಾ.ವೂಡೇ ಪಿ.ಕೃಷ್ಣ ಇತರರು ಚಿತ್ರದಲ್ಲಿದ್ದಾರೆ

ಸಂಯುಕ್ತ ಕರ್ನಾಟಕ | ಬೆಂಗಳೂರು

ಸೋಮವಾರ | 23-01-2012

ಕಾಯಿಲೆಗಳಿಗೆ ಪಾಶ್ಚಿಮಾತ್ಯ ಸಂಸ್ಕೃತಿ ಕಾರಣ

ಬೆಂಗಳೂರು, ಜ. 22: ಪಾಶ್ಚಿಮಾತ್ಯ ಸಂಸ್ಕೃತಿಯತ್ತ ಹೆಚ್ಚು ಒಲವು ತೋರುತ್ತಿರುವುದರಿಂದ ಅನೇಕ ಕಾಯಿಲೆಗಳಿಗೆ ರಹದಾರಿಯಾಗಿದೆ ಎಂದು ಹೃದ್ರೋಗತಜ್ಞ ಡಾ. ಮಹಾಂತೇಶ ಚರಂತಿಮಠ ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಸೇವಾ ಯೋಜನಾ ಘಟಕ ಚೇತನಾ, ವನಿತಾ ವಿಕಾಸ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಹೃದಯ ಮತ್ತು ಮಧುಮೇಹ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು ಇತ್ತೀಚಿನ ದಿನಗಳಲ್ಲಿ ಯುವಕರು ಪಾಶ್ಚಿಮಾತ್ಯ ಸಂಸ್ಕೃತಿಗೆ ಒಳಗಾಗಿ ದೇಸಿ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ. ಪಾಶ್ಚಿಮಾತ್ಯ ಸಂಸ್ಕೃತಿ ಮಾತ್ರವಲ್ಲದೆ ಅಲ್ಲಿನ ಆಹಾರ ಪದ್ಧತಿಗೂ ಒಲವು ತೋರಿರುವುದರಿಂದ ಹೃದಯ ಸಂಬಂಧಿ ಕಾಯಿಲೆಗಳಿಗೆ ಒಳಗಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಜೀವನದಲ್ಲಿ ಒಳ್ಳೆಯದರ ಬಗ್ಗೆ ಯೋಚಿಸದೇ ವಿವೇಕತನದಿಂದ ವರ್ತಿಸುವುದನ್ನು ಕಲಿತಲ್ಲಿ ಹಲವು ಕಾಯಿಲೆಗಳನ್ನು ದೂರ ಇಡಬಹುದು. ಅಲ್ಲದೆ ಕಷ್ಟದಲ್ಲಿರುವ ಜನರಿಗೆ ಸಹಾಯ ಮಾಡಲು ಸಾಧ್ಯವಾಗಲಿದೆ. ಎಂದರಲ್ಲದೆ, ಪಾಶ್ಚಾತ್ಯ ಮೋಡಿಗೆ ಒಳಗಾಗಿರುವ ಯುವಜನತೆಯನ್ನು ಸರಿದಾರಿಗೆ ತರುವ ಹೊಣೆಗಾರಿಕೆ ಸಂಘಸಂಸ್ಥೆಗಳ ಮೇಲಿದೆ ಎಂದರು.

ಕರ್ನಾಟಕ ಸ್ವಯಂಪ್ರೇರಿತ ರಕ್ತದಾನಿಗಳ ಸಂಸ್ಥೆ ಅಧ್ಯಕ್ಷ ರಾಜು ಚಂದ್ರಶೇಖರ್ ಮಾತನಾಡಿ, ಪ್ರತಿಯೊಬ್ಬರಲ್ಲೂ ಹೃದಯವಂತಿಕೆ ಇರಬೇಕು. ಇಲ್ಲವಾದರೆ ಉತ್ತಮ ಸಾಧನೆ ಮಾಡಲು ಸಾಧ್ಯವಿಲ್ಲ ಎಂದರು.

ಆರೋಗ್ಯದ ಬಗ್ಗೆ ಪ್ರತಿಯೊಬ್ಬರೂ ಮುಂಜಾಗ್ರತೆ ವಹಿಸುವ ಅಗತ್ಯವಿದೆ. ಆರೋಗ್ಯ ಇದ್ದರೆ ಜೀವನದಲ್ಲಿ ಏನನ್ನಾದರೂ ಸಾಧನೆ ಮಾಡಬಹುದು. ಈ ಹಿನ್ನೆಲೆಯಲ್ಲಿ ಶಿಸ್ತುಬದ್ಧ ಜೀವನಕ್ಕೆ ಆದ್ಯತೆ ನೀಡಬೇಕು ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ತಿಳಿಸಿದರು.



ಬೆಂಗಳೂರಿನ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನಲ್ಲಿ ಭಾನುವಾರ ಆಯೋಜಿಸಲಾಗಿದ್ದ ಹೃದಯ ಮತ್ತು ಮಧುಮೇಹ ತಪಾಸಣಾ ಶಿಬಿರದಲ್ಲಿ ಎನ್.ಆರ್. ಪಂಡಿತಾರಾಧ್ಯ, ರಾಜು ಚಂದ್ರಶೇಖರ್, ಡಾ. ಮಹಾಂತೇಶ ಚರಂತಿಮಠ, ವೂಡೇ ಪಿ. ಕೃಷ್ಣ, ಪ್ರೊ. ಚಂದ್ರಿಕಾ ಮರಾಠೆ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಶುಕ್ರವಾರ 20ನೇ ಜನವರಿ 2012

ಯುವ ಜಾಗೃತಿ ಕಾರ್ಯಕ್ರಮ

ಯಲಹಂಕ: ಯುವಕರನ್ನು ಸಾಮಾಜಿಕ ಜವಾಬ್ದಾರರನ್ನಾಗಿ ಮಾಡಬೇಕಾದುದು ಶಿಕ್ಷಣದ ಗುರಿಯಾಗಿರಬೇಕು ಎಂದು ಹಲಸೂರು ರಾಮಕೃಷ್ಣ ಮಠದ ಪರಮ ಸುಖಾನಂದ ಸ್ವಾಮೀಜಿ ಪ್ರತಿಪಾದಿಸಿದರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 'ಯುವಜಾಗೃತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಗೌರವ ಪ್ರಧಾನಕಾರ್ಯದರ್ಶಿ ವೂಡೆ.ಪಿ. ಕೃಷ್ಣ ಮಾತನಾಡಿ, ಶಿಕ್ಷಣದ ಬೇರುಗಳು ಕಹಿಯಾಗಿದ್ದರೂ ಅದರ ಫಲಗಳು ಎಂದಿಗೂ ಸಿಹಿಯಾಗಿರುತ್ತವೆ. ಯುವಕರು ವಿದ್ಯಾರ್ಥಿ ದೆಸೆಯಲ್ಲಿ ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳನ್ನು ಅಭ್ಯಸಿಸಿ, ತಮ್ಮದಾಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಅಲಸೂರು ರಾಮಕೃಷ್ಣ ಮಠದ ಧರ್ಮ ವ್ರತಾನಂದಜಿ ಸ್ವಾಮೀಜಿ, ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಬ್ರಹ್ಮಚಾರಿ ಕೃಷ್ಣಮಹಾರಾಜ್ ಸ್ವಾಮೀಜಿ, ವಿವೇಕಾನಂದರ ಕುರಿತ ಏಕಪಾತ್ರಾಭಿನಯ ಮಾಡುವುದರ ಮೂಲಕ ಅವರ ಸಂದೇಶಗಳನ್ನು ಬಿತ್ತರಿಸಿದರು. ಕಾರ್ಪೊರೇಟ್ ಕಂಪನಿಗಳ ತರಬೇತುದಾರ ರಮೇಶ್ ಉಮ್ರಾಣಿ, ಪ್ರಾಂಶುಪಾಲ ಡಾ.ಎಂ.ಪ್ರಕಾಶ್, ಉಪ ಪ್ರಾಂಶುಪಾಲ ಪ್ರೊ.ವೆಂಕಟೇಶ್ ಇದ್ದರು.




ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 'ಯುವಜಾಗೃತಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

ಗುರುವಾರ, 19 ಜನವರಿ 2012 | ಕನ್ನಡಪ್ರಭ

ಅಭಿನಂದನೆ...

ಬೆಂಗಳೂರು ವಿಶ್ವವಿದ್ಯಾಲಯ ಆಯೋಜಿಸಿದ್ದ ಅಂತರ ಕಾಲೇಜು ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಶೇಷಾದ್ರಿಪುರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಮತ್ತು ವಿದ್ಯಾರ್ಥಿಗಳ ಯೋಗ ತಂಡಗಳಿಗೆ ಕಾಲೇಜು ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿತು. ಈ ವೇಳೆ ಯೋಗ ತರಬೇತುದಾರ ಬಾಬು, ಕಾಲೇಜಿನ ಶಿಕ್ಷಣ ನಿರ್ದೇಶಕ ಡಾ. ವೂಡೇ ಪಿ.ಕೃಷ್ಣ, ಪಿ.ವಿ. ಸರಸ್ವತಿ, ಚರಣ್ ಇತರರು ಇದ್ದರು.



ಸಂಜೆವಾಣಿ
ಬುಧವಾರ 18 ಜನವರಿ 2012



ನಗರದ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು ಗಾಂಧೀ- ವಿವೇಕಾನಂದ ಅಧ್ಯಯನ ಕೇಂದ್ರವು ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಹಲಸೂರು ರಾಮಕೃಷ್ಣ ಮಠದ ಸ್ವಾಮಿ ಪರಮ ಸುಖಾನಂದ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸ್ವಾಮಿ ಬ್ರಹ್ಮವ್ರತಾನಂದ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ಪ್ರಾಚಾರ್ಯ ಪ್ರೊ. ಎಸ್. ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಈ ಸಂಜೆ

ಮಂಗಳವಾರ, 17 ಜನವರಿ, 2012



ದಿ.ಜಾನ್ ಕಾಲೇಜಿನಲ್ಲಿ ಆಯೋಜಿಸಿದ್ದ ಬೆಂಗಳೂರು ವಿಶ್ವವಿದ್ಯಾಲಯ ಅಂತರಕಾಲೇಜು ಯೋಗ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದ ಶೇಷಾದ್ರಿಪುರಂ ಪದವಿ ಕಾಲೇಜಿನ ಮಹಿಳಾ ಮತ್ತು ಪುರುಷರ ತಂಡದೊಂದಿಗೆ ಯೋಗ ತರಬೇತುದಾರ ಬಾಬು, ದೈಹಿಕ ಶಿಕ್ಷಣ ನಿರ್ದೇಶಕರಾದ ಸರಸ್ವತಿ, ಚರಣ್, ಕಾಲೇಜಿನ ಡಾ.ವೂಡೆ.ಪಿ.ಕೃಷ್ಣ, ಪ್ರಾಂಶುಪಾಲ ಪ್ರೊ.ರಾಜನ್ ಇದ್ದರು.

ಸಂಜೆವಾಣಿ

ಸೋಮವಾರ 16 ಜನವರಿ 2012



ಡಿ. ಜಾನ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಬೆಂಗಳೂರು ವಿಶ್ವವಿದ್ಯಾಲಯ ಅಂತರ ಕಾಲೇಜು ಯೋಗ ಸ್ಪರ್ಧೆಯಲ್ಲಿ ಶೇಷಾದ್ರಿಪುರಂ ಪದವಿ ಕಾಲೇಜಿನ ಮಹಿಳಾ ಮತ್ತು ಪುರುಷರ ಯೋಗ ತಂಡವು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನೀಡುವ 12 ಪ್ರಶಸ್ತಿಗಳ ಪೈಕಿ 7 ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು. ಪ್ರಶಸ್ತಿ ಪಡೆದುಕೊಂಡ ವಿದ್ಯಾರ್ಥಿಗಳೊಂದಿಗೆ ಕಾಲೇಜಿನ ಯೋಗ ತರಬೇತುದಾರ ಬಾಬು, ದೈಹಿಕ ಶಿಕ್ಷಣ ನಿರ್ದೇಶಕಿ ಪಿ.ವಿ. ಸರಸ್ವತಿ, ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಂಶುಪಾಲ ಪ್ರೊ. ಎಂ.ಡಿ. ರಾಜನ್, ದೈಹಿಕ ಶಿಕ್ಷಣ ನಿರ್ದೇಶಕ ಚರಣ್ ಚಿತ್ರದಲ್ಲಿದ್ದಾರೆ.

ಶನಿವಾರ, 14 ಜನವರಿ 2012 | ಕನ್ನಡಪ್ರಭ

ಜನ್ಮ ದಿನಾಚರಣೆ...


ಶೇಷಾದ್ರಿಪುರ ಪದವಿ ಪೂರ್ವ ಕಾಲೇಜು ಗಾಂಧಿ– ವಿವೇಕಾನಂದ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ ವಿವೇಕಾನಂದರ 150 ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ರಾಮಕೃಷ್ಣಮಠದ ಪರಮಸುಖಾನಂದ ಸ್ವಾಮಿ ಉದ್ಘಾಟಿಸಿದರು. ಬ್ರಹ್ಮವ್ರತಾನಂದ, ಡಾ.ವೂಡೇ ಪಿ.ಕೃಷ್ಣ, ಪ್ರೊ.ಎಸ್.ಸುರೇಶ್ ಇತರರು ಹಾಜರಿದ್ದರು.



ಶನಿವಾರ, 14 ಜನವರಿ 2012 | ಕನ್ನಡಪ್ರಭ

ಜನ್ಮದಿನಾಚರಣೆ...

ಶೇಷಾದ್ರಿಪುರ ಪದವಿ ಪೂರ್ವ ಕಾಲೇಜು ಗಾಂಧಿ– ವಿವೇಕಾನಂದ ಅಧ್ಯಯನ ಕೇಂದ್ರದ ಸಹಯೋಗದೊಂದಿಗೆ ಆಯೋಜಿಸಿದ್ದ ವಿವೇಕಾನಂದರ 150 ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ರಾಮಕೃಷ್ಣಮಠದ ಪರಮಸುಖಾನಂದ ಸ್ವಾಮಿ ಉದ್ಘಾಟಿಸಿದರು. ಬ್ರಹ್ಮವ್ರತಾನಂದ, ಡಾ.ವೂಡೇ ಪಿ.ಕೃಷ್ಣ, ಪ್ರೊ.ಎಸ್.ಸುರೇಶ್ ಇತರರು ಹಾಜರಿದ್ದರು.



ಈ ಸಂಜೆ
ಬುಧವಾರ, 11 ಜನವರಿ, 2012



ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಬಿ.ಸಿ.ಮೈಲಾರಪ್ಪ ಅವರನ್ನು ಸನ್ಮಾನಿಸಲಾಯಿತು. ಶಿಕ್ಷಣ ದತ್ತಿಯ ಗೌರವ ಕಾರ್ಯದರ್ಶಿ ಡಾ.ವೂಡೆ.ಪಿ.ಕೃಷ್ಣ, ಪಂಡಿತಾರಾಧ್ಯ, ಪಾರ್ಥಸಾರಥಿ, ರಾಮಕೃಷ್ಣ, ಪ್ರಾಚಾರ್ಯ ಪ್ರೊ. ಮಹಾಲಕ್ಷ್ಮಿ ಉಪಸ್ಥಿತರಿದ್ದರು.

ಈ ಸಂಜೆ
ಸೋಮವಾರ, 02 ಜನವರಿ, 2012



ರಾಷ್ಟ್ರಕವಿ ಕುವೆಂಪು ಅವರ 108ನೆ ಜಯಂತಿ ಅಂಗವಾಗಿ ಶೇಷಾದ್ರಿಪುರಂ ಕಾಲೇಜು ಕನ್ನಡ ಸಂಘ ಹಮ್ಮಿಕೊಂಡಿದ್ದ ಕುವೆಂಪು ನೆನಪು ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ. ಜಿ. ಅಶ್ವತ್ಥನಾರಾಯಣ ಕುವೆಂಪು ಅವರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿದರು. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಪ್ರಾಚಾರ್ಯ ಪ್ರೊ. ಎಂ. ಡಿ. ರಾಜನ್ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಡಾ. ನಾ. ಗೀತಾಚಾರ್ಯ ಉಪಸ್ಥಿತರಿದ್ದರು.